ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ನವೆಂಬರ್ 30 ಬುಧವಾರ 2022

₹4

ಸಂಪುಟ: 43 | ಸಂಚಿಕೆ: 223 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೀರ್ತನೆಗಳ ಮೂಲಕ ಜಾಗೃತಿ ಮೂಡಿಸಿದ ಕನಕದಾಸರು ಸದಾ ಸ್ಮರಣೀಯರು: ಜಿಟಿಡಿ



ಮೈಸೂರು, ನ.28(ಎಸ್‌ಬಿಡಿ)– ಸಮಾಜದಲ್ಲಿ ಜಾತಿ ಸಂಘರ್ಷವನ್ನು ತೊಡೆಯಲು ಕೀರ್ತನೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ ಭಕ್ತಶ್ರೇಷ್ಠ ಶ್ರೀ ಕನಕದಾಸರನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಆಶಿಸಿದರು.

ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದಲ್ಲಿ ಕನಕ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂದು ಪ್ರಶ್ನಿಸುವ ಮೂಲಕ ಜನರಲ್ಲಿ ಜಾತೀಯತೆ ಬೀಜವನ್ನು ಬಿತ್ತುವ ಕಾರ್ಯ ಮಾಡಿದ ಶ್ರೀ ಕನಕದಾಸರನ್ನು ನೆನೆಯಬೇಕು. ಅವರ ಕೀರ್ತನೆಗಳು ಸಾಮಾಜಿಕ ಪಿಡುಗುಗಳನ್ನು ತೊಡೆಯುವ ನಿಟ್ಟಿನಲ್ಲಿ ಇಂದಿಗೂ ಪ್ರಸ್ತುತ ಎಂದರು.

ದಾಸ ಶ್ರೇಷ್ಠರಾದ ಶ್ರೀ ಕನಕದಾಸರ ಜಯಂತಿಯನ್ನು ರಾಜ್ಯಾದ್ಯಂತ ಅತ್ಯಂತ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ನಾಡಿನ ಪ್ರಸಿದ್ಧ ಕೀರ್ತನೆಕಾರರಲ್ಲಿ ಶ್ರೀ ಕನಕದಾಸರು ಒಬ್ಬರಾಗಿದ್ದಾರೆ. ಜಾತಿ ವ್ಯವಸ್ಥೆ ತಪ್ಪು ಎಂಬುದನ್ನು ಸರಳ ಕೀರ್ತನೆಗಳ ಮೂಲಕ ಸಾರಿದ್ದಾರೆ. ಭಕ್ತಿ ಪಂಥದ ಪ್ರಮುಖ ಹರಿದಾಸರಾದ ಇವರು ಆಧುನಿಕ ಕರ್ನಾಟಕದ ಕವಿ, ತತ್ವಜ್ಞಾನಿ, ಸಂಗೀತಗಾರ, ಕೀರ್ತನೆಕಾರರಾಗಿ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ. ಎಲ್ಲರಿಗೂ ಅರ್ಥವಾಗಬೇಕೆಂಬ ದೃಷ್ಟಿಯಲ್ಲಿ ಸರಳ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಹಾಗಾಗಿ ಕನಕದಾಸರ ಕೀರ್ತನೆಗಳನ್ನು ಪುಟ್ಟ ಮಕ್ಕಳೂ ಇಷ್ಟಪಟ್ಟು ಆಸಕ್ತಿಯಿಂದ ಕೇಳುತ್ತಾರೆ ಎಂದು ತಿಳಿಸಿದರು.

75 ಲಕ್ಷ ಮಂಜೂರು: ಡಿ.ಸಾಲುಂಡಿ ಗ್ರಾಮದ ಅಭಿವೃದ್ಧಿಗೆ 75 ಲಕ್ಷ ರೂ. ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ನಂತರ ಶೀಘ್ರ ಕಾಮಗಾರಿ ಪ್ರಾರಂಭಿಸಲಾಗುವುದು. ಜೊತೆಗೆ ಹೆಚ್ಚುವರಿ ಅನುದಾನವೂ ಬಿಡುಗಡೆಯಾಗಿದ್ದು ವಿವಿಧ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ ಎಂದು ಇದೇ ವೇಳೆ ಜಿಟಿಡಿ ತಿಳಿಸಿದರು. ಸಮಾರಂಭದಲ್ಲಿ ಮುಖಂಡರಾದ ಕೋಟೆಹುಂಡಿ ಮಹದೇವು, ನಂಜುಂಡೇಗೌಡರು, ಕುಳ್ಳೇಗೌಡರು, ಗ್ರಾಪಂ ಸದಸ್ಯರಾದ ಬಸಪ್ಪ ಹಾಗೂ ಕೃಷ್ಣಮೂರ್ತಿ, ಕುಪ್ಪಯ್ಯನ ರವಿಕುಮಾರ್, ನಂಜಮ್ಮ, ಪೈಲ್ವಾನ್ ಬಸಪ್ಪ, ಕುಳ್ಳಯ್ಯನ ಭಾಸ್ಕರ್, ಕೆಂಚಪ್ಪನ ಪ್ರಭಾಕರ, ಸಣ್ಣಮುತ್ತನ ಸಿದ್ದರಾಮ, ಅಮರ್ ನಾಥ್, ಕುನ್ನೇಗೌಡನ ಸಿದ್ದರಾಮ, ಕಾಳಪ್ಪನ ಕುಮಾರ್, ಟಿವಿಎಸ್ ಬಸಪ್ಪ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಜನಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೆಚ್ಚಳಕ್ಕೆ ಆಗ್ರಹ; ಡಿ.5ರಂದು ದುಂಡು ಮೇಜಿನ ಸಭೆ



ಮೈಸೂರು,ನ.29(ಪಿಎಂ)– ಜನಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂದು ಒತ್ತಾಯಿಸಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಸದರಿ ಬೇಡಿಕೆ ಸಂಬಂಧ ಚರ್ಚಿಸಲು ಡಿಸೆಂಬರ್ 5ರಂದು ದುಂಡು ಮೇಜಿನ ಸಭೆ ಆಯೋಜಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಶೇ.4ರಿಂದ 5ರಷ್ಟಿರುವ ಮೇಲ್ವರ್ಗದವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿಂದುಳಿದ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರಸ್ತುತ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವು 2–ಎ ವರ್ಗಕ್ಕೆ ಶೇ.15ರಷ್ಟಿದ್ದು, ಇದನ್ನು ಶೇ.27ಕ್ಕೆ ಹೆಚ್ಚಳ ಮಾಡಬೇಕು. ಅದೇ ರೀತಿಯಲ್ಲಿ ಪ್ರವರ್ಗ 1ರ ಸಮುದಾಯಗಳಿಗೆ ಶೇ.4ರಷ್ಟು ಮೀಸಲಾತಿ ಇದ್ದು, ಇದನ್ನು ಶೇ.9ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಸುಪ್ರಿಂಕೋರ್ಟ್ ವಿಧಿಸಿರುವ ಶೇ.50ರ ಮೀಸಲಾತಿ ಮಿತಿ ದಾಟುವ ಅನಿವಾರ್ಯತೆ ಇಂದು ಸೃಷ್ಟಿಯಾಗಿದ್ದು, ಸರ್ಕಾರ ಇದನ್ನು ಕೋರ್ಟ್‌ನಲ್ಲಿ ಸಮರ್ಥಿಸಿಕೊಳ್ಳಬೇಕು. ಮೀಸಲಾತಿ ಹೆಚ್ಚಳಕ್ಕೆ ಸರ್ಕಾರದ ಮೇಲೆ ಒತ್ತಡ ಹೇರಲು ಅಂದು ಬೆಳಗ್ಗೆ 11ಕ್ಕೆ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಪಕ್ಷಾತೀತವಾಗಿ ಹಿಂದುಳಿದ ವರ್ಗದವರ ದುಂಡು ಮೇಜಿನ ಸಭೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ವಿಶ್ವಕರ್ಮ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಮೋಗಣ್ಣಾಚಾರ್, ಕುಂಬಾರರ ಸಂಘದ ಅಧ್ಯಕ್ಷ ಪ್ರಕಾಶ್ ಗೋಷ್ಠಿಯಲ್ಲಿದ್ದರು.

ಡಿ.2ರಿಂದ 4ರವರೆಗೆ ರಾಜ್ಯ ರ‍್ಯಾಂಕಿಂಗ್ ಟೆನ್ನಿಸ್ ಪಂದ್ಯಾವಳಿ



ಮೈಸೂರು,ನ.29(ಪಿಎಂ)– ಕ್ರೆಡಾಯ್ ಮೈಸೂರು ಮಹಿಳಾ ಘಟಕ, ಯುವ ಘಟಕದ ವತಿಯಿಂದ ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಸಹಯೋಗದಲ್ಲಿ ಡಿ.2ರಿಂದ 4ರವರೆಗೆ ಮೈಸೂರಿನಲ್ಲಿ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೆನ್ನಿಸ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕ್ರೆಡಾಯ್ ಮೈಸೂರು ಮಹಿಳಾ ಘಟಕದ ಅಧ್ಯಕ್ಷೆ ಪೂರ್ಣಿಮಾ ವಿಶ್ವನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಪ್ರತಿಭೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಪಂದ್ಯಾವಳಿ ಆಯೋಜಿಸಲಾಗಿದೆ. ಮೈಸೂರಿನ ಮಾನಸಗಂಗೋತ್ರಿಯ ನಾಗರಾಜ್ ಟೆನ್ನಿಸ್ ಸೆಂಟರ್‌ನಲ್ಲಿ (ಎಸ್‌ಜೆಸಿಇ ಆವರಣ) ಪಂದ್ಯಾವಳಿ ನಡೆಯಲಿದೆ. 10, 12 ಮತ್ತು 14 ವರ್ಷದೊಳಗಿನ ಮೂರು ವಿಭಾಗಗಳಲ್ಲಿ ಪಂದ್ಯಾವಳಿ ನಡೆಯಲಿದ್ದು, ಇದರಲ್ಲಿ ಬಾಲಕ ಮತ್ತು ಬಾಲಕಿಯರ ಪ್ರತ್ಯೇಕ ವಿಭಾಗಗಳು ಸೇರಿದಂತೆ ಒಟ್ಟು 6 ವಿಭಾಗಗಳಲ್ಲಿ ಪಂದ್ಯಾವಳಿ ನಡೆಯಲಿದೆ ಎಂದರು. ರಾಜ್ಯದ ವಿವಿಧ ಭಾಗಗಳಿಂದ ಸುಮಾರು 150 ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈಗಾಗಲೇ 55 ಮಂದಿ ನೋಂದಣಿ ಮಾಡಿಕೊಂಡಿದ್ದು, ವಿನ್ನರ್ ಮತ್ತು ರನ್ನರ್ ಸ್ಥಾನ ಪಡೆಯುವವರಿಗೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣ ಪತ್ರ ದೊರೆಯಲಿದೆ. ನೋಂದಣಿಗೆ ನ.30 ಕಡೆ ದಿನವಾಗಿದೆ. ಹೆಚ್ಚಿನ ವಿವರಗಳಿಗೆ ಮೊ.ಸಂ. 99805 60668 ಅನ್ನು ಸಂಪರ್ಕಿಸಬಹುದು ಎಂದು ವಿವರಿಸಿದರು.

ಕ್ರೆಡಾಯ್ ಮೈಸೂರು ಉಪಾಧ್ಯಕ್ಷ ಶ್ರೀಹರಿ ಮಾತನಾಡಿ, ಹೆಚ್‌ಡಿ ಕೋಟೆ ತಾಲೂಕಿನ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳ ಹಾಸ್ಟೆಲ್ ನವೀಕರಣಕ್ಕಾಗಿ ನಮಗೆ ಮನವಿ ಸಲ್ಲಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಹಾಯಧನಕ್ಕಾಗಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕ್ರೆಡಾಯ್ ಮೈಸೂರು ಕಾರ್ಯದರ್ಶಿ ಹರೀಶ್ ಶೆಣೈ, ಮಹಿಳಾ ಘಟಕದ ಕಾರ್ಯದರ್ಶಿ ದಿವ್ಯ ಕುಮಾರಸ್ವಾಮಿ, ಖಜಾಂಚಿ ವಿಜಯಾ ಅಶ್ವಿನಿ ಮತ್ತಿತರರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಟ್ರಿಬಲ್ ರೈಡಿಂಗ್ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ

ಮೈಸೂರು,ನ.29(ಪಿಎಂ)– ಟ್ರಿಬಲ್ ರೈಡಿಂಗ್ ಸಿನಿಮಾಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸಿನಿಮಾದ ನಿರ್ದೇಶಕ ಮಹೇಶ್‌ಗೌಡ ತಿಳಿಸಿದರು.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಕುಟುಂಬ ಸಮೇತರಾಗಿ ನೋಡುವಂತಹ ಚಿತ್ರ ಇದಾಗಿದೆ. ಗೋಲ್ಡನ್ ಸ್ಟಾರ್ ಗಣೇಶ್ ನಾಯಕರಾಗಿ ಅಭಿನಯಿಸಿರುವ ಈ ಚಿತ್ರದಲ್ಲಿ ದೊಡ್ಡ ತಾರಾ ಬಳಗದ ಅಭಿನಯವಿದೆ. ಚಿತ್ರದಲ್ಲಿ ಮನರಂಜನೆಗೆ ಹೆಚ್ಚಿನ ಒತ್ತು ನೀಡಿದ್ದು, ಇದು ಪ್ರೇಕ್ಷಕರಿಗೆ ಮೆಚ್ಚುಗೆಯಾಗಿದೆ ಎಂದು ತಿಳಿಸಿದರು. ಚಿತ್ರದ ನಾಯಕಿಯರಾದ ಮೇಘಾ ಶೆಟ್ಟಿ, ರಚನಾ ಸುದ್ದಿಗೋಷ್ಠಿಯಲ್ಲಿದ್ದರು.

ಅಣೆಕಟ್ಟೆಗಳ ಪುನರುಜ್ಜೀವನ, ಸಶಕ್ತಿ, ರಿಪೇರಿ ಕುರಿತ ವಿಚಾರ ಸಂಕಿರಣ

ಕೆಆರ್‌ಎಸ್ ಡ್ಯಾಂ ಸುರಕ್ಷತೆ ಬಗ್ಗೆ ತಜ್ಞರ ಸುದೀರ್ಘ ಚರ್ಚೆ

ವಿಶ್ವ ಬ್ಯಾಂಕ್ ಅನುದಾನದಡಿ ಕೈಗೆತ್ತಿಕೊಂಡಿರುವ ದುರಸ್ಥಿ ಕಾಮಗಾರಿ ಪರಿಶೀಲನೆ



ಮೈಸೂರು, ನ.29(ಆರ್‌ಕೆ)–ಅಣೆಕಟ್ಟೆಗಳು ದೇಶದ ಆಸ್ತಿ. ಕೆಲವು 100 ವರ್ಷ ಹಳೆಯದಾಗಿದ್ದು, ಅವುಗಳನ್ನು ನಿರಂತರವಾಗಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿರಿಸುವುದು ಅತ್ಯಗತ್ಯ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಹಾಗೂ ಜಲ ಸಂಪನ್ಮೂಲ ಇಲಾಖೆ ಆಶ್ರಯದಲ್ಲಿ ಕೆಆರ್‌ಎಸ್‌ನ ಬೃಂದಾವನ ಗಾರ್ಡನ್‌ನಲ್ಲಿರುವ ಹೋಟೆಲ್ ರಾಯಲ್ ಆರ್ಕಿಡ್‌ನಲ್ಲಿ ಸೋಮವಾರ ಏರ್ಪಡಿಸಿದ್ದ ಅಣೆಕಟ್ಟೆಗಳ ರಿಪೇರಿ, ಪುನರುಜ್ಜೀವನ ಮತ್ತು ಸಬಲೀಕರಣ ಕುರಿತಂತೆ ಮೈಸೂರಿನ ಎಸ್‌ಜೆಸಿಇ ಮತ್ತು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆಶ್ರಯದೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅಣೆಕಟ್ಟೆ ಸಂರಕ್ಷಣಾ ತಜ್ಞರು ಸುದೀರ್ಘ ಚರ್ಚೆ ನಡೆಸಿದರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಜಲ ಸಂಪನ್ಮೂಲ ಇಲಾಖೆ ನಿರ್ದೇಶಕ ಆರ್.ಭಾನುಪ್ರಕಾಶ್, ದೇಶದಲ್ಲಿ 5,800 ಸಣ್ಣ ಮತ್ತು ಬೃಹತ್ ಅಣೆಕಟ್ಟೆಗಳಿದ್ದು, ಆ ಪೈಕಿ 3ನೇ 1ರಷ್ಟು ಕಾಂಕ್ರಿಟ್ ಮತ್ತು ಮೆಷನರಿ ಡ್ಯಾಂಗಳಾಗಿದೆ. ಅವುಗಳನ್ನು ಸಂರಕ್ಷಿಸುವ ಕುರಿತಂತೆ ವಿಚಾರ ಸಂಕಿರಣದಲ್ಲಿ ಚರ್ಚಿಸಲಾಯಿತು ಎಂದರು.

25 ವರ್ಷಗಳನ್ನು ಪೂರೈಸಿರುವ ಶೇ.80ರಷ್ಟು ಡ್ಯಾಂಗಳಿದ್ದು, 227 ಅಣೆಕಟ್ಟೆಗಳು 100 ವರ್ಷ ಪೂರೈಸಿವೆ. ಅವುಗಳನ್ನು ರಿಪೇರಿ ಮಾಡಿ ನಿರ್ವಹಣೆ ಮಾಡಬೇಕಾಗಿದೆ. ಇತ್ತೀಚಿನ ಡ್ಯಾಂ ಸೇಫ್ಟಿ ಆಕ್ಟ್–2021ರ ಪ್ರಕಾರ ರಿಪೇರಿ ಮಾಡಲು ಗುಣಮಟ್ಟದ ಶಿಷ್ಟಾಚಾರಗಳನ್ನು ಅನುಸರಿಸಬೇಕಾಗಿದೆ ಎಂದ ಭಾನುಪ್ರಕಾಶ್, ಅದಕ್ಕಾಗಿ ಸಂಬಂಧಿಸಿದ ಸ್ಟ್ಯಾಂಡರ್ಡ್ ಕೋಡ್‌ಗಳನ್ನು ಬಳಸಬೇಕು ಎಂದರು.

ವಿನ್ಯಾಸ, ಡ್ಯಾಂ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಮೌಲ್ಯ ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಿಚಾರ ಸಂಕಿರಣದಲ್ಲಿ ಬಂದ ಅಭಿಪ್ರಾಯ, ಸಲಹೆ, ಮಾರ್ಗದರ್ಶನಗಳನ್ನು ಸಂಗ್ರಹಿಸಲಾಗಿದೆ. ನಿರಂತರ ಪರಿಶೀಲನೆ, ಆಪರೇಷನ್ ಮತ್ತು ನಿರ್ವಹಣೆಯಿಂದ ಅಣೆಕಟ್ಟೆಗಳು ಅಪಾಯದ ಅಂಚಿಗೆ ತಲುಪುವುದನ್ನು ತಡೆಗಟ್ಟಬಹುದು ಎಂದು ಅಭಿಪ್ರಾಯಪಟ್ಟರು.


ಕೃಷ್ಣರಾಜ ಸಾಗರ ಅಣೆಕಟ್ಟೆ (ಕೆಆರ್‌ಎಸ್)ಯು ಒಡೆಯರ್ ಆಳ್ವಿಕೆಯಲ್ಲಿ ನಿರ್ಮಿಸಲಾಗಿದ್ದು, ಅದರ ಸ್ಲೂಸ್ ಗೇಟ್‌ಗಳ ರಿಪೇರಿಗೆ ಕೆಲ ನಿಯಮಗಳನ್ನು ಪಾಲಿಸಲೇಬೇಕಾಗಿದೆ. ಅದಕ್ಕಾಗಿ ಸ್ಥೂಲ ಅಧ್ಯಯನವಾಗಬೇಕೆಂಬ ಉದ್ದೇಶದಿಂದ ವಿಚಾರ ಸಂಕಿರಣವನ್ನು ಕೆಆರ್‌ಎಸ್‌ನಲ್ಲೇ ಆಯೋಜಿಸಲಾಗಿದೆ. ಈಗಾಗಲೇ ವಿಶ್ವ ಬ್ಯಾಂಕ್ ಅನುದಾನದಡಿ ಮೊದಲ ಹಂತದ ಡ್ರಿಪ್ (Dam Rehabilitation & Improvement Project) ಯೋಜನೆಯಡಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. 2ನೇ ಹಂತದ ಯೋಜನೆಯೂ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಅಣೆಕಟ್ಟೆ ಸುರಕ್ಷತೆಗಾಗಿ ಶಿಷ್ಟಾಚಾರ, ನಿಯಮಗಳು, ನೀತಿ ಅನುಷ್ಠಾನ, ಆಪರೇಷನ್ಸ್ ಮತ್ತು ನಿರ್ವಹಣೆ ಕುರಿತಂತೆಯೂ ಚರ್ಚಿಸಲಾಯಿತು. ಒಟ್ಟಾರೆ, ವಿಜ್ಞಾನ ಮತ್ತು ನೂತನ ತಂತ್ರಜ್ಞಾನ ಬಳಸಿ ಕೆಆರ್‌ಎಸ್ ಅಣೆಕಟ್ಟೆಯನ್ನು ಸದೃಢಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಭಾನುಪ್ರಕಾಶ್ ನುಡಿದರು.

ನಂತರ ತಜ್ಞರು ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿ ಡ್ರಿಪ್ ಯೋಜನೆಯಡಿ ವಿಶ್ವ ಬ್ಯಾಂಕ್‌ನ 68 ಕೋಟಿ ರೂ. ಅನುದಾನದಲ್ಲಿ ಕೈಗೊಂಡಿರುವ ವಿವಿಧ ಮಟ್ಟದ 173 ಸ್ಲೂಸ್ ಗೇಟ್‌ಗಳನ್ನು ಬದಲಾಯಿಸುವ ಕಾಮಗಾರಿಯನ್ನು ವೀಕ್ಷಿಸಿದರು.

ಕೇಂದ್ರ ಜಲ ಆಯೋಗ (CWC)ವು ಸಲ್ಲಿಸಿದ್ದ ಸಮಗ್ರ ಯೋಜನೇ ವರದಿ (DPR) ಮತ್ತು ವಿನ್ಯಾಸದಂತೆ ಕೈಗೊಂಡಿರುವ ಅಣೆಕಟ್ಟೆಯ ಗೇಟ್‌ಗಳ ರೀಪ್ಲೇಸ್‌ಮೆಂಟ್ ಕೆಲಸವನ್ನು ಪರಿವೀಕ್ಷಿಸಿದ ತಜ್ಞರು, ಇಂದು ಮಧ್ಯಾಹ್ನ ಕೆಆರ್‌ಎಸ್‌ನಿಂದ ಬೆಂಗಳೂರಿಗೆ ಹಿಂತಿರುಗಿದರು. ಜಲಸಂಪನ್ಮೂಲ ಇಲಾಖೆ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಕರ್ನಾಟಕ ಇಂಜಿನಿಯರಿಂಗ್ ರೀಸರ್ಚ್ ಸ್ಟೇಷನ್ ಇಂಜಿನಿಯರ್‌ಗಳು ಸೇರಿದಂತೆ ಹಲವು ತಜ್ಞರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ವಿಷಯ ಮಂಡಿಸಿದರು.

ಮೇಕೆದಾಟು ಯೋಜನೆ: ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಒತ್ತಾಯ



ಮೈಸೂರು,ನ.29(ಎಂಟಿವೈ)–ಮೇಕೆದಾಟು ಯೋಜನೆ ಅನುಷ್ಠಾನ ವಿರೋಧಿಸಿ ತಮಿಳುನಾಡು ಸರ್ಕಾರ ತಗಾದೆ ತೆಗೆದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೂಡಲೇ ಸುಪ್ರಿಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸದಿದ್ದರೆ ತಡೆಯಾಜ್ಞೆ ಹೊರಬೀಳುವ ಸಾಧ್ಯತೆ ಹೆಚ್ಚಾಗಿರುವುದರಿಂದ ಕೂಡಲೆ ಸರ್ವಪಕ್ಷ ಸಭೆ ಕರೆದು ಅಗತ್ಯ ಕ್ರಮ ಕೈಗೊಳ್ಳುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಒತ್ತಾಯಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರಿಂಕೋರ್ಟ್‌ನ ನೀರು ಹಂಚಿಕೆ ತೀರ್ಪಿನಂತೆ ಕುಡಿಯುವ ನೀರಿಗಾಗಿ ನಾವು ಯಾವುದೇ ಯೋಜನೆ ಬೇಕಾದರೂ ರಾಜ್ಯ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಬಹುದು. ಅದರಂತೆ ಬಿಳಿ ಗುಂಡ್ಲು ಬಳಿ ಅಣೆಕಟ್ಟೆ ಕಟ್ಟಲು ನಮಗೆ ಹಕ್ಕಿದೆ. ಈ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮಿಳುನಾಡು ಸರ್ಕಾರದ ಅನುಮತಿ ಕೇಳಿ ಪತ್ರ ಬರೆದು ತಪ್ಪು ಮಾಡಿದ್ದಾರೆ. ಈ ಪತ್ರದ ಆಧಾರದ ಮೇಲೆ ಸುಪ್ರಿಂಕೋರ್ಟ್ ಮೆಟ್ಟಿಲೇರಿರುವ ತಮಿಳುನಾಡು ಸರ್ಕಾರ ಮೇಕೆದಾಟು ಯೋಜನೆ ನಿರಾಕರಿಸುವಂತೆ ಸಲ್ಲಿಸಿದ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ್ದು, ಇದಕ್ಕೆ ಉತ್ತರ ನೀಡಲು ಕರ್ನಾಟಕ ಸರ್ಕಾರಕ್ಕೆ ಗಡುವು ನೀಡಿದ್ದು, ಈಗಾಗಲೇ 7 ದಿನ ಮುಗಿದಿದೆ ಎಂದರು.

ಮುಖ್ಯಮಂತ್ರಿಗಳು ಸಂಕಲ್ಪ ಯಾತ್ರೆ ಹೆಸರಿನಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಬೈಯುವುದರಲ್ಲಿ ನಿರತರಾಗಿದ್ದಾರೆ. ಹೀಗೆಯೇ ಮುಂದುವರೆದರೆ ಕೋರ್ಟ್ ತಡೆಯಾಜ್ಞೆ ನೀಡಲಿದೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್‌ನ ಪಾದಯಾತ್ರೆ ಬಳಿಕ ಸಿಎಂ ಬಸವರಾಜ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ 1 ಸಾವಿರ ಕೋಟಿ ರೂ. ಮೇಕೆದಾಟು ಯೋಜನೆಗೆ ನೀಡುವುದಾಗಿ ಘೋಷಿಸಿದರು. ಆದರೆ ಇದುವರೆಗೂ ಕಾಮಗಾರಿ ಆರಂಭದ ಕುರಿತು ಯಾವುದೇ ಮಾತುಗಳನ್ನಾಡಿಲ್ಲ. ಇನ್ನು ಕಾವೇರಿ ನೀರು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ 17 ಬಾರಿ ಈ ವಿಷಯ ಬಂದಿದ್ದರೂ ಮುಂದೂಡಲಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ 70 ಬಾರಿ ವಿಷಯ ಬಂದಿದ್ದರೂ ಚರ್ಚಿಸಿಲ್ಲ. ಈ ಡ್ಯಾಂ ನಿರ್ಮಾಣವಾದರೆ ತಮಿಳುನಾಡಿಗೆ ನೀಡಬೇಕಿರುವ 177.25 ಟಿಎಂಸಿ ನೀರನ್ನು ಬಿಟ್ಟು ಉಳಿಕೆ ನೀರನ್ನು ನಾವು ಬಳಸಿಕೊಳ್ಳಬಹುದು. ಈ ಡ್ಯಾಂ ನಿರ್ಮಾಣವಾಗದೆ ಈಗಾಗಲೇ ನಾವು ಹೆಚ್ಚುವರಿಯಾಗಿ 450 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟಿದ್ದೇವೆ. ಇದನ್ನು ಅವರು ಬಳಸಿಕೊಳ್ಳಲು, ಸಂಗ್ರಹಿಸಲು ಸಾಧ್ಯವಾಗದೆ ಸಮುದ್ರಕ್ಕೆ ಬಿಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಡೆಮೋ ನೀಡಲಿ: ಮೈಸೂರು ಜಿಲ್ಲೆಗೆ ಹೊಸದಾಗಿ 5,635 ಬ್ಯಾಲೆಟ್ ಯೂನಿಟ್ ಮತ್ತು 3,958 ಕಂಟ್ರೋಲ್ ಯೂನಿಟ್ಸ್ ತರಲಾಗಿದೆ. ಇವುಗಳ ನಿರ್ವಹಣೆಯನ್ನು ಖಾಸಗಿ ಎಂಜಿನಿಯರ್‌ಗಳ ಸಂಸ್ಥೆಗೆ ನೀಡಿದ್ದಾರೆ. ಆದ್ದರಿಂದ ಎಲ್ಲಾ ಪಕ್ಷದ ಮುಖಂಡರನ್ನು ಕರೆದು ಅವರ ಸಮ್ಮುಖದಲ್ಲಿ ಅವುಗಳ ಕಾರ್ಯವಿಧಾನ ತೋರಿಸಬೇಕು ಎಂದು ಎಂ.ಲಕ್ಷ್ಮಣ್ ಮನವಿ ಮಾಡಿದರು.

ಬೆಂಗಳೂರು ಡಿಸಿಪಿ ನಾಪತ್ತೆಯಾದ ರೌಡಿಗಳ ಪಟ್ಟಿ ಬಿಡುಗಡೆಗೊಳಿಸಿದ್ದು, ಇದರಲ್ಲಿ ಸೈಲೆಂಟ್ ಸುನಿಲ್ ಹೆಸರು ಮೊದಲನೆಯದು. ಆದರೆ ಆತ ಬಿಜೆಪಿಯವರ ಬಳಿ ಇದ್ದಾನೆ. ಆತನನ್ನು ಸಂಸದರು, ಸಚಿವರು ಹಾಡಿ ಹೊಗಳಿದ್ದಾರೆ. ಆತನೊಂದಿಗೆ ವೇದಿಕೆ ಹಂಚಿಕೊಂಡು ಪಕ್ಷಕ್ಕೆ ಬರಮಾಡಿಕೊಂಡಿದ್ದಾರೆ. ಸಚಿವ ಅಶ್ವಥ್ ನಾರಾಯಣ್ ಅವರು ಆತನನ್ನು ವಹಿಸಿಕೊಂಡು ಮಾತನಾಡಿದ್ದಾರೆ ಎಂದು ಟೀಕಿಸಿದರು.

ಬಿಜೆಪಿಯಲ್ಲಿ 47 ಮಂದಿ ಕ್ರಿಮಿನಲ್ ಹಿನ್ನೆಲೆಯುಳ್ಳ ಶಾಸಕರಿದ್ದಾರೆ. 3 ಮಂದಿ ಸಂಸದರಿದ್ದಾರೆ. 16 ಮಂದಿ ಸಚಿವರು, ಶಾಸಕರು ಲೈಂಗಿಕ ಸಿಡಿಗೆ ಸಂಬಂಧ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿದ್ದಾರೆ. ಇವರ ಜೊತೆ ಇಬ್ಬರು ಸಂಸದರೂ ಇದ್ದಾರೆ. ಡಿ.ವಿ.ಸದಾನಂದ ಗೌಡ ಮತ್ತು ಪ್ರತಾಪ ಸಿಂಹ ಅವರು ತಡೆಯಾಜ್ಞೆ ತಂದಿದ್ದು, ನನ್ನ ವಿರುದ್ಧ ಸುಮಾರು 14 ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ಆರೋಪಿಸಿದರು.

ಮೈಸೂರಿನ ಕೆ.ಆರ್.ಕ್ಷೇತ್ರ ವ್ಯಾಪ್ತಿಯ 16 ಕಡೆ ಗುಂಬಜ್ ಮಾದರಿಯ ಬಸ್ ನಿಲ್ದಾಣ ನಿರ್ಮಿಸಿ, ಈಗ ಗುಂಬಜ್ ತೆಗೆಯುತ್ತಿದ್ದಾರೆ. ಈ ಹಣವನ್ನು ಯಾರಿಂದ ಭರಿಸುತ್ತೀರಿ ಎಂಬುದನ್ನು ಜಿಲ್ಲಾಡಳಿತ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಕ್ತಾರ ಮಹೇಶ್ ಉಪಸ್ಥಿತರಿದ್ದರು.

ಡಿ.1ರಿಂದ ಡಿಜಿಟಲ್ ರೂಪಾಯಿ ಬಳಕೆ: ಬೆಂಗಳೂರಲ್ಲೂ ಲಭ್ಯ

ಮುಂಬೈ: ಚಿಲ್ಲರೆ ವಹಿವಾಟುಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಗೆ ಡಿಸೆಂಬರ್ 1ರಂದು ಚಾಲನೆ ನೀಡಲಾಗುವುದು ಎಂದು ಆರ್‌ಬಿಐ ಹೇಳಿದೆ.

4 ನಗರಗಳಲ್ಲಿ ಇದು ಆರಂಭವಾಗಲಿದ್ದು, ಬೆಂಗಳೂರು ಕೂಡ ಈ ಪೈಕಿ ಒಂದು. ಆರಂಭಿಕ ಹಂತದಲ್ಲಿ ಎಸ್‌ಬಿಐ, ಐಸಿಐಸಿಐ ಸೇರಿದಂತೆ 4 ಬ್ಯಾಂಕ್‌ಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳಲಿವೆ. ಆರ್‌ಬಿಐ, ಡಿಜಿಟಲ್ ರೂಪಾಯಿ ಬಳಕೆಯನ್ನು ಸಗಟು ವಹಿವಾಟುಗಳಿಗೆ ಪ್ರಾಯೋಗಿಕವಾಗಿ ನ.1ರಂದು ಚಾಲನೆ ನೀಡಿದೆ. ಈಗ ಆಯ್ದ ಗ್ರಾಹಕರು ಹಾಗೂ ವ್ಯಾಪಾರಿಗಳ ನಡುವೆ ಮಾತ್ರ ಚಿಲ್ಲರೆ ವಹಿವಾಟುಗಳಿಗೆ ಪ್ರಾಯೋಗಿಕವಾಗಿ ಡಿಜಿಟಲ್ ರೂಪಾಯಿ ಬಳಕೆಗೆ ಚಾಲನೆ ನೀಡಲಾಗುತ್ತದೆ. ಡಿಜಿಟಲ್ ರೂಪಾಯಿಯು ಡಿಜಿಟಲ್ ಟೋಕನ್ ರೂಪದಲ್ಲಿ ಇರಲಿದೆ. ಇದು ಕಾನೂನುಬದ್ಧ ಕರೆನ್ಸಿಯಾಗಿರುತ್ತದೆ? ಎಂದು ಆರ್‌ಬಿಐ ಹೇಳಿದೆ. ಡಿಜಿಟಲ್ ರೂಪಾಯಿಯನ್ನು ಬ್ಯಾಂಕ್ ಶಾಖೆಗಳ ಮೂಲಕ ವಿತರಿಸಲಾಗುತ್ತದೆ. ಬ್ಯಾಂಕ್‌ಗಳು ನೀಡುವ ಡಿಜಿಟಲ್ ವಾಲೆಟ್‌ಗಳ ಮೂಲಕ ಇದನ್ನು ವಹಿವಾಟಿಗೆ ಬಳಸಿಕೊಳ್ಳಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.35 ನಖ ಶಿಖಾಂತ –ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ, ಗಾಯನ– ಮತ್ತೂರು ಕುಮಾರಸ್ವಾಮಿ, ಜಯಂತಿ ಆರ್. ಭಟ್, ವ್ಯಾಖ್ಯಾನ–ಮೈಸೂರು ಕೃಷ್ಣಮೂರ್ತಿ, 8.30 ವೃತ್ತಿ ಮಾರ್ಗದರ್ಶನ–ಸಸ್ಯಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಭಾರತೀಯ ಸಸ್ಯ ಸರ್ವೇಕ್ಷಣಾ ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಗಳಾಗಿರುವ ಡಾ.ಮಹದೇವಕುಮಾರ್ ಅವರೊಂದಿಗೆ ಮಾತುಕತೆ, 9.00 ಕನ್ನಡ ಕಜ್ಜಾಯ, 10.00 ನಿಶಾಂತ್ ಖಾನ್–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ಎನ್.ನಂಜುಂಡಸ್ವಾಮಿ, ವೃಂದಗಾನ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಸ್ವರ್ಗಾರೋಹಣ", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಎಂ.ಎಸ್.ಲಕ್ಷ್ಮೀಶ, ಎ.ಎಸ್.ನಾಗಲಕ್ಷ್ಮಿ, ಡಾ.ಶಿಲ್ಪಾ ಹೆಗ್ಡೆ, 3.00 ಲಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ "ಕನ್ನಡ ಸಂಗೀತ ವೈವಿಧ್ಯ" ರಚನೆ ಹಾಗೂ ನಿರೂಪಣೆ–ಡಾ.ಜ್ಯೋತಿ ಶಂಕರ್, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು ಲೇಖಕಿ ಹಾಗೂ ವನ್ಯಜೀವಿ ಛಾಯಾಗ್ರಾಹಕಿ ದೇವಮಣಿ ದಿವ್ಯಾ, 5.30ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಹೈನುಗಾರಿಕೆಯಲ್ಲಿ ಕಂಡ ಯಶಸ್ಸು ಕುರಿತು ಮಹಾಲಕ್ಷ್ಮಿ ಅವರೊಂದಿಗೆ ಸಂದರ್ಶನ, 9.30 ಮುಸ್ತಫಾ ಖಾನ್–ಗಾಯನ, 10.00 ಜನಪದಗೀತೆ–ಚಿಕ್ಕಮಾದಮ್ಮ ಮತ್ತು ತಂಡ, ಪ್ರಸ್ತುತಿ–ಅಬ್ದುಲ್ ರಶೀದ್, 10.30 ಸವಿನೆನಪು

ಇಂದಿನ ಪಂಚಾಂಗ

30.11.2022 ಬುಧವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮೀ, ನಕ್ಷತ್ರ : ಧನಿಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಕರ್ನಾಟಕ ಪ್ರದೇಶ ಕುರುಬರ ಸಂಘ :** ಶ್ರೀ ಭಕ್ತ ಕನಕದಾಸರ ಜಯಂತ್ಯೋತ್ಸವ, ಕುರುಬರ ಸಂಘದ ಪದಾಧಿಕಾರಿಗಳ ಪದಗ್ರಹಣ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಕೊಂಬು, ಕಹಳೆ, ಡೊಳ್ಳು, ತಮಟೆ, ನಗಾರಿ, ಪೂರ್ಣಕುಂಭದೊಂದಿಗೆ ಮಂಗಳವಾದ್ಯ ಸಮೇತ ನಂಜರಾಜ ಬಹದ್ದೂರ್ ಛತ್ರದಿಂದ–ಕಲಾಮಂದಿರದವರೆಗೆ ಮೆರವಣಿಗೆ, ಸಾನ್ನಿಧ್ಯ : ಶ್ರೀ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಉಪಸ್ಥಿತರು : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ : ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಚಿತ್ರನಟ ದೊಡ್ಡಣ್ಣ, ವಿದ್ಯಾರ್ಥಿ ಸಂಸತ್ ಉದ್ಘಾಟನೆ: ನಟ ಕಾರ್ತಿಕ್ ಮಹೇಶ್, ಅಧ್ಯಕ್ಷತೆ: ಕಾಲೇಜು ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಪಾತ್ರೆ ವ್ಯಾಪಾರಿಗಳ ಸಂಘ:** ರಾಜ್ಯೋತ್ಸವ ಸಮಾರಂಭ, ಧ್ವಜಾರೋಹಣ: ಶ್ರೀ ಚಿದಾನಂದ ಸ್ವಾಮೀಜಿ, ಮೌಲಾನ ತಾಜ್‌ವುದ್ದೀನ್ ಸಾಹೇಬ್, ಫಾ. ಸ್ಟೇನಿ ಡಿ. ಅಲ್‌ಮೇಡಿಯ, ಮುಖ್ಯ ಅತಿಥಿಗಳು: ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ವಾಸು, ಲಷ್ಕರ್ ಪೊಲೀಸ್ ಠಾಣೆ ಆರಕ್ಷಕ ಸಂತೋಷ್, ಪಾಲಿಕೆ ಸದಸ್ಯ ಎಂ.ಡಿ.ನಾಗರಾಜು, ಅಧ್ಯಕ್ಷತೆ: ಸಂಘದ ಅಧ್ಯಕ್ಷ ತುಕಾರಾಂ, ಸ್ಥಳ: ಸಂಘದ ಆವರಣ, ಬೆಳಗ್ಗೆ 10.30ಕ್ಕೆ

■ **ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘ, ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘ:** ರಾಜ್ಯೋತ್ಸವ ಸಮಾರಂಭ, ಉದ್ಘಾಟನೆ: ಕವಿ ಡಾ.ಜಯಪ್ಪ ಹೊನ್ನಾಳಿ, ಮುಖ್ಯ ಅತಿಥಿಗಳು: ಶಾಸಕ ಎಸ್.ಎ.ರಾಮದಾಸ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಸಂಘದ ಗೌರವಾಧ್ಯಕ್ಷ ಬಿ.ಎಸ್.ಪ್ರಶಾಂತ್, ಸ್ಥಳ: ಕಿರುರಂಗ ಮಂದಿರ, ಕುಕ್ಕರಹಳ್ಳಿ ಕೆರೆ ಹತ್ತಿರ, ಬೆಳಗ್ಗೆ 11.30ಕ್ಕೆ

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ:** 67ನೇ ಕನ್ನಡ ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ: ಮಹಾವಿದ್ಯಾಲಯ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಗೌರವ ಅತಿಥಿಗಳು: ಪ್ರಾಂಶುಪಾಲರಾದ ಪ್ರೊ.ನಯನಕುಮಾರಿ, ಸಂಚಾಲಕರಾದ ಶ್ರೀಮತಿ ಕೆ.ಎಸ್.ಸುಕೃತ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ವಿನೋದ, ಸ್ಥಳ: ಮಾತೃಶ್ರೀ ರತ್ನಮ್ಮ ಹೆಗ್ಗಡೆ ಸಭಾ ಮಂಟಪ, ಮಧ್ಯಾಹ್ನ 12ಕ್ಕೆ.

■ **ಮರಿಮಲ್ಲಪ್ಪನವರ ಪದವಿ ಪೂರ್ವ ಕಾಲೇಜು :** ಕನ್ನಡ ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ: ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ವಿಶೇಷ ಆಹ್ವಾನಿತರು: ಪದವಿಪೂರ್ವ ಕಾಲೇಜು ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಪ್ರಾಂಶುಪಾಲ ಬಿ.ಆರ್.ನೀಲಕಂಠ, ಉಪಪ್ರಾಂಶುಪಾಲರಾದ ಎಂ.ಎಸ್.ವಿಜಯ, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.

■ **ಅಕ್ಕ ಐಎಎಸ್ ಅಕಾಡೆಮಿ:** ರಾಜ್ಯೋತ್ಸವ, ಪ್ರೊ.ಜಿ.ಹೇಮಂತ್‌ಕುಮಾರ್ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮುಖ್ಯ ಅತಿಥಿಗಳು: ಗುರುಶಂಕರ್ ಹೆಚ್.ಆರ್.ಶಿಲ್ಪ, ಅಧ್ಯಕ್ಷತೆ: ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ, ಸನ್ಮಾನಿತರು: ಜಾನಪದ ಕಲಾವಿದ ವಿಶ್ವನಾಥ್ ಎಲ್.ಚಂಗಚಹಳ್ಳಿ, ಸ್ಥಳ: ಅಕ್ಕ ಐಎಎಸ್ ಅಕಾಡೆಮಿ, ಮಧ್ಯಾಹ್ನ 2.30ಕ್ಕೆ.

■ **ಜನಚೈತನ್ಯ ಫೌಂಡೇಷನ್ :** 67ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಕನ್ನಡ ಜನಪ್ರಿಯ ಚಿತ್ರಗೀತೆಗಳ ಸಂಗೀತ ಸಂಜೆ, ಜನಚೈತನ್ಯ ಪುರಸ್ಕಾರ ಸಮಾರಂಭ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಸಮಾಜ ಸೇವಕ ರವಿಗೌಡ, ಮುಖ್ಯ ಅತಿಥಿಗಳು: ಮುಡಾ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸ್ಥಳ: ಸುತ್ತೂರು ಕ್ಷೇತ್ರ, ಸಂಜೆ 4ಕ್ಕೆ.

■ **ತನುಮನ ಸಂಸ್ಥೆ :** 67ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಪ್ರಯುಕ್ತ ಕವಿಕಾವ್ಯ ಗಾನಯಾನ ಸಂಗೀತ ಕಾರ್ಯಕ್ರಮ ಮತ್ತು ಕರುನಾಡ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಸಾಮಾಜಿಕ ಹೋರಾಟಗಾರ ಹಿನಕಲ್ ಸೋಮಣ್ಣ, ಸಾಧಕರಿಗೆ ಪ್ರಶಸ್ತಿ ಪ್ರದಾನ: ಮೈಸೂರು ಜಿಲ್ಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ದುಂಡಯ್ಯ, ಸ್ಥಳ: ಧ್ವನ್ಯಾಲೋಕ, ಬೋಗಾದಿ ರಸ್ತೆ, ಸಂಜೆ 4.30ಕ್ಕೆ.

■ **ತಾಯಮ್ಮ ಪ್ರಕಾಶನ, ಸುಯೋಗ್ ಆಸ್ಪತ್ರೆ, ಅನನ್ಯ ಪುಸ್ತಕಗಳು:** ಡಾ.ಎಸ್.ಪಿ.ಯೋಗಣ್ಣ ಅವರ ಆರೋಗ್ಯ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಿಜಿಎಸ್ ಗ್ಲೋಬಲ್ ಶಿಕ್ಷಣ ಮತ್ತು ಆಸ್ಪತ್ರೆಗಳ ಸಮೂಹ ಸಂಸ್ಥೆ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಪ್ರಕಾಶನಾಥ ಸ್ವಾಮೀಜಿ, ಅಧ್ಯಕ್ಷತೆ: 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಕೃತಿ ಬಿಡುಗಡೆ: ವೈದ್ಯ ಲೇಖಕಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಕೃತಿ ಕುರಿತು: ಹಿರಿಯ ವಿದ್ವಾಂಸ ಪ್ರೊ.ಸಿ.ನಾಗಣ್ಣ, ಸಂಸದ ಪ್ರತಾಪ್ ಸಿಂಹ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 5.30ಕ್ಕೆ

■ **ಸಂಚಲನ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಮೈಸೂರು ವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿಗಳಿಂದ ಚಿತ್ರಪಟ ನಾಟಕ ಪ್ರದರ್ಶನ, ರಚನೆ : ಹೆಚ್.ಎಸ್.ವೆಂಕಟೇಶಮೂರ್ತಿ, ನಿರ್ದೇಶನ: ದೀಪಕ್ ಮೈಸೂರು, ಉಪಸ್ಥಿತರು: ಎಂಎಂಸಿ ಮತ್ತು ಆರ್‌ಐ ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್.ದಾಕ್ಷಾಯಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಕನ್ನಡ ಸಂಘದ ಅಧ್ಯಕ್ಷ ಡಾ. ಸಿ.ರವೀಂದ್ರನಾಥ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಎಸ್.ಚಂದ್ರಶೇಖರ್, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ಬಾಚೇಗೌಡನಹಳ್ಳಿಯಲ್ಲಿಂದು, ಹೆಚ್.ಡಿ.ಕೋಟೆ ತಾ.

■ **ರೋಟರಿ ಕ್ಲಬ್ ಆಫ್ ಮೈಸೂರು ರಾಯಲ್, ರೋಟರಿ ಕ್ಲಬ್ ಆಫ್ ಹೆಚ್.ಡಿ. ಕೋಟೆ, ರಾಯಲ್ ಪ್ರೇರಣ ರೋಟರಿ ಸಮುದಾಯ ದಳ, ಹಂಪಾಪುರ:** ಕನ್ನಡ ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ: ರೋಟರಿ ಕ್ಲಬ್ ಆಫ್ ಮೈಸೂರು ರಾಯಲ್ ಅಧ್ಯಕ್ಷ ಪ್ರೊ. ಎ.ಎಂ. ಧನಂಜಯ, ಉದ್ಘಾಟನೆ : ಕ್ಷೇತ್ರ ಶಿಕ್ಷಣಾಧಿಕಾರಿ ಉದಯಕುಮಾರ್, ಮುಖ್ಯ ಅತಿಥಿಗಳು: ಜಿಪಂ ಮಾಜಿ ಉಪಾಧ್ಯಕ್ಷೆ ನಂದಿನಿ ಚಂದ್ರಶೇಖರ್, ಕಿರುತೆರೆ ನಟಿ ದೀಪ ರವಿಶಂಕರ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಚೇಗೌಡನಹಳ್ಳಿ, ಹೆಚ್.ಡಿ.ಕೋಟೆ ತಾಲೂಕು, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 30 ಬುಧವಾರ 2022

ಸಂಪುಟ: 43 | ಸಂಚಿಕೆ: 223 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸೈಲೆಂಟ್ ಸುನೀಲ್ ಬಗ್ಗೆ ಕೇಳಿದರೆ ಕಾಂಗ್ರೆಸ್‌ನಲ್ಲಿ ರೌಡಿಗಳಿರಲಿಲ್ವಾ ಅಂತಾರೆ ಸಿಎಂ!

ಚುನಾವಣೆ ಸಮೀಪದಲ್ಲಿ ಜನಪರ ನಾಯಕರ ವಿಚಾರ ಮರೆತು ತೋಳ್ಬಲ ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿ–ಕಾಂಗ್ರೆಸ್

ಬೆಂಗಳೂರು, ನ.29(ಕೆಎಂಶಿ)–ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಪತನಕ್ಕೆ ಕಾರಣರಾದ ಸಮಾಜ ಘಾತುಕ ಶಕ್ತಿಗಳಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ವತಿಯಿಂದ ಟಿಕೆಟ್ ನೀಡಲು ಬಿಜೆಪಿ ಹೊರಟಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ರೌಡಿ ಸೈಲೆಂಟ್ ಸುನೀಲ್ ಹಾಗೂ ಫೈಟರ್ ರವಿ ಸೇರಿದಂತೆ ಕೆಲವರ ಜತೆ ಬಿಜೆಪಿಯ ಸಂಸದರು, ಸಚಿವರು, ಶಾಸಕರು ಸಾರ್ವಜನಿಕವಾಗಿ ಗುರುತಿಸಿಕೊಂಡಿರುವುದಲ್ಲದೆ, ಕೆಲವರನ್ನು ಪಕ್ಷಕ್ಕೆ ಸೇರಿಸಿಕೊಂಡಿರುವುದು ವಿವಾದಕ್ಕೆ ಎಡೆ ಮಾಡಿದೆ. ರೌಡಿ ಸೈಲೆಂಟ್ ಸುನೀಲ್ ಜತೆ ಪಕ್ಷದ ಸಂಸದರು ಮತ್ತು ಶಾಸಕರು ವೇದಿಕೆ ಹಂಚಿ ಕೊಂಡ ಬೆಳವಣಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಲವಾಗಿ ಸಮರ್ಥಿಸಿಕೊಂಡಿದ್ದರೆ, ಇದಕ್ಕೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿ ಸಿದ್ದಾರೆ. ಇದರ ಮಧ್ಯೆ ಸಾರ್ವಜನಿಕರಲ್ಲಿ ಈ ಬೆಳವಣಿಗೆ ತೀವ್ರ ಆಕ್ರೋಶಕ್ಕೆ ಒಳಗಾಗುತ್ತಿದ್ದಂತೆ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು, ಸೈಲೆಂಟ್ ಸುನೀಲ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದರ ಬೆನ್ನಲ್ಲೇ ಬಿಜೆಪಿ ವಿರುದ್ಧ ಗುಡುಗಿರುವ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಸರ್ಚ್ ವಾರಂಟ್ ಮೇಲಿರುವ ಒಬ್ಬ ರೌಡಿಯ ಜತೆ ಬಿಜೆಪಿಯ ಸಂಸದರು, ಶಾಸಕರು ವೇದಿಕೆ ಹಂಚಿಕೊಂಡಿದ್ದು ಸರಿಯೇ ಎಂದು ಪ್ರಶ್ನೆ ಮಾಡಿದರು. ಭಾನುವಾರ ರಾಜಧಾನಿಯಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ಬಿಜೆಪಿ ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಶಾಸಕರಾದ ಉದಯ ಗರುಡಾಚಾರ್ ಸೇರಿ ದಂತೆ ಪ್ರಮುಖ ನಾಯಕರು ರೌಡಿ ಶೀಟರ್ ಸೈಲೆಂಟ್ ಸುನೀಲ್ ಜತೆ ವೇದಿಕೆ ಹಂಚಿಕೊಂಡಿದ್ದರಲ್ಲದೆ, ಅಪ್ಯಾಯ ಮಾನತೆಯಿಂದ ಮಾತನಾಡಿಸಿದ್ದರು. ಅಚ್ಚರಿ ಸಂಗತಿ ಎಂದರೆ ರೌಡಿ ಸೈಲೆಂಟ್ ಸುನೀಲನ ಶೋಧಕ್ಕಾಗಿ ಪೊಲೀಸರು ಹರ ಸಾಹಸ ನಡೆಸುತ್ತಿರುವ ಕಾಲಕ್ಕೆ ಸರಿಯಾಗಿ ಬಿಜೆಪಿ ನಾಯಕರ ಜತೆ ರಾಜಾರೋಷವಾಗಿ ಆತ ವೇದಿಕೆ ಹಂಚಿಕೊಂಡಿದ್ದು ಸಾರ್ವಜನಿಕ

▶ 8ನೇ ಪುಟಕ್ಕೆ

> ಬಿಜೆಪಿ ನಾಯಕರ ಜತೆ ಸೈಲೆಂಟ್ ಸುನೀಲ್ ವೇದಿಕೆ ಹಂಚಿಕೊಂಡ ಬೆಳವಣಿಗೆ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ವಾಗ್ಯುದ್ಧಕ್ಕೆ ಕಾರಣವಾಗಿದ್ದರೂ, ಈ ಬೆಳವಣಿಗೆ ಪಕ್ಷಕ್ಕೆ ಮುಜುಗರ ತಂದಿದೆ. ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದ್ದು ರಾಜಕೀಯ ಪಕ್ಷಗಳ ಜತೆ ರೌಡಿಗಳ ನಿಕಟ ಸಂಪರ್ಕ ಹೆಚ್ಚುತ್ತಿರುವುದು ಮತ್ತು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಹಲವು ರೌಡಿಗಳು ಬಯಸುತ್ತಿರುವ ಬೆಳವಣಿಗೆಯ ಬಗ್ಗೆ ವ್ಯಾಪಕ ಚರ್ಚೆ ಶುರುವಾಗಿದೆ.



ಅಶಾಂತಿ ನಿರ್ಮಿಸಲು ಬಿಜೆಪಿಗೆ ರೌಡಿಶೀಟರ್‌ಗಳು ಬೇಕು



ಮಂಡ್ಯ, ನ.29– ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸಮಾಜದಲ್ಲಿ ಅಶಾಂತಿ ಉಂಟು ಮಾಡಲು ರೌಡಿ ಶೀಟರ್‌ಗಳ ಅವಶ್ಯಕತೆ ಬೇಕಾಗಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಲೇವಡಿ ಮಾಡಿದರು.

ಕೆ.ಆರ್.ಪೇಟೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೊತ್ತಿದ್ದೂ ರೌಡಿಗಳ ಜೊತೆ ನಾನು ಎಂದಿಗೂ ವೇದಿಕೆ ಹಂಚಿಕೊಂಡಿಲ್ಲ. ಆದರೆ ಸೈಲೆಂಟ್ ಸುನೀಲ್ ಪೊಲೀಸರಿಗೆ ಬೇಕಾದ ರೌಡಿ. ಆತನ ಜೊತೆಗೆ ಇಬ್ಬರು ಸಂಸದರು ಹಾಗೂ ಶಾಸಕರು ವೇದಿಕೆ ಹಂಚಿಕೊಂಡಿದ್ದಾರೆ. ಸರ್ಚ್ ವಾರೆಂಟ್‌ನಲ್ಲಿ ಹೆಸರಿರುವವನ ಜೊತೆಗೆ ವೇದಿಕೆ ಹಂಚಿಕೊಂಡಿದ್ದು ಸರಿನಾ ಎಂದು ಪ್ರಶ್ನಿಸಿದರು.

ರೌಡಿ ಶೀಟರ್‌ಗಳನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿರುವುದನ್ನು ಪ್ರಶ್ನಿಸಿದರೆ ಕಾಂಗ್ರೆಸ್‌ನಲ್ಲಿ ರೌಡಿಗಳಿಲ್ಲವಾ ಎಂದು ಸಿಎಂ ಹಾಗೂ ಬಿಜೆಪಿ ಮುಖಂಡರು ಕೇಳುತ್ತಾರೆ. ಬಿಜೆಪಿಗೆ ಹಾಗೂ ಸಿಎಂ ಬಸವರಾಜ ಬೊಮ್ಮಾಯಿಗೆ ಅದೊಂದು ಅಂಟು ರೋಗ ಆಗಿದೆ. ತಪ್ಪು ಮಾಡಿದಾಗ ಪ್ರಶ್ನಿಸಿದರೆ, ಹಿಂದಿನ ಸರ್ಕಾರ ಮಾಡಿಲ್ವಾ ಅಂತಾರೆ. ಮೊದಲು ಅವರ ತಪ್ಪನ್ನು ತಿದ್ದಿಕೊಳ್ಳಲಿ ಎಂದರು. ಜನ ಅಧಿಕಾರ ಕೊಟ್ಟಿಲ್ಲ. ಅನೈತಿಕವಾಗಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು, ಅಧಿಕಾರದಲ್ಲಿ ಇದ್ದಾಗ ಏನು ಮಾಡಿದ್ದೀರಿ ಎಂದು ಬಿಜೆಪಿ ನಾಯಕರು ಹೇಳಬೇಕು ಎಂದ ಅವರು, ಬಿಜೆಪಿಯವರು ಮಹಮ್ಮದ್ ನಲಪಾಡ್ ಬಗ್ಗೆ ಮಾತನಾಡುತ್ತಾರೆ. ನಲಪಾಡ್ ರೌಡಿಯಲ್ಲ. ರೌಡಿಶೀಟರ್ ಸಹ ಅಲ್ಲ, ಕ್ರಿಮಿನಲ್ ಕೇಸ್ ಆಗಿದೆ. ನಲಪಾಡ್ ತಪ್ಪಿತಸ್ಥ ಎಂದು ಇನ್ನೂ ನಿರ್ಧಾರವಾಗಿಲ್ಲ.

ವಿಶ್ವವಿದ್ಯಾನಿಲಯಗಳ ಅಕಾಡೆಮಿಕ್ ಕೌನ್ಸಿಲ್, ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ ನೇರ ಪ್ರಸಾರ

ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಪ್ರಕಟ



ಬೆಂಗಳೂರು, ನ.29(ಕೆಎಂಶಿ)– ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್, ಹಣಕಾಸು ಸಮಿತಿ, ಸಿಂಡಿಕೇಟ್ ಸಭೆಗಳ ನೇರ ಪ್ರಸಾರಕ್ಕೆ ಚಾಲನೆ ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ವರ್ಷಗಳಲ್ಲಿ ವಾಜಪೇಯಿ ಅವರ ಜನ್ಮದಿನವಾದ ಡಿಸೆಂಬರ್ 25ರಂದು 'ಸುಶಾಸನ ದಿನ' ಆಚರಿಸಲಾಗುತ್ತಿತ್ತು. ಈ ವರ್ಷ ತಮ್ಮ ಇಲಾಖೆಗಳ ವ್ಯಾಪ್ತಿಯಲ್ಲಿ ಡಿಸೆಂಬರ್ ತಿಂಗಳು ಪೂರ್ತಿ 'ಸುಶಾಸನ ಮಾಸ'ವನ್ನಾಗಿ ಆಚರಿಸಲಾಗುತ್ತದೆ.

ವಿಶ್ವವಿದ್ಯಾಲಯದ ಆಡಳಿತವನ್ನು ಪಾರದರ್ಶಕವಾಗಿಸುವುದು ಹಾಗೂ ಪರಿಣಾಮಕಾರಿಯಾಗಿಸುವುದು ಸರ್ಕಾರದ ಉದ್ದೇಶ. ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳಲ್ಲಿ ಅಕಾಡೆಮಿಕ್ ಕೌನ್ಸಿಲ್, ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳ ನೇರ ಪ್ರಸಾರ ವ್ಯವಸ್ಥೆಯೂ ಸೇರಿದೆ ಎಂದು ವಿವರಿಸಿದರು.

ವಿಶ್ವವಿದ್ಯಾಲಯ ಆಡಳಿತ ಪಾರದರ್ಶಕಗೊಳಿಸುವ ಉದ್ದೇಶ



ಸಾಮಾಜಿಕ ಜಾಲತಾಣಗಳ ಮೂಲಕ ಈ ನೇರ ಪ್ರಸಾರ ನಡೆಯಲಿದೆ. ಒಮ್ಮೆ ಜಾರಿಗೆ ಬರುತ್ತಿದ್ದಂತೆ ಕಾಯಂ ವ್ಯವಸ್ಥೆಯಾಗಿ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದರು. ಇದರ ಜೊತೆಗೆ ಇನ್ನೂ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ಪ್ರತಿಯೊಂದು ಮಾಹಿತಿಯನ್ನು ಡಿಸೆಂಬರ್ 10 ರೊಳಗೆ ಆಯಾಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನಿರ್ದೇಶನ ನೀಡಲಾಗಿದೆ. ಸಂಯೋಜಿತ ಕಾಲೇಜುಗಳು ಹಾಗೂ ಘಟಕ ಕಾಲೇಜುಗಳು ಕೂಡ ಇದನ್ನು ಪಾಲಿಸಬೇಕು. ಒಂದೊಮ್ಮೆ ಘಟಕ ಕಾಲೇಜುಗಳಲ್ಲಿ ವೆಬ್‌ಸೈಟ್ ಇಲ್ಲದಿದ್ದರೆ ವಿವಿ ವೆಬ್‌ಸೈಟ್‌ನಲ್ಲಿಯೇ ವಿವರಗಳನ್ನು ಪ್ರಕಟಿಸಬೇಕು ಎಂದು ಸಚಿವರು ಸ್ಪಷ್ಟಪಡಿಸಿದರು.

ಶುಲ್ಕ ವಿವರದಿಂದ ಹಿಡಿದು ವಿ.ವಿ.ಗಳಿಗೆ ಮಂಜೂರಾದ ಅನುದಾನದ ಮೊತ್ತ, ಕೈಗೊಳ್ಳಲಾಗಿರುವ ಪ್ರಾಜೆಕ್ಟ್‌ಗಳು, ಬೋಧಕ ಸಿಬ್ಬಂದಿ ಸಂಖ್ಯೆ, ಬೋಧಕೇತರ ಸಿಬ್ಬಂದಿ ಸಂಖ್ಯೆ, ಹೀಗೆ ಪ್ರತಿಯೊಂದು ಮಾಹಿತಿಯನ್ನೂ ವೆಬ್‌ಸೈಟ್‌ನಲ್ಲಿ ಅಡಕಗೊಳಿಸಬೇಕು ಎಂದರು. ಉಳಿದಂತೆ, ಮೂರು ಇಲಾಖೆಗಳು ವಿದ್ಯಾರ್ಥಿಗಳನ್ನು, ಉದ್ಯಮಿಗಳನ್ನು ಹಾಗೂ ವಿವಿಧ ಹಿತಾಸಕ್ತಿದಾರರನ್ನು ಗಮನ ದಲ್ಲಿರಿಸಿಕೊಂಡು ವಿವಿಧ ಕಾರ್ಯಕ್ರಮಗಳನ್ನು

▶ 8ನೇ ಪುಟಕ್ಕೆ

ಸರ್ಕಾರಿ ಅಧಿಕಾರಿಗಳು ನಿವೃತ್ತರಾಗಿ ನಾಲ್ಕು ವರ್ಷದ ನಂತರ ತನಿಖೆಗೆ ಅವಕಾಶವಿಲ್ಲ: ಹೈಕೋರ್ಟ್ ತೀರ್ಪು

ಬೆಂಗಳೂರು : ಸರ್ಕಾರಿ ಅಧಿಕಾರಿಗಳು ನಿವೃತ್ತರಾಗಿ ನಾಲ್ಕು ವರ್ಷ ಕಳೆದ ಬಳಿಕ ಕರ್ನಾಟಕ ನಾಗರಿಕ ಸೇವೆಗಳ ಕಾನೂನಿನ ನಿಯಮ 214 (2) (ಬಿ)ದಡಿ ಯಾವುದೇ ತನಿಖೆ ನಡೆಸಲು ಅವಕಾಶವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ಗೃಹ ಮಂಡಳಿಯಲ್ಲಿ ನಿವೃತ್ತ ಕಾರ್ಯಕಾರಿ ಎಂಜಿನಿಯರ್ ಆಗಿದ್ದ ಬೆಂಗಳೂರಿನ ಅನಿಲ್ ಕುಮಾರ್ ಮತ್ತು ಟಿ ಮಲ್ಲಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್ ಜಿ ಪಂಡಿತ್ ನೇತೃತ್ವದ ಏಕ ಸದಸ್ಯ ಪೀಠವು ಅರ್ಜಿಯನ್ನು ಮಾನ್ಯ ಮಾಡಿದೆ. ನಿವೃತ್ತ ಅಧಿಕಾರಿಗಳ ವಿರುದ್ಧ ತನಿಖೆಗಾಗಿ ಹೊರಡಿಸಿದ್ದ ಆದೇಶವನ್ನು ರದ್ದು ಪಡಿಸಿದೆ. ಕರ್ನಾಟಕ ನಾಗರೀಕ ಸೇವೆಗಳ ಕಾನೂನಿನ ನಿಯಮ 214 (2)(ಬಿ)(ii)ದಡಿ ತನಿಖೆ ಆರಂಭಿಸಲು ದೋಷಾರೋಪ ಜ್ಞಾಪನಾ ಪತ್ರ ನಿರ್ಬಂಧಿಸಲಾಗಿದೆ. ಹೀಗಾಗಿ, ದೋಷಾರೋಪ ಜ್ಞಾಪನಾ ಪತ್ರ ಅಮಾನ್ಯವಾಗಲಿದೆ ಎಂದು ಪೀಠ ತನ್ನ ಆದೇಶದಲ್ಲಿ ಹೇಳಿದೆ. ನಾಲ್ಕು ವರ್ಷಗಳ ಹಿಂದೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ತನಿಖೆ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ದೋಷಾರೋಪ ಮತ್ತು ತನಿಖಾ ಪ್ರಕ್ರಿಯೆ ಕುರಿತಾದ ಜ್ಞಾಪನಾ ಪತ್ರವನ್ನು 2022ರ ಜೂನ್ 21ರಂದು ಹೊರಡಿಸಲಾಗಿತ್ತು. ಇದನ್ನು ಹೈಕೋರ್ಟ್ ನಲ್ಲಿ ಅರ್ಜಿದಾರರು ಪ್ರಶ್ನಿಸಿದ್ದರು. ಅರ್ಜಿದಾರರು ಕ್ರಮವಾಗಿ 2018ರ ಜೂನ್ 30 ಮತ್ತು 2020ರ ಆಗಸ್ಟ್ 31ರಂದು ನಿವೃತ್ತರಾಗಿದ್ದರು. ಬಳಿಕ ಅವರ ವಿರುದ್ಧ 2022ರ ಜೂನ್ 21ರಂದು ದೋಷಾರೋಪ ಜ್ಞಾಪನಾ ಪತ್ರ ಜಾರಿಗೊಳಿಸಿತ್ತು. 2006ರಲ್ಲಿ ನಡೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಇದನ್ನು ಪ್ರಶ್ನಿಸಿದ್ದ ಅರ್ಜಿದಾರರು, ಕೆಸಿಎಸ್‌ಆರ್ ನಿಯಮಗಳ ಅಡಿ ದೋಷಾರೋಪ ನಿರ್ಬಂಧಿಸಿದ್ದು, ವಜಾಕ್ಕೆ ಅರ್ಹವಾಗಿದೆ ಎಂದು ವಾದಿಸಿದ್ದರು. ಇದನ್ನು ಪುರಸ್ಕರಿಸಿರುವ ನ್ಯಾಯಪೀಠ, ಅರ್ಜಿಯನ್ನು ಇತ್ಯರ್ಥಪಡಿಸಿ ಆದೇಶಿಸಿದೆ.

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಇಂದು 'ಸುಪ್ರೀಂ' ವಿಚಾರಣೆ

ರಾಜ್ಯದ ಪರ ಹಿರಿಯ ನ್ಯಾಯವಾದಿ ಮುಕುಲ್ ರೋಹ್ಟಗಿ ವಾದ



ಬೆಂಗಳೂರು, ನ.29(ಕೆಎಂಶಿ)– ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಪ್ರಕರಣ ನಾಳೆ ವಿಚಾರಣೆಗೆ ಬರಲಿದ್ದು, ಈ ಕುರಿತು ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರು ಕರ್ನಾಟಕದ ಪರವಾಗಿ ಸಮರ್ಥವಾಗಿ ವಾದ ಮಾಡುವ ಭರವಸೆ ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಇಂದು ನವದೆಹಲಿಯಲ್ಲಿ ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಕುಲ್ ರೋಹ್ಟಗಿ ಹಿರಿಯ ವಕೀಲರಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಸಂಬಂಧಪಟ್ಟ ಹಾಗೆ ಈಗಾಗಲೇ ಎಲ್ಲ ವಿಷಯವನ್ನು ನಮ್ಮ ಅಡ್ವೋಕೇಟ್ ಜನರಲ್ ವಿವರಿಸಿದ್ದಾರೆ. ನಾನು ಗಡಿ ವಿವಾದದ ಕಾನೂನಾತ್ಮಕ ಹಿನ್ನೆಲೆ ಬಗ್ಗೆ ರೋಹ್ಟಗಿ ಅವರಿಗೆ ವಿವರಣೆ ನೀಡಿದ್ದೇನೆ. ನಾಳೆ ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡನೆ ಮಾಡಲು ಎಲ್ಲಾ ರೀತಿಯ ಸಿದ್ಧತೆ ನಡೆದಿದೆ ಎಂದು ಅವರು ತಿಳಿಸಿರುವುದಾಗಿ ಹೇಳಿದ್ದಾರೆ. ಮಹಾರಾಷ್ಟ್ರ ಸರ್ಕಾರ ಹಾಕಿರುವ ಮೇಂಟೈನಬಲಿಟಿ ಕುರಿತಾಗಿ ವಿಚಾರಣೆ ನಡೆಯಲಿದೆ. ಹಿಂದಿನ ಸಿಜೆಐ ದೀಪಕ್ ಮಿಶ್ರ ಅವರು ಇದರ ಮೇಂಟೈನಬಲಿಟಿ ವಿಚಾರವನ್ನು ಸಿದ್ಧಪಡಿಸಿದ್ದರು. ಅದಕ್ಕೆ ನಮ್ಮ ಪ್ರತಿರೋಧ ಹೇಗಿರಬೇಕು ಎಂಬುದರ ಬಗ್ಗೆ ನಾವು ಸಿದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರದ ನಾಯಕರು, ನಾವು ಗಂಭೀರವಾಗಿ ಇದೀವಿ ಅಂತ ತೋರಿಸಿಕೊಳ್ಳಲು ಆ ರೀತಿ ಮಾಡುತ್ತಿದ್ದಾರೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರಿರುವ ಮಹಾರಾಷ್ಟ್ರದ

▶ 8ನೇ ಪುಟಕ್ಕೆ

ಕ್ರೆಡಿಲ್ ಅಧಿಕಾರಿ ದಿನೇಶ್ ಕುಮಾರ್ ಸಾವಿನ ನಿಗೂಢತೆ ಭೇದಿಸಲು ಪೊಲೀಸರಿಂದ ವೈಜ್ಞಾನಿಕ ತನಿಖೆ ಮೊರೆ



ಮೈಸೂರು, ನ.29(ಆರ್‌ಕೆ)–ಕ್ರೆಡಿಲ್ ಅಧಿಕಾರಿ ಡಿ.ಕೆ.ದಿನೇಶ್ ಕುಮಾರ್ ನಿಗೂಢ ಸಾವಿನ ಪ್ರಕರಣವನ್ನು ತಾಂತ್ರಿಕತೆ ಸಹಾಯದಿಂದ ವೈಜ್ಞಾನಿಕವಾಗಿ ತನಿಖೆ ನಡೆಸಲು ಸರಸ್ವತಿಪುರಂ ಠಾಣೆ ಪೊಲೀಸರು ಮುಂದಾಗಿದ್ದಾರೆ. ಭಾನುವಾರ ರಾತ್ರಿ ಊಟ ಮಾಡಿ ಎಲ್ಲರೂ ಮಲಗಿದ್ದೆವು. ಸೋಮವಾರ ಬೆಳಗ್ಗೆ ಎದ್ದಾಗ ದಿನೇಶ್ ಕುಮಾರ್ ಪ್ರಜ್ಞಾಹೀನರಾಗಿ ದ್ದುದನ್ನು ಕಂಡು ನಾವು ದಿಗ್ಭ್ರಾಂತ ರಾಗಿ ಪ್ರಜ್ಞೆ ತಪ್ಪಿದೆವು ಎಂದು ದಿನೇಶ್‌ಕುಮಾರ್ ಪತ್ನಿ ಆಶಾ ಮತ್ತು ಪುತ್ರ ಧನುಷ್ ಹೇಳಿದರೆ, ದಿನೇಶ್ ಕುಮಾರ್ ಸಾವು ಸಂಭವಿಸಿ ಒಂದೂವರೆ ದಿನದ ಮೇಲೆ ಆಗಿರಬಹುದು ಎಂದು ದೇಹವನ್ನು ನೋಡಿದಾಗ ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ವೈದ್ಯರು ಹೇಳಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಈ ಪ್ರಕರಣದಲ್ಲಿ ಇಷ್ಟನ್ನು ಬಿಟ್ಟರೆ ಪೊಲೀಸರಿಗೆ ಬೇರೆ ಯಾವುದೇ ಮಾಹಿತಿ ಇದ್ದಂತಿಲ್ಲ.

ಈ ನಡುವೆ ದಿನೇಶ್ ಕುಮಾರ್ ಸೋದರಮಾವ ನಾರಾಯಣ್ ಅವರು, ತಮ್ಮ ಅಕ್ಕನ ಮಗನ ಮೃತದೇಹ ನೋಡಿದಾಗ ಗಾಯಗಳು ಕಂಡು ಬಂದಿವೆ. ಹೀಗಾಗಿ ಆತನನ್ನು ಕೊಲೆ ಮಾಡಿರಬಹುದು ಎಂಬ ಸಂಶಯವಿದ್ದು, ದಿನೇಶ್ ಅವರ ಪತ್ನಿ, ಮಗ ಮತ್ತು ಕೆಲಸಗಾರರನ್ನು ವಿಚಾರಣೆಗೊಳಪಡಿಸಬೇಕು ಎಂದು ಪೊಲೀಸರಿಗೆ ಅರ್ಜಿ ಸಲ್ಲಿಸಿದ್ದಾರೆ. ಸದ್ಯಕ್ಕೆ ಸಿಆರ್‌ಪಿಸಿ 174–ಸಿ ಅಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಈವರೆವಿಗೂ ಈ ಪ್ರಕರಣದಲ್ಲಿ ಐಪಿಸಿ ಸೆಕ್ಷನ್‌ನಡಿ ಪ್ರಕರಣ ದಾಖಲಿಸಿಲ್ಲ. ತನಿಖೆ ವೇಳೆ ದೊರೆಯಬಹು ದಾದ ಪ್ರತ್ಯಕ್ಷ ಅಥವಾ ಪರೋಕ್ಷ ಇಲ್ಲವೇ ವೈಜ್ಞಾನಿಕ ಸಾಕ್ಷ್ಯಗಳ ಆಧಾರದ ಮೇರೆಗೆ ಐಪಿಸಿ ಸೆಕ್ಷನ್‌ನಡಿ ಪ್ರಕರಣ ದಾಖಲಿ ಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ದಿನೇಶ್ ಕುಮಾರ್ ಪತ್ನಿ ಹೇಳಿಕೆಯಂತೆ ಅವರ ಸಾವು ಕೆಲ ಗಂಟೆಗಳ ಮುನ್ನ ನಡೆದಿರಬಹುದು. ಆದರೆ ದೇಹವು ಕೊಳೆಯಲಾರಂಭಿಸಿದ್ದರಿಂದ ದಿನೇಶ್ ಪತ್ನಿ ಹೇಳಿಕೆ ತಾಳೆಯಾಗುತ್ತಿಲ್ಲ ಎನ್ನಲಾಗಿದೆ. ಅಲ್ಲದೇ ಈ ಪ್ರಕರಣದಲ್ಲಿ ಈವರೆವಿಗೂ ಪ್ರತ್ಯಕ್ಷ ಸಾಕ್ಷಿಗಳು ಪೊಲೀಸರಿಗೆ ದೊರೆಯಲಿಲ್ಲ. ನ.26ರಂದು ರಾತ್ರಿ ಹೆಬ್ಬಾಳ್‌ನ ಸೂರ್ಯ ಬೇಕರಿ ಬಳಿಯಿಂದ ಹೊರಟ ದಿನೇಶ್ ಕುಮಾರ್, ನಂತರ ಕೆಲವರನ್ನು ಭೇಟಿ ಮಾಡಿ ಮನೆಗೆ ತೆರಳಿದ್ದರು ಎಂದು ನಾರಾಯಣ್ ನೀಡಿರುವ ಅರ್ಜಿಯಲ್ಲಿ ತಿಳಿಸಿರುವುದನ್ನು ಹೊರತುಪಡಿಸಿದರೆ, ದಿನೇಶ್ ಅವರನ್ನು ಆನಂತರ ಯಾರಾದರೂ ನೋಡಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೀಗಾಗಿ ಪೊಲೀಸರು ಪ್ರಕರಣವನ್ನು ವೈಜ್ಞಾನಿಕವಾಗಿ ತನಿಖೆ ನಡೆಸಲು ಮುಂದಾಗಿದ್ದಾರೆ. ವೈದ್ಯರ ಪ್ರಾಥಮಿಕ ಅಭಿಪ್ರಾಯದಂತೆ ದೇಹದ ಮೇಲೆ ಯಾವುದೇ ಗಾಯಗಳಿಲ್ಲ. ದೇಹ ಕೊಳೆಯಲಾರಂಭಿಸಿದಾಗ ರಕ್ತ ಸೋರುವುದು ಹಾಗೂ ಕೆಲಭಾಗ ಉಬ್ಬಿಕೊಳ್ಳುವುದು ಸಹಜ ಎಂಬ ಅಭಿಪ್ರಾಯ ವನ್ನು ವೈದ್ಯರು

▶ 8ನೇ ಪುಟಕ್ಕೆ

ಬಾಲಕಿ ಅಪಹರಣ ಪ್ರಕರಣದ ಆರೋಪಿ

ಪೊಲೀಸರಿಂದ ತಪ್ಪಿಸಿಕೊಳ್ಳಲು ಜೀಪಿನಿಂದ ಹಾರಿ ಸಾವು

ಯಳಂದೂರು ಬಳಿ ಘಟನೆ, ಕುಟುಂಬಸ್ಥರ ಪ್ರತಿಭಟನೆ





ಚಾಮರಾಜನಗರ, ನ.29– ಅಪಹರಣ ಪ್ರಕರಣದ ಆರೋಪಿಯೊಬ್ಬ ಚಲಿಸುತ್ತಿದ್ದ ಪೊಲೀಸ್ ಜೀಪಿನಿಂದ ಹಾರಿ, ತಪ್ಪಿಸಿಕೊಳ್ಳಲು ಯತ್ನಿಸಿದಾಗ ದುರಂತ ಸಾವನ್ನಪ್ಪಿರುವ ಘಟನೆ ತಾಲೂಕಿನ ಯರಿಯೂರು ಮತ್ತು ಮದ್ದೂರು ನಡುವೆ ಸಂಭವಿಸಿದೆ ಇದರಿಂದ ರೊಚ್ಚಿಗೆದ್ದ ಕುಟುಂಬಸ್ಥರು ಮತ್ತು ಸಾರ್ವಜನಿಕರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದ ಘಟನೆಯೂ ಜರುಗಿತು.

ಯಳಂದೂರು ತಾಲೂಕಿನ ಕುಂತೂರು ಮೋಳೆ ಗ್ರಾಮದ ನಂಜುಂಡಶೆಟ್ಟಿ ಅವರ ಪುತ್ರ ನಿಂಗರಾಜು (24) ಸಾವನ್ನಪ್ಪಿದ ಆರೋಪಿ.

ಬಾಲಕಿ ಅಪಹರಣ ಸಂಬಂಧ ನಿಂಗರಾಜು ವಿರುದ್ಧ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿತ್ತು. ಆರೋಪಿ, ಗ್ರಾಮದಲ್ಲಿರುವ ವಿಚಾರ ತಿಳಿದ ಮಾಂಬಳ್ಳಿ ಪೊಲೀಸರು ಇಂದು ಜೀಪಿನಲ್ಲಿ ಗ್ರಾಮಕ್ಕೆ ತೆರಳಿ ಆತನನ್ನು ವಶಕ್ಕೆ ಪಡೆದು ವಿಚಾರಣೆಗಾಗಿ ಜೀಪ್‌ನಲ್ಲಿ ಠಾಣೆಗೆ ಕರೆದೊಯ್ಯುತ್ತಿದ್ದರು. ಈ ವೇಳೆ ಆರೋಪಿ ನಿಂಗರಾಜು ಯರಿಯೂರು ಮತ್ತು ಮದ್ದೂರು ನಡುವೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಏಕಾಏಕಿ ಜೀಪಿನಿಂದ ಹಾರಿದನೆನ್ನಲಾಗಿದೆ. ಇದರಿಂದ ತೀವ್ರ ಸ್ವರೂಪದ ಗಾಯಗಳಾಗಿವೆ. ತಕ್ಷಣ ಪೊಲೀಸರು ಆತನನ್ನು ಯಳಂದೂರು ತಾಲೂಕು ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಿಸದೆ ಆತ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಕುಟುಂಬಸ್ಥರು, ಆಸ್ಪತ್ರೆ ಮುಂದೆ ಜಮಾಯಿಸಿ ಗೋಳಾಡಿದರು. ಇದರೊಂದಿಗೆ ಪೊಲೀಸರ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ನಮ್ಮ ಹುಡುಗ ಸಾವನ್ನಪ್ಪಿದ್ದು, ಇದಕ್ಕೆ ಪೊಲೀಸರೇ ಕಾರಣ ಎಂದು ಆಪಾದಿಸಿದರು. ನಮ್ಮ ಹುಡುಗನನ್ನು ಪೊಲೀಸರೇ ಜೀಪಿನಿಂದ ತಳ್ಳಿ ಸಾಯಿಸಿದ್ದಾರೆ ಎಂದು ಕೂಗಾಡಲಾರಂಭಿಸಿದರು. ಇದರಿಂದ ಕೆಲಕಾಲ ಪರಿಸ್ಥಿತಿ ಉದ್ವಿಗ್ನಗೊಂಡಿತು. ಅಲ್ಲದೆ ಪೊಲೀಸರ ವಿರುದ್ಧ ಧಿಕ್ಕಾರ ಕೂಗುತ್ತಾ ಪ್ರತಿಭಟನೆ ನಡೆಸಲಾರಂಭಿಸಿದರು. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಅರಿತ ಪೊಲೀಸರು ಹೆಚ್ಚಿನ ಪೊಲೀಸರನ್ನು ನಿಯೋಜಿಸಿದ್ದಾರೆ.

ಈ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದು, ಕರ್ತವ್ಯನಿರತ ಪೊಲೀಸರನ್ನೂ ವಿಚಾರಣೆಗೊಳಪಡಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದ್ದು, ವಿಚಾರಣೆ ನಂತರ ಪ್ರಕರಣದ ಸತ್ಯಾಂಶ ತಿಳಿಯಲಿದೆ. ಆ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಯುವತಿ (ಬಸ್‌ನಲ್ಲಿ) : ಲೇಡೀಸ್ ಸೀಟಿನಲ್ಲಿ ಕೂತಿದ್ದೀರಲ್ಲಾ ನಿಮಗೆ ನಾಚಿಕೆಯಾಗೊಲ್ವೇ?

ಆತ : ನಾಚಿಕೆಯಾಕೆ ಮೇಡಂ, ಮನೇಲಿ ಲೇಡೀಸ್ ಮಾಡೋ ಕೆಲಸವನ್ನೆಲ್ಲಾ ನಾನೇ ಮಾಡ್ತೀನಲ್ಲ!

ಮೈಸೂರು ಮಿತ್ರ
ಬುಧವಾರ, 30 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯದನ್ನು ಮಾಡಬೇಕೆಂದರೆ ಅದಕ್ಕೆ ಅಧಿಕಾರ ಸ್ಥಾನವೇ ಸಿಗಬೇಕೆಂದಿಲ್ಲ. ಪ್ರೀತಿ ಇದ್ದರೆ ಸಾಕು. –ಅನುಭವದ ನುಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೀನಿನ ಮರಿಗೆ ಈಜು ಕಲಿಸಿದಂತೆ

ನಿಮ್ಮ ಪತ್ರಗಳು

ಹೇಳೋರೂ, ಕೇಳೋರೂ ಇಲ್ಲದ ವಾರ್ಡ್

ಮಾನ್ಯರೆ,

ಮೈಸೂರು ಪಾಲಿಕೆಯ ವಾರ್ಡ್ ಸಂಖ್ಯೆ 49ರ ನಗರಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳ ಬೇಜವಾಬ್ದಾರಿಗೊಂದು ಉದಾಹರಣೆ ಇದು. ಹತ್ತಾರು ಸಾವಿರ ಖರ್ಚು ಮಾಡಿ ಇತ್ತೀಚೆಗೆ ರಸ್ತೆಯ ಮೂಲೆಯಲ್ಲಿ ನೆಟ್ಟ ಮಾರ್ಗಸೂಚಿ ಫಲಕ ವಕೀಲ ಎಚ್.ಗಂಗಾಧರನ್ ಅವರ ಮನೆಯ ಹಿಂಭಾಗದಲ್ಲಿ ಮಣ್ಣಿನಲ್ಲಿ ಬಿದ್ದು ತುಕ್ಕು ಹಿಡಿಯುತ್ತಿದೆ! ಇದರ ಪರಿವೆ ಯಾರಿಗೂ ಇಲ್ಲ. ಏಕೆಂದರೆ ಪಾಲಿಕೆಯ ಸದಸ್ಯರು ಈ ಕಡೆ ಬಂದಿದ್ದರೆ ತಾನೇ. ಇಲ್ಲಿನ ನಿವಾಸಿಗಳದ್ದೊಂದೇ ದೂರು ಪಾಲಿಕೆಯ ಸದಸ್ಯರು ಯಾರೆಂಬುವುದೇ ತಿಳಿದಿಲ್ಲ. ನಾವು ಪಾಲಿಕೆಯ ಚುನಾವಣೆಯಲ್ಲಿ ಸೌಮ್ಯ ಉಮೇಶ್ ಎನ್ನುವವರಿಗೆ ಮತ ನೀಡಿ. ಅವರು ಗೆದ್ದಿದ್ದಷ್ಟೇ ಗೊತ್ತು ಎಂದು. ಹಾಗೇ ಇಲ್ಲಿನ ರಸ್ತೆಗೆ ಡಾಂಬರು ಹಾಕಿ ಸುಮಾರು ಹದಿನೈದು ವರ್ಷಗಳಾಗಿದೆ ಎನ್ನುತ್ತಾರೆ ಬಿ.ಎಸ್.ಎನ್.ಎಲ್ ಉದ್ಯೋಗಿಯೊಬ್ಬರು.

ವಿಕಲಚೇತನರಾದ ನ್ಯಾಯಾಲಯದ ನಿವೃತ್ತ ಅಧಿಕಾರಿಯೊಬ್ಬರು ಅವರ ತ್ರಿಚಕ್ರ ವಾಹನದಲ್ಲಿ ಹೋಗಲು ನರಕಯಾತನೆ ಅನುಭವಿಸುವಂತಾಗಿದೆ. ಈ ರಸ್ತೆಗೆ ಡಾಂಬರು ಹಾಕಿಸಿ ಎನ್ನುವುದು ಜನರ ಮನವಿ. ಜನರ ಉಪಯೋಗಕ್ಕೆ ಬರುವ ಕೆಲಸ ಮಾಡದ ಜನರೇಕೆ ಚುನಾವಣೆಗೆ ಬರುತ್ತಾರೋ ಎನ್ನುತ್ತಾರೆ ಇಲ್ಲಿನ ಗೃಹಿಣಿ ಗೀತಾ. ಎಲ್ಲರದೂ ಒಂದೇ ಮಾತು. ಬಸ್ ಪ್ರಯಾಣಿಕರ ತಂಗುದಾಣದ ಗುಮ್ಮಟಕ್ಕಾಗಿ ಹೊಡೆದಾಡಿದ ಕೃಷ್ಣರಾಜ ಕ್ಷೇತ್ರದ ಶಾಸಕ ಹಾಗೂ ಸಂಸದರೇ ಬನ್ನಿ ನಮ್ಮ ರಸ್ತೆಗೇನಾದರೂ ಮಾಡಿ ಎಂದು.

–ಕೊಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು.

ಹೌದಪ್ಪಗಳ ನೇಮಕ ಸರಿಯಲ್ಲ

ಮಾನ್ಯರೆ,

ಭಾರತದ ಮುಖ್ಯ ಚುನಾವಣಾ ಆಯುಕ್ತರ ನೇಮಕದ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಸಕಾಲಿಕವಾಗಿದೆ.

ಸಾಂವಿಧಾನಿಕ ಹುದ್ದೆಯಾದ ಮುಖ್ಯ ಚುನಾವಣಾ ಆಯುಕ್ತರ ನೇಮಕದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಪಾತ್ರವೇ ಇಲ್ಲ ಎಂಬ ಬಗ್ಗೆ ಗಮನ ಸೆಳೆದಿರುವ ಸರ್ವೋಚ್ಚ ನ್ಯಾಯಾಲಯದ ಐದು ಸದಸ್ಯರ ಸಾಂವಿಧಾನಿಕ ಪೀಠ, ಮುಖ್ಯ ಚುನಾವಣಾ ಆಯುಕ್ತರ ನೇಮಕವನ್ನು ಕೊಲಿಜಿಯಂ ಮೂಲಕ ನಡೆಸುವುದು ಸೂಕ್ತ ಎಂದು ಹೇಳಿದೆ. ಇಡೀ ದೇಶದ ಚುನಾವಣಾ ವ್ಯವಸ್ಥೆಯ ಕೇಂದ್ರ ಬಿಂದುವಾದ ಭಾರತದ ಮುಖ್ಯ ಚುನಾವಣಾ ಆಯುಕ್ತರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪಾರದರ್ಶಕವಾಗಿರಬೇಕಾಗಿದ್ದು, ಯಾವುದೇ ಪಕ್ಷದ ಪ್ರಭಾವಕ್ಕೆ ಒಳಗಾಗದೇ ತಮ್ಮ ಕರ್ತವ್ಯಗಳನ್ನು ಸಂವಿಧಾನುಬದ್ಧವಾಗಿ ಚಲಾಯಿಸಬೇಕಾಗಿದೆ. ಆದರೆ ಕೆಲವು ಮಾಜಿ ಚುನಾವಣಾ ಆಯುಕ್ತರ ಕಾರ್ಯವೈಖರಿ ಸಮರ್ಪಕವಾಗಿಲ್ಲ. ಅದೂ ಅಲ್ಲದೇ ನಿವೃತ್ತರಾದ ಅಥವಾ ನಿವೃತ್ತಿಯ ಅಂಚಿನಲ್ಲಿರುವ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳನ್ನು ಈ ಹುದ್ದೆಗೆ ತರಲಾಗುತ್ತಿದೆ. ಆದ್ದರಿಂದಲೇ ಈ ಹೌದಪ್ಪಗಳ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ವ್ಯತಿರಿಕ್ತ ಅಭಿಪ್ರಾಯ ವ್ಯಕ್ತಪಡಿಸಿ, ಒಂದು ವೇಳೆ ಮುಖ್ಯ ಚುನಾವಣಾ ಆಯುಕ್ತರು ಪ್ರಧಾನ ಮಂತ್ರಿಯವರ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭ ಬಂದರೆ, ಏನು ಮಾಡುತ್ತಾರೆ ಎಂದು ಅಟಾರ್ನಿ ಜನರಲ್ ಅವರನ್ನು ಪ್ರಶ್ನಿಸಿದೆ. ಅದೇ ವೇಳೆ ದೇಶದ ಮಾಜಿ ಮುಖ್ಯ ಚುನಾವಣಾ ಆಯುಕ್ತ ದಿವಂಗತ ಟಿ.ಎನ್ ಶೇಷನ್ ಅವರಂತಹ ವ್ಯಕ್ತಿಗಳು ಈ ಹುದ್ದೆಯನ್ನು ಅಲಂಕರಿಸುವಂತಾದರೆ, ಈ ಹುದ್ದೆಗೆ ನ್ಯಾಯಸಲ್ಲಿಸಬಹುದೆಂದು ಹೇಳಿದೆ. ಭಾರತ ಚುನಾವಣಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದ ದಿವಂಗತ ಟಿ.ಎನ್.ಶೇಷನ್, ಓರ್ವ ಅತ್ಯಂತ ಸಮರ್ಥ, ಪ್ರಾಮಾಣಿಕ ಹಾಗೂ ದಿಟ್ಟ ಅಧಿಕಾರಿಯಾಗಿದ್ದರು. ಹಿರಿಯ ಐಎಎಸ್ ಅಧಿಕಾರಿಯಾಗಿದ್ದ ಅವರು ಕೇಂದ್ರ ಸಚಿವ ಸಂಪುಟದ ಕಾರ್ಯದರ್ಶಿಯಾಗಿಯೂ (ಕ್ಯಾಬಿನೆಟ್ ಸೆಕ್ರೆಟರಿ) ಸಹ ಕೆಲಸ ಮಾಡಿದ್ದರು. ಯಾವುದೇ ರಾಜಕೀಯ ಒತ್ತಡ ಅಥವಾ ಪ್ರಭಾವಕ್ಕೆ ಮಣಿಯದೇ ತಮ್ಮ ಕರ್ತವ್ಯಗಳನ್ನು ಸಾಂವಿಧಾನಿಕ ರೀತಿ ರಿವಾಜುಗಳಿಗೆ ಅನುಗುಣವಾಗಿ ನಿಭಾಯಿಸಿ, ಇಡೀ ದೇಶಾದ್ಯಂತ ಒಳ್ಳೆಯ ಹೆಸರು ಗಳಿಸಿದ್ದ ಟಿ.ಎನ್.ಶೇಷನ್ ನೆನಪಿನಲ್ಲಿ ಉಳಿಯುವಂತಹ ಕೆಲಸಗಳನ್ನು ಮಾಡಿದ್ದಾರೆ. ಭ್ರಷ್ಟ ರಾಜಕಾರಣಿಗಳಿಗಂತೂ ಅವರು ಸಿಂಹಸ್ವಪ್ನವಾಗಿದ್ದರು. ಸಣ್ಣಪುಟ್ಟ ಮಕ್ಕಳು ಸಹ ಅವರ ಹೆಸರನ್ನು ಹೇಳುತ್ತಿದ್ದವು. ನಮ್ಮ ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪದೋಷಗಳಿವೆ. ಚುನಾವಣೆಗಳಲ್ಲಿ ಸಾಕಷ್ಟು ಅನ್ಯಾಯ ಅಕ್ರಮಗಳು ಎಗ್ಗಿಲ್ಲದೆ ನಡೆಯುತ್ತಿವೆ. ಹಣ, ಹೆಂಡ, ಇತ್ಯಾದಿಗಳನ್ನು ಹಂಚಿ ಮತವನ್ನು ಖರೀದಿಸುವ ಪ್ರವೃತ್ತಿ ಕೂಡ ಹೆಚ್ಚುತ್ತಿದೆ. ಹೀಗಾಗಿ, ದೇಶದ ಚುನಾವಣಾ ವ್ಯವಸ್ಥೆಗೆ ಕಾಯಕಲ್ಪ ನೀಡಲು ಟಿ.ಎನ್.ಶೇಷನ್‌ರಂತಹ ಮುತ್ಸದ್ದಿಗಳ ಅವಶ್ಯಕತೆ ಇದೆ.

ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ, ಅತ್ಯಂತ ಪಾರದರ್ಶಕ ರೀತಿಯಲ್ಲಿ ನಡೆಯಬೇಕು. ಅವರ ನೇಮಕಾತಿ ಪ್ರಕ್ರಿಯೆಯಲ್ಲಿ ಭಾರತದ ಮುಖ್ಯ ನ್ಯಾಯಾಧೀಶರು ಹಾಗೂ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿನ ವಿರೋಧ ಪಕ್ಷಗಳ ನಾಯಕರ ಪಾತ್ರವೂ ಇರಬೇಕು. ಆಗಲೇ ಆ ಹುದ್ದೆಯ ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ಕಾಣಲು ಸಾಧ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿನ ಸಲಹೆಗಳನ್ನು ಪಾಲಿಸಬೇಕಾಗಿದೆ.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕರ್ನಾಟಕದೊಂದಿಗೆ ವಿಲೀನ ಅತ್ಯಗತ್ಯ

ಮಾನ್ಯರೆ,

ಗಡಿ ಭಾಗದಲ್ಲಿ ಅದರಲ್ಲೂ ಮಹಾರಾಷ್ಟ್ರದ ವ್ಯಾಪ್ತಿಗೆ ಬರುವ ಜತ್, ಸೋಲಾಪುರ, ಕೊಲ್ಹಾಪೂರ, ಲಾತುರ್, ಔರಂಗಬಾದ್, ಸಾಂಗ್ಲಿ, ಉಸ್ಮಾನಬಾದ್ ಮತ್ತು ಅಕ್ಕಲಕೋಟಾದಲ್ಲಿ ಕನ್ನಡ ಮಾತನಾಡುವ ಜನರಿಗೆ ಮೂಲ ಸೌಕರ್ಯಗಳನ್ನು ನಿರಾಕರಿಸಿರುವ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಅಲ್ಲಿನ ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಲು ಮುಂದಾಗಿವೆ. ಹಾಗಾಗಿ ಕರ್ನಾಟಕ ಸರಕಾರ ಈ ಪ್ರದೇಶಗಳನ್ನು ನಮ್ಮ ರಾಜ್ಯದೊಂದಿಗೆ ವಿಲೀನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇತ್ತೀಚೆಗೆ, ಮಹಾರಾಷ್ಟ್ರದ ಕಾರ್ಯಕರ್ತರು ಕರ್ನಾಟಕದ ಬೆಳಗಾವಿ ಹಕ್ಕು ವಿರೋಧಿಸಿ ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ಕಪ್ಪು ಬಣ್ಣದಲ್ಲಿ 'ಜೈ ಮಹಾರಾಷ್ಟ್ರ' ಎಂದು ಬರೆದು ಮತ್ತು ಸಾಕಷ್ಟು ಬಸ್‌ಗಳನ್ನೂ ಧ್ವಂಸಗೊಳಿಸಿರುವುದನ್ನು ಮಹಾರಾಷ್ಟ್ರ ಸರಕಾರ ಕಂಡು ಕಾಣದ ಹಾಗೆ ಸುಮ್ಮನೆ ಕುಳಿತಿರುವುದು ಖಂಡನೀಯ ಮತ್ತು ಅಲ್ಲಿನ ಸರಕಾರ ಇಂತಹ ಹೇಯ ಕೃತ್ಯಕ್ಕೆ ಪುಷ್ಟಿ ನೀಡುತ್ತಿರುವುದು ತರವಲ್ಲ. ಇಂತಹ ಘಟನೆಗಳು ಸುಖಾ ಸುಮ್ಮನೆ ಶಾಂತಿ ಕದಡುತ್ತವೆ. ಮಹಾರಾಷ್ಟ್ರ ಏಕೀಕರಣ ಸಮಿತಿ, ಶಿವಸೇನೆ ಮತ್ತಿತರ ಸಂಘಟನೆಗಳ ಕಾರ್ಯಕರ್ತರು ಎರಡು ರಾಜ್ಯದಲ್ಲೂ ಕಾನೂನು–ಸುವ್ಯವಸ್ಥೆ ಕದಡುತ್ತಿದ್ದಾರೆ. ಹೀಗಾಗಿ ಎರಡು ಸರಕಾರಗಳು ಸೇರಿ ಇಂತಹ ಸಂಘಟನೆಗಳನ್ನು ಮಟ್ಟ ಹಾಕಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಧರ್ಮಸ್ಥಳದಲ್ಲಿ ಎರಡು ದಿನಗಳು



ಧರ್ಮಸ್ಥಳವು ಕರ್ನಾಟಕ ರಾಜ್ಯದ ಅತ್ಯಂತ ಪವಿತ್ರವೂ ರಮಣೀಯವೂ ಆದ ಒಂದು ಧಾರ್ಮಿಕ ಕೇಂದ್ರವೆಂಬುದು ಸರ್ವವಿಧಿತವಾದ ವಿಷಯ. ಶ್ರೀ ವೀರೇಂದ್ರ ಹೆಗಡೆಯವರಂತಹ ಮಹಾ ಮಹಿಮ ಆದರ್ಶ ವ್ಯಕ್ತಿಗಳು ಅಲ್ಲಿ ಧರ್ಮಾಧಿಕಾರಿಗಳಾದ ಮೇಲಂತೂ ಆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ವಿಸ್ಮಯವನ್ನುಂಟು ಮಾಡುತ್ತದೆ. ನಾಸ್ತಿಕತೆ ಬೆಳೆದು ದೇವರು, ಧರ್ಮ, ಸತ್ಯ ಎಂಬ ಮಾತುಗಳಿಗೆ ಅರ್ಥವೇ ಇಲ್ಲ ಎಂದುಕೊಳ್ಳುವ ಈ ಕಾಲದಲ್ಲಿ ಭಕ್ತಿಯ ಉನ್ಮೇಷ, ಶ್ರದ್ಧೆಯ ಉತ್ಕರ್ಷ ಇಲ್ಲಿ ಸೊಂಪಾಗಿ ಕಾಣಿಸಿಕೊಳ್ಳುತ್ತವೆ. ಈ ಕ್ಷೇತ್ರದಲ್ಲಿ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವವು ನಡೆಯುತ್ತದೆ. ಅದರ ಅಂಗವಾಗಿ ಸರ್ವಧರ್ಮ ಸಮ್ಮೇಳನ, ಸಾಹಿತ್ಯ ಸಮ್ಮೇಳನ ಮುಂತಾದ ಬುದ್ಧಿ ಪ್ರಚೋದಕವಾದ ಕಾರ್ಯಕ್ರಮಗಳನ್ನೂ ಮಾಡುತ್ತಾರೆ ಎಂಬುದೂ ಕನ್ನಡಿಗರಿಗೆಲ್ಲ ತಿಳಿದ ವಿಚಾರವೇ. ಈ ಸಂದರ್ಭದಲ್ಲಿ ಲಕ್ಷ ದೀಪೋತ್ಸವವನ್ನು ಕಣ್ ತುಂಬಿಕೊಳ್ಳಲು ಲಕ್ಷಾಂತರ ಮಂದಿ ದೇಶದ ನಾನಾ ಭಾಗಗಳಿಂದ ಬಂದು ಸೇರುತ್ತಾರೆ. ಇಲ್ಲಿಯ ಕ್ಷೇತ್ರಾಧಿದೇವತೆಯಾದ ಶ್ರೀ ಮಂಜುನಾಥಸ್ವಾಮಿಯ ದರ್ಶನವನ್ನು ಎಷ್ಟು ಭಕ್ತಿಯಿಂದ ಎಷ್ಟು ಉತ್ಸಾಹದಿಂದ ಪಡೆದುಕೊಳ್ಳುತ್ತಾರೋ ಅಷ್ಟೇ ಭಕ್ತಿ–ಉತ್ಸಾಹಗಳಿಂದ ಶ್ರೀ ವೀರೇಂದ್ರ ಹೆಗಡೆಯವರ ದರ್ಶನಕ್ಕಾಗಿ ಕಾದಿರುತ್ತಾರೆ. ಅವರನ್ನು ನೋಡಿ, ಅವರ ಮಾತನ್ನು ಕೇಳಿ ಜೀವನದ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಾರೆ.

ಈ ವರ್ಷದ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ಆಹ್ವಾನಿಸಿದ್ದರು. 23.11.2022 ರಂದು ಇದರಲ್ಲಿ ಭಾಗವಹಿಸಿ ಬಂದಿದ್ದು, ನನ್ನ ಜೀವನದಲ್ಲೊಂದು ಅವಿಸ್ಮರಣೀಯ ಘಟನೆ. ಇದು ಯಾವ ಜನ್ಮದ ಪುಣ್ಯದ ಫಲವೋ ನಾನರಿಯೇ. ಭಾರತೀಯ ಸಂಸ್ಕೃತಿಯ ಅತ್ಯಂತ ಶ್ರೇಷ್ಠ ಪ್ರತಿನಿಧಿ ಎಂದು ನಾನು ದೃಢವಾಗಿ ನಂಬಿರುವ ಮಹಾವ್ಯಕ್ತಿಯ ಜೊತೆಯಲ್ಲಿ ವೇದಿಕೆಯ ಮೇಲೆ ಕೆಲವು ಗಂಟೆಗಳ ಕಾಲ ಕುಳಿತಿರಲು ಮತ್ತು ಅವರೊಡನೆ ಆತ್ಮೀಯವಾಗಿ ಮಾತನಾಡಲು ಒಂದು ಅವಕಾಶವು ದೊರಕಿತೆಂಬುದೇ ನನ್ನ ಸುಕೃತ. ಮೇರು ಶಿಖರ ಸದೃಶ ಉನ್ನತ ವ್ಯಕ್ತಿತ್ವವನ್ನು ಹೊಂದಿದ್ದರೂ ಅವರಲ್ಲಿ ಗರ್ವದ ಅಣುವೂ ಇಲ್ಲ. ಸರಳತೆ, ಸೌಜನ್ಯ ಅವರ ಸಹಜ ಗುಣಗಳು. ಯಾರೇ ಅವರ ಗಮನಕ್ಕೆ ಬರಲಿ, ಅವರಲ್ಲಿರುವ ಗುಣವನ್ನು ಗುರುತಿಸುತ್ತಾರೆ. ದೋಷಾನ್ವೇಷಣೆ ಮಾಡುವುದಿಲ್ಲ. ಕಲಿಯುಗದಲ್ಲಿ ಕೃತಯುಗದ ಸಾಕ್ಷಾತ್ಕಾರವನ್ನು ಮಾಡಿಸುವ ಮಹಾನುಭಾವರವರು. ಅವರ ಪ್ರಭಾವಳಿಯಲ್ಲಿ ಸೇರಿರುವ ಸಹಸ್ರಾರು ಜನರ ಬದುಕಿನಲ್ಲಿ ಪರಿವರ್ತನೆಯಾಗಿದೆ. ಮಾನವತೆ, ಮಾನವೀಯತೆಗಳ ಮನೋಜ್ಞ ಸಂಗಮ ಅವರಲ್ಲಿದೆ ಎಂಬುದು ಉತ್ಪ್ರೇಕ್ಷೆ ಅಲ್ಲ, ಸ್ವಭಾವೋಕ್ತಿ.

ಧರ್ಮಸ್ಥಳದಲ್ಲಿ ಲಕ್ಷ ದೀಪೋತ್ಸವದಲ್ಲಿ ಜನ ಸಂದಣಿ ಅತ್ಯಧಿಕ. ಆದರೂ ನಮಗೆ ಯಾವ ಶ್ರಮವೂ ಆಗದಂತೆ ವ್ಯವಸ್ಥೆಯನ್ನು ಮಾಡಿದ್ದರು. ಅಲ್ಲಿಯ ಪ್ರತಿಯೊಬ್ಬ ಉದ್ಯೋಗಿಯೂ ವಿನಯಶೀಲ, ಶ್ರದ್ಧಾಳು. ಶ್ರೀ ಹರ್ಷನ ನಾಟಕದಲ್ಲಿ ಒಂದು ಮಾತಿದೆ–

ಕಿಮತಿಥಿ ಸಪರ್ಯಾಂ ಶಿಕ್ಷಿತಾಃ ಶಾಖಿನೋಽಪಿ?

ಈ ತಪೋವನದಲ್ಲಿ ಅತಿಥಿ ಸತ್ಕಾರ ಮಾಡುವುದನ್ನು ಮರಗಳಿಗೂ ಕಲಿಸಿಕೊಟ್ಟಿದ್ದಾರೋ ಎಂದು ಅದರ ತಾತ್ಪರ್ಯ. ಧರ್ಮಸ್ಥಳದಲ್ಲಿರುವ ಪ್ರತಿಯೊಬ್ಬರಿಗೂ ಈ ಸಂಸ್ಕಾರವನ್ನು ಪೂಜ್ಯ ಹೆಗ್ಗಡೆಯವರು ಕಲಿಸಿಕೊಟ್ಟಿರಬೇಕು. ನಮ್ಮ ಮನೆಗೆ ಅತಿಥಿಗಳು ಬಂದಾಗ ಹೇಗೆ ನಡೆದುಕೊಳ್ಳಬೇಕೆಂಬ ಪ್ರಶ್ನೆಗೆ ಉತ್ತರ ಸ್ಪಷ್ಟ, ಧರ್ಮಸ್ಥಳಕ್ಕೆ ನಾವು ಹೋದಾಗ ನಮ್ಮನ್ನು ನೋಡಿಕೊಂಡ ಹಾಗೆ ನೋಡಿಕೊಳ್ಳಬೇಕು.

22.11.22ರಂದು ಧರ್ಮ ಸಮ್ಮೇಳನಕ್ಕೆ ಹೋದೆವು. ಅದನ್ನು ಕೇಂದ್ರ ಮಂತ್ರಿಗಳಾದ ಶ್ರೀಮತಿ ಸ್ಮೃತಿ ಇರಾನಿಯವರು ಉದ್ಘಾಟಿಸಿದರು. ಉದ್ಘಾಟನಾ ಭಾಷಣ ಮಾಡಿದಾಗ ಅವರ ನಿರರ್ಗಳ ವಾಗ್‌ಝರಿ ಗಂಗಾ ಪ್ರವಾಹವನ್ನು ನೆನಪಿಗೆ ತರುತ್ತಿತ್ತು. ಆಮೇಲೆ ವಿದ್ವಾಂಸರು ಕ್ರಿಶ್ಚಿಯನ್, ಇಸ್ಲಾಮ್, ಜೈನ ಮತಗಳ ತತ್ವಗಳನ್ನು ನಿರೂಪಿಸಿ ಉಪನ್ಯಾಸಗಳನ್ನು ನೀಡಿದರು. ಅಧ್ಯಕ್ಷರು ಹಿಂದೂ ಮತದ ವಿಶಾಲ ದೃಷ್ಟಿಯನ್ನು ಪ್ರತಿಪಾದಿಸಿದರು. ಅಮೃತವರ್ಷಿಣೀ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶ್ರೋತೃಗಳು ಅಮೃತಪಾನ ಮಾಡಿದಂತಾಯಿತು.

ಮರುದಿನ (23.11.2022) ಬೆಳಗ್ಗೆ ಕ್ಷೇತ್ರಾಧಿದೇವತೆ ಶ್ರೀಮಂಜುನಾಥೇಶ್ವರನ ದರ್ಶನಕ್ಕೆ ಹೋದೆವು. ಅಲ್ಲಿ ತಿರುಪತಿಯ ಶ್ರೀ ವೆಂಕಟೇಶ್ವರನ ದರ್ಶನಕ್ಕಾಗಿ ನಿಂತ ಭಕ್ತರ ಸಾಲನ್ನು ನೆನಪಿಸುವ ಭಕ್ತರ ದೀರ್ಘ ಪಂಕ್ತಿ ಇತ್ತು. ಆಹ್ವಾನಿತರೆಂಬ ಕಾರಣದಿಂದ ನಾವು ಸಾಲಿನಲ್ಲಿ ನಿಲ್ಲಬೇಕಾಗಲಿಲ್ಲ. ಶೀಘ್ರವಾಗಿ ದೇವರ ದರ್ಶನವನ್ನು ಪಡೆದು ನಮಸ್ಕರಿಸಿ, ನಮ್ಮ ಕೊಠಡಿಗೆ ಹಿಂದಿರುಗಿದೆವು. ಆ ಮೇಲೆ ಶುಚಿಯೂ ರುಚಿಯುಳ್ಳದ್ದೂ ಆಗಿದ್ದ ಉಪಾಹಾರವನ್ನು ಸವಿದೆವು. ಸ್ವಲ್ಪ ವಿಶ್ರಮಿಸಿ ಪೂಜ್ಯ ಹೆಗ್ಗಡೆಯವರ ದರ್ಶನಕ್ಕಾಗಿ ಅವರ ನಿವಾಸ (ಬೀಡು)ಕ್ಕೆ ಹೋದೆವು. ಅಲ್ಲಿ ಭಕ್ತರು ಪೂಜ್ಯರ ದರ್ಶನಕ್ಕಾಗಿ ಮತ್ತು ಪಾದಸ್ಪರ್ಶಕ್ಕಾಗಿ ಕಾದಿದ್ದರು. ಅವರಿಗಾಗಿ ಫಲ, ಪುಷ್ಪ, ವಸ್ತ್ರಗಳನ್ನು ತಂದಿದ್ದರು. ಹೆಗ್ಗಡೆಯವರು ಮಂದಸ್ಮಿತದಿಂದ ಭಕ್ತರಿಗೆ ಆಶೀರ್ವಾದವನ್ನು ಮಾಡಿ ಅನುಗ್ರಹಿಸುತ್ತಿದ್ದರು. ಅನಂತರ ಪೂಜ್ಯ ಹೆಗ್ಗಡೆಯವರೂ ಅವರ ಧರ್ಮಪತ್ನಿ ಶ್ರೀಮತಿ ಹೇಮಾವತಿಯವರೂ ನಾವಿದ್ದ ಕೋಣೆಗೆ ಬಂದರು. ನಮ್ಮ ಪ್ರಯಾಣ ಮತ್ತು ವಸತಿಯ ಅನುಕೂಲತೆಗಳ ಬಗ್ಗೆ ವಿಚಾರಿಸಿಕೊಂಡರು. ದರ್ಶನಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಅವರ ಕರ್ತವ್ಯಗಳನ್ನು ನಿರ್ವಹಿಸಲು ತೆರಳಿದರು. ನಾವು ಧರ್ಮಸ್ಥಳದ ಆಕರ್ಷಣೆಗಳಲ್ಲಿ ಮುಖ್ಯವಾದ ಮಂಜೂಷಾ ವಸ್ತು ಸಂಗ್ರಹಾಲಯವನ್ನು ನೋಡಲು ಹೊರಟೆವು. ಮೊದಲು ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನವನ್ನು ನೋಡಲು ಹೋದೆವು. ಅಲ್ಲಿ 6 ಸಾವಿರಕ್ಕಿಂತ ಹೆಚ್ಚು ಸಂಖ್ಯೆಯ ಅಮೂಲ್ಯ ಹಸ್ತಲಿಖಿತ ಗ್ರಂಥಗಳಿವೆ. ಅವುಗಳ ಸಂರಕ್ಷಣೆ, ಸೂಚೀ ನಿರ್ಮಾಣ, ಪ್ರಕಾಶನ ಮುಂತಾದ ಕೆಲಸಗಳು ಅಲ್ಲಿ ನಡೆಯುತ್ತಿವೆ. ಅದರಲ್ಲಿ ಪರಿಣಿತರಾದ ಡಾ.ವಿಘ್ನರಾಜ ಅಲ್ಲಿ ಮುಖ್ಯವಾದ ಹಸ್ತಪ್ರತಿಗಳನ್ನು ತೋರಿಸಿದರು. ಹಸ್ತಪ್ರತಿಗಳೇ ಅಲ್ಲದೆ ಅಲ್ಲಿ ಹಳೆಯ ವೃತ್ತಾಂತ ಪತ್ರಿಕೆಗಳೂ ಇವೆ. ಮಂಗಳೂರು ಸಮಾಚಾರ, Harijan, Young India ಮುಂತಾದ ಪತ್ರಿಕೆಗಳನ್ನು ಬೇರೆಲ್ಲಿ ನೋಡಲು ಶಕ್ಯ? ಲಿಪಿಜ್ಞರಾದ ಡಾ.ವಿಘ್ನರಾಜ ಪ್ರಾಚೀನ ಭಾರತೀಯ ಲಿಪಿಗಳು ಎಂಬ ಗ್ರಂಥವನ್ನು ರಚಿಸಿದ್ದಾರೆ. ಬ್ರಾಹ್ಮೀ ಎಂಬ ಒಂದು ಲಿಪಿಯಿಂದ ಭಾರತದ ಎಲ್ಲ ಲಿಪಿಗಳ ಉದ್ಗಮ ಉಂಟಾಯಿತೆಂದು ಈ ಗ್ರಂಥದಲ್ಲಿ ನಿರೂಪಿಸಲಾಗಿದೆ.

ಮಂಜೂಷಾ : ಅನಂತರ ನಾವು ಮಂಜೂಷಾ ವಸ್ತು ಸಂಗ್ರಹಾಲಯಕ್ಕೆ ಹೋದೆವು. ಅದೊಂದು ಪ್ರಪಂಚ. ಅದನ್ನು ನೋಡಲು ಸಾಕಷ್ಟು ಸಮಯ ಬೇಕು. ನಮ್ಮಲ್ಲಿ ಅಷ್ಟು ಸಮಯ ಇರಲಿಲ್ಲ. ಆದರೂ ಜಿಜ್ಞಾಸೆಯಿಂದ, ಕುತೂಹಲದಿಂದ, ಆಶ್ಚರ್ಯದಿಂದ ಅಲ್ಲಿದ್ದ ವಸ್ತುಗಳನ್ನು ನೋಡಿದೆವು. ಡಾ. ವೀರೇಂದ್ರ ಹೆಗ್ಗಡೆ ಅವರು ದೇಶ–ವಿದೇಶಗಳಲ್ಲಿ ಪ್ರವಾಸ ಮಾಡಿದಾಗ, ಇತಿಹಾಸದ, ಪುರಾಣದ, ವಿಜ್ಞಾನದ ದೃಷ್ಟಿಯಿಂದ ಆಕರ್ಷಕವಾಗಿದ್ದ ವಸ್ತುಗಳನ್ನೆಲ್ಲ ಸಂಗ್ರಹಿಸಿ ಇಲ್ಲಿ ಇಟ್ಟಿದ್ದಾರೆ. ಕೆಲವು ಮರದ ಬಾಗಿಲುಗಳು ಎಷ್ಟು ಆಕರ್ಷಕವಾಗಿದೆಯೆಂದರೆ ಅವನ್ನು ನೋಡಿದಾಗ ಅವುಗಳನ್ನು ತಯಾರಿಸಿದ ಬಡಗಿಗಳ ಕಲೆಗಾರಿಕೆ ಎಷ್ಟು ಉನ್ನತವಾಗಿರಬಹುದು ಎಂಬ ಆಲೋಚನೆ ಮೂಡುತ್ತದೆ. ವಿಶ್ವದ ನಾನಾ ದೇಶಗಳಿಗೆ ಭೇಟಿಯನ್ನು ಕೊಟ್ಟಾಗ ಪೂಜ್ಯರು ನಮ್ಮಂತೆ ವೈಯಕ್ತಿಕ ಸುಖದ ವಸ್ತುಗಳನ್ನು ಹುಡುಕದೆ ಸಂಸ್ಕೃತಿಯ ವಿವಿಧ ಮುಖಗಳನ್ನು ಬಿಂಬಿಸುವ ಪದಾರ್ಥಗಳನ್ನು ಸಂಗ್ರಹಿಸಿದ್ದಾರೆ. ಅಲ್ಲಿದ್ದ ಬೀಸುವ ಕಲ್ಲನ್ನು ನೋಡಿದಾಗ ಬಾಲ್ಯದಲ್ಲಿ ನಾನು ರಾಗಿ ಬೀಸಿದ್ದು, ಬತ್ತವನ್ನು ಏತದಿಂದ, ಒನಕೆಯಿಂದ ಕುಟ್ಟಿದ್ದು ನೆನಪಿಗೆ ಬಂದಿತು. ಹೀಗೆ ಮಂಜೂಷಾದ ಬಗೆಗೆ ಎಷ್ಟು ಹೇಳಿದೂ ಸಾಲದು. ಅಲ್ಲಿ ಪುಷ್ಪದಂತ ಎಂಬ ಅಭಿಜ್ಞರು ನಮಗೆ ಒಂದೊಂದು ವಸ್ತುವಿನ ಪರಿಚಯವನ್ನು ಮಾಡಿಕೊಟ್ಟಾಗ ಜ್ಞಾನದ ಪರಿಧಿ ವಿಸ್ತೃತವಾಗುತ್ತಿದೆ ಎನ್ನಿಸಿತು.

ನಿರಂತರ

ನಲವತ್ತು ವರ್ಷಗಳ ಹಿಂದೆ ಪೂಜ್ಯರು ಗ್ರಾಮಾಭಿವೃದ್ಧಿ ಯೋಜನೆಯನ್ನು ಆರಂಭಿಸಿದರು. ಇದರ ಫಲ ಇಂದು ಅನೇಕ ಗ್ರಾಮಗಳಲ್ಲಿ ಗೋಚರಿಸಿದೆ. ಈ ಯೋಜನೆಯ ಸಂದೇಶವನ್ನು ಜನರಿಗೆ ತಲುಪಿಸಲು ಇಪ್ಪತ್ತು ವರ್ಷಗಳ ಹಿಂದೆ ಆರಂಭಗೊಂಡ ಮಾಸಿಕ ಪತ್ರಿಕೆ 'ನಿರಂತರ ಪ್ರಗತಿ'. ಶ್ರೀಮತಿ ಹೇಮಾವತಿ ಹೆಗ್ಗಡೆಯವರು ಇದರ ಗೌರವ ಸಂಪಾದಕರು. ಇದನ್ನು ಪಾಸಿಟಿವ್ ಪತ್ರಿಕೋದ್ಯಮದ ಹರಿಕಾರ ಎಂದಿದ್ದಾರೆ. ಸಮಾಜದ ಅನಿವಾರ್ಯ ಅವಶ್ಯಕತೆಗಳಿಗೆ ಪೂಜ್ಯ ವೀರೇಂದ್ರ ಹೆಗ್ಗಡೆಯವರು ಹೇಗೆ ಸ್ಪಂದಿಸುತ್ತಿದ್ದಾರೆ ಎಂಬುದಕ್ಕೆ ಇದೊಂದು ಉದಾಹರಣೆ. ಇದಕ್ಕೆ ಲಕ್ಷಾಂತರ ಗ್ರಾಹಕರಿದ್ದಾರೆ. ಗ್ರಾಮಾಭಿವೃದ್ಧಿ ಯೋಜನೆಗಳಲ್ಲಿ ಸುಮಾರು ಐವತ್ತು ಸಾವಿರ ಮಂದಿ ಕಾರ್ಯಕರ್ತರು ಸಮಾಜದ ಅಭಿವೃದ್ಧಿಗಾಗಿ ಶ್ರೀ ಹೆಗ್ಗಡೆ ದಂಪತಿಗಳ ಮಾರ್ಗದರ್ಶನದಂತೆ ಶ್ರಮಿಸುತ್ತಿದ್ದಾರೆ. ಒಂದು ಲಕ್ಷ ಹತ್ತು ಸಾವಿರದೊಂದು ಸ್ವ ಸಹಾಯ ಸಂಘಗಳು ಈ ಯೋಜನೆಯಡಿ ನಡೆಯುತ್ತಿವೆ. ದೇಶ ಕೆಟ್ಟು ಹೋಯಿತು. ಏನನ್ನೂ ಮಾಡಲಾಗದು ಎಂದು ಕೈಚೆಲ್ಲಿ ಕುಳಿತುಕೊಳ್ಳುವವರಿಗೆ ಇಲ್ಲಿ ಕಣ್ಣು ತೆರೆದು ನೋಡಬೇಕಾದ ಸಂದರ್ಭವಿದೆ. ಈ ಬಗೆಗೆ ನನಗೂ ಏನೂ ತಿಳಿದಿರಲಿಲ್ಲ. ಧರ್ಮ ಸ್ಥಳಕ್ಕೆ ಹೋದ ಕಾರಣದಿಂದ ಈ ಯೋಜನೆಯ ಬಗೆಗೆ ತಿಳಿದುಕೊಂಡೆನು.

ಸಾಹಿತ್ಯ ಸಮ್ಮೇಳನ

ಸಾಹಿತ್ಯ ಸಮ್ಮೇಳನವನ್ನು ರಾಷ್ಟ್ರ ಪ್ರಶಸ್ತಿಗೆ ಭಾಜನರಾದ ಚಲನಚಿತ್ರ ನಿರ್ದೇಶಕ ಶ್ರೀ ಶೇಷಾದ್ರಿಯವರು ಉದ್ಘಾಟಿಸಿದರು. ಕಲಾಪ್ರಧಾನ ಚಲನಚಿತ್ರಗಳನ್ನು ನಿರ್ಮಿಸಿ ಎಂಟು ಬಾರಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಕನ್ನಡಿಗ ಅವರೆಂಬುದು ಹೆಮ್ಮೆಯ ವಿಷಯ. ಉಪನ್ಯಾಸಗಳನ್ನು ನೀಡಿದ ಶ್ರೀ ರವೀಂದ್ರ ಭಟ್ಟರು 'ಸಾಹಿತ್ಯ ಮತ್ತು ಮಾಧ್ಯಮ' ಎಂಬ ವಿಷಯದಲ್ಲಿ ಗಂಭೀರ ಚಿಂತನೆಗಳನ್ನು ಸಭೆಯಲ್ಲಿ ಪ್ರಸ್ತುತಪಡಿಸಿದರು. ನವ್ಯಜೀವಿ ಎಂಬ ಅಂಕಿತದಲ್ಲಿ ಕನ್ನಡದ ಮುಕ್ತಕ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿರುವ ಕವಿ ಶ್ರೀ ಸತ್ಯೇಶ ಬೆಳ್ಳೂರ್ ಅವರು 'ಸಾಹಿತ್ಯದಿಂದ ವ್ಯಕ್ತಿತ್ವ ನಿರ್ಮಾಣ' ಎಂಬ ಬಗೆಗೆ ಮಾತನಾಡಿದರು. ಡಾ. ಗೀತಾ ವಸಂತ ಅವರು 'ಸಾಹಿತ್ಯ ಹಾಗೂ ಸಾಮರಸ್ಯ' ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ಸಾಹಿತ್ಯ ನಿತ್ಯ ನಿರಂತರವಾಗಿ ಹರಿಯುತ್ತಿರುವ ಗಂಗೆ. ಇಂದು ಜಗತ್ತಿನ ನಾನಾ ಭಾಷೆಗಳನ್ನು ವೀಕ್ಷಿಸಿದರೆ ಜ್ಞಾನ, ವಿಜ್ಞಾನ, ಕಾವ್ಯ, ಪ್ರಬಂಧ, ನಾಟಕ ಇತ್ಯಾದಿ ನಾನಾ ಪ್ರಕಾರಗಳಲ್ಲಿ ಪ್ರತಿ ಒಂದು ಕ್ಷಣದಲ್ಲೂ ಒಂದು ಹೊಸ ಪುಸ್ತಕ ಬೆಳಕನ್ನು ಕಾಣುತ್ತಿದೆ. ವಿಶ್ವ ಹೇಗೆ ಅನಂತವೋ ಹಾಗೆ ಸಾಹಿತ್ಯವೂ ಅನಂತ. ಸಾಹಿತ್ಯವು ತನ್ನಲ್ಲಿ ಸೇರಿಸಿಕೊಳ್ಳದ ವಿದ್ಯೆ ಯಾವೂ ಇಲ್ಲ.

ಸಾಹಿತ್ಯ ಸಂಗೀತ ಕಲಾವಿಹೀನಃ
ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ।
ತೃಣಾನ್ನಖಾದನ್ನಪಿ ಜೀವಮಾನಃ
ತದ್ ಭಾಗಧೇಯಂ ಪರಮಂ ಪಶೂನಾಮ್ ।

(ಸಾಹಿಯ ಸಂಗೀತ ಕಲೆಗಳ ಗಂಧವಿಲ್ಲದವನು ಸಾಕ್ಷಾತ್ ಪಶು, ಅವನಿಗೆ ಬಾಲ, ಕೊಂಬು ಮಾತ್ರ ಇಲ್ಲ. ಅವನು ಹುಲ್ಲನ್ನು ತಿನ್ನುವುದಿಲ್ಲವಲ್ಲ, ಅದೇ ಪಶುಗಳ ದೊಡ್ಡ ಸುದೈವ, ಸೌಭಾಗ್ಯ).

ಈ ಸಾಹಿತ್ಯದ ಮರ್ಮಜ್ಞರನ್ನು ಆಹ್ವಾನಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರಿಗೂ ಅವರ ಸಹವರ್ತಿಗಳಿಗೂ ಸಂಸ್ಕೃತಿ ಪ್ರಿಯರ ವಂದನೆಗಳು.

ಮೈಸೂರು ಜಿಲ್ಲೆಯಲ್ಲಿ ಮೂರು ಪಕ್ಷಗಳ ಭುಜಬಲ ಪರಾಕ್ರಮ ಪ್ರದರ್ಶನಕ್ಕೆ ಸಿದ್ಧತೆ

● ಎಸ್.ಬಿ. ದೇವರಾಜ

ಮೈಸೂರು,ನ.29–ಮುಂದಿನ ವಿಧಾನಸಭಾ ಚುನಾವಣೆಗೆ ಅಖಾಡ ಸಜ್ಜಾಗುತ್ತಿದ್ದು, ಮೈಸೂರು ಜಿಲ್ಲೆಯಲ್ಲೂ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ.

ಜಿಲ್ಲೆಯ ಒಟ್ಟು 11 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ತಲಾ ನಾಲ್ವರು ಹಾಗೂ ಬಿಜೆಪಿಯ ಮೂವರು ಶಾಸಕರಿದ್ದಾರೆ. ಹಾಲಿ ಶಾಸಕರು ಮುಂದಿನ ಚುನಾವಣೆಯಲ್ಲೂ ಟಿಕೆಟ್ ಗಿಟ್ಟಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಒಂದಿಲ್ಲೊಂದು ಕಾರ್ಯಕ್ರಮದ ಮೂಲಕ ಸದಾ ಜನರ ನಡುವೆಯೇ ಇದ್ದು ಮತದಾರರ ಗಟ್ಟಿಗೊಳಿಸಿಕೊಳ್ಳುವ ಶತ ಪ್ರಯತ್ನದಲ್ಲಿದ್ದಾರೆ.

ಕಳೆದ ಚುನಾವಣೆಯಲ್ಲಿ ಪರಾಭವಗೊಂಡ ಅಭ್ಯರ್ಥಿಗಳೂ ಕ್ಷೇತ್ರ ಪ್ರದಕ್ಷಿಣೆಯಲ್ಲಿ ನಿರತರಾಗಿದ್ದಾರೆ. ಈ ಬಾರಿಯೂ ಪಕ್ಷದ ಟಿಕೆಟ್ ಪಡೆದು ಹೇಗಾದರೂ ಜಯ ಗಳಿಸಬೇಕೆಂಬ ಆಶಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಹಾಲಿ ಶಾಸಕರ ವೈಫಲ್ಯಗಳನ್ನು ಗುರುತಿಸಿ ಜನರ ಮುಂದಿಡುವುದರ ಜೊತೆಗೆ ತಮ್ಮ ಪಕ್ಷದ ವತಿಯಿಂದ ಹಾಗೂ ವೈಯಕ್ತಿಕವಾಗಿ ಜನೋಪಯೋಗಿ ಕಾರ್ಯಕ್ರಮಗಳನ್ನು ಆಯೋಜಿಸಿ, ಮತದಾರರನ್ನು ಸೆಳೆಯುವ ತಂತ್ರ ಅನುಸರಿಸುತ್ತಿದ್ದಾರೆ.

ಕಳೆದ ಚುನಾವಣೆಯಲ್ಲಿ ಗೆದ್ದು ಶಾಸಕರಾದವರು, ಪರಾಭವಗೊಂಡವರು ಮಾತ್ರವಲ್ಲದೆ ಹಲವು ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿರುವವರು, ಮುಂಚೂಣಿ ಘಟಕಗಳಲ್ಲಿ ಗುರುತಿಸಿಕೊಂಡವರು, ಸ್ಥಳೀಯ ಸಂಸ್ಥೆಗಳ ಸದಸ್ಯರಾಗಿದ್ದವರು, ನಿಗಮ–ಮಂಡಳಿಗಳ ಅಧ್ಯಕ್ಷರಾಗಿದ್ದವರು, ಸಾಮಾಜಿಕ ಕಾರ್ಯಕ್ರಮಗಳ ಮೂಲಕ ರಾಜಕೀಯದ ಕನಸು ಹೊತ್ತು ನಡೆದವರು, ನಾಯಕರುಗಳ ನಿಕಟವರ್ತಿಗಳು, ಹೀಗೆ ಹಲವು ವರ್ಗದಲ್ಲಿ ಕ್ಷೇತ್ರದ ಜನರಿಗೆ ಚಿರಪರಿಚಿತರಾದವರೂ ಟಿಕೆಟ್ ಆಕಾಂಕ್ಷಿಗಳಾಗಿದ್ದು, ಕ್ಷೇತ್ರದೆಲ್ಲೆಡೆ ಪಕ್ಷ ಸಂಘಟನೆ ನೆಪದಲ್ಲಿ ಪ್ರವಾಸ ನಡೆಸಿದ್ದಾರೆ.

ಸದ್ಯಕ್ಕೆ ಸಮಬಲ: ಕಳೆದ 2018ರ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಬಹುತೇಕ ಸಮಬಲ ಸಾಧಿಸಿವೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರನ್ನು 36,042 ಮತಗಳ ಅಂತರದಲ್ಲಿ ಮಣಿಸುವ ಮೂಲಕ ಜೆಡಿಎಸ್‌ನ ಜಿ.ಟಿ.ದೇವೇಗೌಡರು ಶಾಸಕರಾಗಿ ಆಯ್ಕೆಯಾದರು. ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿಯ ಎಸ್.ಎ.ರಾಮದಾಸ್, ಕಾಂಗ್ರೆಸ್‌ನ ಎಂ.ಕೆ.ಸೋಮಶೇಖರ್ ವಿರುದ್ಧ 26,347 ಮತಗಳ ಅಂತರದಲ್ಲಿ ಗೆಲುವು ಪಡೆದರು. ಚಾಮರಾಜ ಕ್ಷೇತ್ರದಲ್ಲೂ ಬಿಜೆಪಿಯ ಎಲ್.ನಾಗೇಂದ್ರ, ಮಾಜಿ ಶಾಸಕ ಕಾಂಗ್ರೆಸ್‌ನ ವಾಸು ಅವರನ್ನು 14,936 ಮತಗಳ ಅಂತರದಲ್ಲಿ ಮಣಿಸಿ, ಶಾಸಕರಾದರು. ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ತನ್ವೀರ್ ಸೇಠ್, ಬಿಜೆಪಿಯ ಸಂದೇಶ್ ಸ್ವಾಮಿ ವಿರುದ್ಧ 18,127 ಮತಗಳ ಗೆಲುವು ಕಂಡರು. ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿಯ ಬಿ.ಹರ್ಷವರ್ಧನ್ ಕಾಂಗ್ರೆಸ್‌ನ ಕಳಲೆ ಕೇಶವಮೂರ್ತಿ ವಿರುದ್ಧ 12,479 ಮತಗಳು, ವರುಣಾದಲ್ಲಿ ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ, ಬಿಜೆಪಿಯ ಟಿ.ಬಸವರಾಜು ವಿರುದ್ಧ 58,616 ಮತ, ತಿ.ನರಸೀಪುರದಲ್ಲಿ ಜೆಡಿಎಸ್‌ನ ಎಂ.ಅಶ್ವಿನ್‌ಕುಮಾರ್ ಕಾಂಗ್ರೆಸ್‌ನ ಡಾ.ಹೆಚ್.ಸಿ.ಮಹದೇವಪ್ಪ(ಮಾಜಿ ಸಚಿವ) ವಿರುದ್ಧ 28,478 ಮತ, ಪಿರಿಯಾಪಟ್ಟಣದಲ್ಲಿ ಜೆಡಿಎಸ್‌ನ ಕೆ.ಮಹದೇವ್ ಕಾಂಗ್ರೆಸ್‌ನ ಕೆ.ವೆಂಕಟೇಶ್ ವಿರುದ್ಧ 7,493 ಮತ, ಕೃಷ್ಣರಾಜನಗರ (ಕೆ.ಆರ್.ನಗರ)ದಲ್ಲಿ ಜೆಡಿಎಸ್‌ನ ಸಾ.ರಾ.ಮಹೇಶ್ ಕಾಂಗ್ರೆಸ್‌ನ ಡಿ.ರವಿಶಂಕರ್ ವಿರುದ್ಧ 1,779 ಮತ, ಹೆಚ್.ಡಿ.ಕೋಟೆಯಲ್ಲಿ ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು ಜೆಡಿಎಸ್‌ನ ಚಿಕ್ಕಣ್ಣ ವಿರುದ್ಧ 22,093 ಮತಗಳ ಅಂತರದಲ್ಲಿ ಗೆದ್ದು, ಶಾಸಕರಾಗಿದ್ದಾರೆ.

ಹುಣಸೂರು ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ 8,575 ಮತಗಳ ಅಂತರದಲ್ಲಿ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ಅವರನ್ನು ಮಣಿಸಿದ್ದ ಎ.ಹೆಚ್.ವಿಶ್ವನಾಥ್ ನಂತರದ ರಾಜಕೀಯ ಬೆಳವಣಿಗೆಯಲ್ಲಿ ರಾಜೀನಾಮೆ ನೀಡಿ, ಬಿಜೆಪಿ ಸೇರಿದರು. 2019ರ ಉಪಚುನಾವಣೆಯಲ್ಲಿ ಮತ್ತೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರಾದರೂ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ವಿರುದ್ಧ 39,727 ಮತಗಳಿಂದ ಪರಾಭವಗೊಂಡರು. ಪರಿಣಾಮ ಜಿಲ್ಲೆಯಲ್ಲಿ ಜೆಡಿಎಸ್ ಒಂದು ಸ್ಥಾನ ಕಳೆದುಕೊಂಡಿತು. ಸದ್ಯ ಜಿಲ್ಲೆಯ ತಲಾ 4 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಇನ್ನುಳಿದ 3 ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರಿದ್ದು, ಸದ್ಯಕ್ಕೆ ಹೆಚ್ಚು ಕಡಿಮೆ ಮೂರೂ ಪಕ್ಷಗಳು ಸಮಬಲ ಹೊಂದಿವೆ.

ನಂತರದ ಚುನಾವಣೆಗಳು: ನಂತರದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಪ್ರತಾಪ್ ಸಿಂಹ, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸಿ.ಹೆಚ್.ವಿಜಯಶಂಕರ್ ವಿರುದ್ಧ ಗೆಲುವು ಸಾಧಿಸಿದರು. ಆದರೆ ಮೈಸೂರು–ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ ಹಾಗೂ ಜೆಡಿಎಸ್‌ನ ಸಿ.ಎನ್.ಮಂಜೇಗೌಡ ಆಯ್ಕೆಯಾದರು. ದಕ್ಷಿಣ ಪದವೀಧರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಮೂರೂ ಪಕ್ಷಗಳ ಸೆಣಸಾಟದಲ್ಲಿ ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ ಗೆಲುವಿನ ನಗೆ ಬೀರಿದರು. ನಂತರ ಮೈಸೂರು ನಗರ ಪಾಲಿಕೆ ಮೇಯರ್–ಉಪಮೇಯರ್ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಬೀಗಿತು. ರಾಜಕೀಯ ತಂತ್ರಗಾರಿಕೆ ಪರಿಣಾಮ ಎರಡೂ ಸ್ಥಾನವೂ ಬಿಜೆಪಿಗೆ ದಕ್ಕಿವೆ. ಈ ನಡುವೆ ಗ್ರಾಪಂ ಚುನಾವಣೆಯಲ್ಲೂ ಮೂರು ಪಕ್ಷಗಳ ಬೆಂಬಲಿತರು ಗೆಲುವು ಸಾಧಿಸಿದ್ದಾರೆ.

ನಿರೀಕ್ಷೆ ಕಷ್ಟಸಾಧ್ಯ: ಹಿಂದಿನ ಸಾರ್ವತ್ರಿಕ ಚುನಾವಣೆ ಹಾಗೂ ನಂತರದಲ್ಲಾದ ಚುನಾವಣೆಗಳ ಫಲಿತಾಂಶದ ಆಧಾರದಲ್ಲಿ 2023ರ ವಿಧಾನಸಭಾ ಚುನಾವಣೆ ಎದುರಿಸಲಾಗದು. ಮೂರು ಪಕ್ಷಗಳು ಒಂದಿಲ್ಲೊಂದು ಚುನಾವಣೆಯಲ್ಲಿ ಗೆಲುವು ಕಾಣುವ ಮೂಲಕ ಶಕ್ತಿ ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಸಿವೆ. ಹಳೇ ಮೈಸೂರು ಭಾಗದಲ್ಲಿ ಅತ್ಯಂತ ಪ್ರಬಲವಾಗಿದ್ದ ಜೆಡಿಎಸ್ ಮತ್ತೆ ಪುಟಿದೇಳುವ ಆಶಯದೊಂದಿಗೆ ತಳಮಟ್ಟದಿಂದ ಸಂಘಟನೆಗೆ ಮುಂದಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆಯಾಗಿರುವುದರಿಂದ ಇಲ್ಲಿ ಕಾಂಗ್ರೆಸ್ ತನ್ನ ಬಲ ಹೆಚ್ಚಿಸಿಕೊಳ್ಳಲು ಶ್ರಮಿಸುತ್ತಿದೆ. ನಗರ ಪ್ರದೇಶದಲ್ಲಿ ಬಲಿಷ್ಠವಾಗಿರುವ ಬಿಜೆಪಿಯೂ ತನ್ನ ಸಾಮರ್ಥ್ಯ ವಿಸ್ತರಿಸಿಕೊಳ್ಳುವ ತವಕದಲ್ಲಿದೆ. ಈ ನಿಟ್ಟಿನಲ್ಲಿ ಇನ್ನು ಮುಂದೆ ಎಲ್ಲಾ ಪಕ್ಷದ ನಾಯಕರೂ ಅಖಾಡಕ್ಕಿಳಿದು ಪಕ್ಷ ಸಂಘಟನೆಯಲ್ಲಿ ತೊಡಗುವ ಸಾಧ್ಯತೆ ಇದೆ.



ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಸದ್ಯದ ರಾಜಕೀಯ ಸ್ಥಿತಿ-ಗತಿ. ಮುಂಬರುವ ಚುನಾವಣೆಗೆ ಆಕಾಂಕ್ಷಿಗಳ ಪಟ್ಟಿ. ಇನ್ನಿತರ ಮಾಹಿತಿಯನ್ನೊಳಗೊಂಡ ಕ್ಷೇತ್ರವಾರು ಸರಣಿ ವರದಿ ಮುಂದಿನ ದಿನಗಳಲ್ಲಿ ಪ್ರಕಟಗೊಳ್ಳಲಿದೆ.

ಆಂತರಿಕ ಕಠಿಣ ಸವಾಲು

ಶಾಸಕರು ಹಾಗೂ ಮಾಜಿ ಶಾಸಕರ ನಡುವೆ ಈಗಾಗಲೇ ವಾಕ್ಸಮರ ಆರಂಭವಾಗಿದೆ. ಯಾರ ಕಾಲದಲ್ಲಿ ಎಷ್ಟು ಕೋಟಿ ಕೆಲಸವಾಗಿದೆ ಎಂಬ ಲೆಕ್ಕಾಚಾರದ ಮಾತುಗಳನ್ನಾಡುತ್ತಿದ್ದಾರೆ. ಹೀಗೆ ಪ್ರತಿಪಕ್ಷಗಳ ನಡುವಿನ ಸಮರವಷ್ಟೇ ಅಲ್ಲದೆ ಈ ಬಾರಿ ಆಂತರಿಕ ಸವಾಲುಗಳು ಕಠಿಣವಾಗಿರಲಿವೆ. ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿಯೊಂದು ಪಕ್ಷದ ಐದಾರು ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಈಗಾಗಲೇ ಕೆಪಿಸಿಸಿ ಕಚೇರಿಗೆ ಅರ್ಜಿ ಸಲ್ಲಿಸಿದ್ದು, ಬಿಜೆಪಿ ಹಾಗೂ ಜೆಡಿಎಸ್ ಆಕಾಂಕ್ಷಿಗಳು ಪಕ್ಷದ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ. ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವುದು ಪಕ್ಷಗಳಿಗೆ ಕಗ್ಗಂಟಾಗಲಿದೆ. ಎಲ್ಲರನ್ನೂ ಸಮಾಧಾನಪಡಿಸಿ ಒಬ್ಬರನ್ನು ಆಯ್ಕೆ ಮಾಡುವುದು ದೊಡ್ಡ ಸವಾಲಾಗಲಿದೆ. ನಾಯಕರ ಮಾತನ್ನು ಮನ್ನಿಸಿ ಹಿಂದೆ ಸರಿದರೂ ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡುವರೋ? ಅಥವಾ ಗೌಪ್ಯವಾಗಿ ಪ್ರತಿಸ್ಪರ್ಧಿಗೆ ಸಹಕಾರ ನೀಡುವರೋ? ಎಂಬ ಆತಂಕ ಸೃಷ್ಟಿಯಾಗಲಿದೆ. ಈ ಪರಿಸ್ಥಿತಿಯಲ್ಲಿ ಯಾವ ಲೆಕ್ಕಾಚಾರಗಳೂ ತಲೆಕೆಳಗಾಗುವ ಸಾಧ್ಯತೆ ಇದೆ. ಹಾಗಾಗಿ ಮುಂಬರುವ ಚುನಾವಣಾ ಅಖಾಡ ರೋಚಕವಾಗಿರಲಿದೆ ಎಂದು ರಾಜಕೀಯ ಆಸಕ್ತರು ಅಭಿಪ್ರಾಯಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಇವರು ನನ್ನೊಂದಿಗಿದ್ದು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವಷ್ಟರ ಮಟ್ಟಕ್ಕೆ ಬೆಳೆದಿದ್ದು ಸಂತೋಷವಾಗ್ತಿದೆ...!

ಮೈಸೂರು,ನ.29(ಜಿಎ)–ನನ್ನೊಂದಿಗೆ ಇದ್ದವರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವಷ್ಟರ ಮಟ್ಟಿಗೆ ಬೆಳೆದಿದ್ದಾರೆ. ಇದೇ ನಾಯಕತ್ವದ ಬೆಳವಣಿಗೆ ಅನ್ನೋದು. ಅವರಿಗೆ ಅಂತಹ ಶಕ್ತಿ ಬಂದಿದೆ ಎಂದರೆ ಅದುವೆ ಪ್ರಜಾಪ್ರಭುತ್ವದ ಮೆರಗು



ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಮ್ಮನ್ನು ವಿರೋಧಿಸುತ್ತಿರುವವರಿಗೆ ಟಾಂಗ್ ನೀಡಿದರು.

ಜಿಟಿಡಿ ಹುಟ್ಟುಹಬ್ಬದ ಅಂಗವಾಗಿ ವಿಜಯನಗರ 3ನೇ ಹಂತದ ನಿವಾಸಿಗಳು ಏರ್ಪಡಿಸಿದ್ದ ಸಮಾರಂಭದಲ್ಲಿ ಕೇಕ್ ಕತ್ತರಿಸಿ, ಪೌರಕಾರ್ಮಿಕರಿಗೆ ಹಾಗೂ ಬಡವರಿಗೆ ಹಾಟ್ ಬಾಕ್ಸ್ ವಿತರಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದರು. ಜಿ.ಟಿ.ದೇವೇಗೌಡರ ವಿರುದ್ಧ ಸ್ವಾಭಿಮಾನಿ ಕಾರ್ಯಕರ್ತರು ಸಭೆ ನಡೆಸಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಳೆದ 10 ವರ್ಷದ ಹಿಂದೆ ಇವರ ಹೆಸರು ಯಾರಿಗೂ ಗೊತ್ತಿರಲಿಲ್ಲ. ಈಗ ಬೆಳೆದಿದ್ದಾರೆ. ಇಂದು ಅವರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಹೊರಟಿರುವುದನ್ನು ನೋಡಿದರೆ ನನಗೆ ಸಂತಸವಾಗುತ್ತದೆ. ನನ್ನ ಕ್ಷೇತ್ರದ ಜನ ಬೆಳೆಯಬೇಕು ಎಂಬ ದೃಷ್ಟಿಯಿಂದ ಇವರನ್ನು ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ, ಎಪಿಎಂಸಿ, ಹಾಲು ಒಕ್ಕೂಟದ ಚುನಾವಣೆಗಳಲ್ಲಿ ಗೆಲ್ಲಿಸಿದ್ದೇನೆ. ನಮ್ಮ ಸರ್ಕಾರವಿಲ್ಲದಿದ್ದರೂ, ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಇವರಲ್ಲಿ ಸಮರ್ಥ ನಾಯಕತ್ವ ಬರಲಿ ಎಂಬ ಉದ್ದೇಶದಿಂದ ಶಕ್ತಿ ಮೀರಿ ಶ್ರಮಿಸಿ ಅವರನ್ನೆಲ್ಲಾ ಗೆಲ್ಲಿಸಿದ್ದೇನೆ. ಅವರೂ ಕೂಡ ಶಾಸಕರಾಗುವ ಮಟ್ಟಕ್ಕೆ ಬೆಳೆಯಬೇಕು ಎಂಬುದು ನನ್ನ ಅಭಿಲಾಷೆಯಾಗಿತ್ತು. ಈಗ ಅವರಿಗೆ ಅಂತಹ ಶಕ್ತಿ ಬಂದಿದೆ ಎಂದರೆ. ಅದೇ ಅಲ್ಲವೇ ಪ್ರಜಾಪ್ರಭುತ್ವಕ್ಕೆ ಮೆರಗು ಎಂದು ಪ್ರಶ್ನಿಸಿದರು.

ಜಿ.ಟಿ.ದೇವೇಗೌಡರು ತಮ್ಮ ಕುಟುಂಬದವರನ್ನು ಮಾತ್ರ ಬೆಳೆಸಿದ್ದಾರೆ ಎಂಬ ಆರೋಪ ಕುರಿತು ಪ್ರತಿಕ್ರಿಯಿಸಿದ ಗೌಡರು, ನನ್ನ ಪುತ್ರ ಹರೀಶ್‌ಗೌಡ ನನ್ನು ಹುಣಸೂರಿನಲ್ಲಿ ಸಹಕಾರ ಸಂಘದ ಮೂಲಕ ಅಲ್ಲಿನ ಜನ ಬೆಳೆಸುತ್ತಿದ್ದಾರೆಯೇ ಹೊರತು ಇವರ್‍ಯಾರೂ (ವಿರೋಧಿಸುತ್ತಿರುವವರು) ಅವನನ್ನು ಬೆಳೆಸಿಲ್ಲ. ಬದಲಾಗಿ ಹರೀಶ್ ಗೌಡನೆ ಇವರಿಗೆ ಸಹಾಯ ಮಾಡಿದ್ದಾನೆ. ವಿವಿಧ ಚುನಾವಣೆಗಳಲ್ಲಿ ಇವರನ್ನು ಗೆಲ್ಲಿಸಿದ್ದಾನೆ ಎಂದರು. ಈಗ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಿರುವ ಈ ಐವರ ಜೊತೆ ಮತ್ತೆ ಐವರು ಮುಂದೆ ಬರಬೇಕು. ಚುನಾವಣೆಗಳಲ್ಲಿ ಆರೋಗ್ಯಕರ ಪೈಪೋಟಿ ಇರಬೇಕು. ಅದೇ ಪ್ರಜಾಪ್ರಭುತ್ವ ಎಂದರು. ಆಪ್ತರಾಗಿದ್ದವರೇ ತಿರುಗಿಬಿದ್ದಿರುವಾಗ ಅವರೊಂದಿಗಿನ ಪೈಪೋಟಿಯನ್ನು ಎದುರಿಸುವ ಶಕ್ತಿ ಇದೆಯೆ? ಎಂಬ ಪ್ರಶ್ನೆಗೆ ಉತ್ತರಿಸಿದ ಗೌಡರು, ನನಗೆ ಯಾವುದೇ ಶಕ್ತಿ ಇಲ್ಲ. ಸಿಎಂ ಆಗಿದ್ದ ಸಿದ್ದರಾಮಯ್ಯ ಅವರನ್ನು ಎದುರಿಸುವ ಶಕ್ತಿ ನನ್ನಲ್ಲಿ ತುಂಬಿದ್ದು ನನ್ನ ಕ್ಷೇತ್ರದ ಜನ. ಸಿದ್ದರಾಮಯ್ಯರನ್ನು ಸೋಲಿಸಿದ್ದು ಕೂಡ ನನ್ನ ಕ್ಷೇತ್ರದ ಜನರೇ ಹೊರತು ನಾನಲ್ಲ. ನಾನೇನಿದ್ದರೂ ಕ್ಷೇತ್ರದ ಜನರ ಸೇವಕನಷ್ಟೇ ಎಂದರು.

ನನಗೆ ಯಾರ ಮೇಲೂ ಅಸಮಾಧಾನವಿಲ್ಲ. ನಾನು ಯಾರನ್ನೂ ಜೆಡಿಎಸ್ ಬಿಟ್ಟು ಹೋಗಿ ಎಂದು ಹೇಳಿಲ್ಲ. ಯಾರ ಬಗ್ಗೆ ಒಂದೇ ಒಂದು ಅಪಸ್ವರವೆತ್ತಿಲ್ಲ. ಎಲ್ಲರೂ ಇಲ್ಲೇ ಇರಬೇಕೆಂಬುದೇ ನನ್ನ ಆಸೆ. ಈ ವಿಚಾರವನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಈಗಾಗಲೇ ತಿಳಿಸಿದ್ದೇನೆ ಎಂದು ಹೇಳಿದರು.

ಕಾದಾಟದಲ್ಲಿ ಗಾಯಗೊಂಡಿದ್ದ ಮತ್ತೊಂದು ಕಾಡಾನೆ ಸಾವು

ಮೈಸೂರು,ನ.29(ಎಂಟಿವೈ)– ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ. ಕುಪ್ಪೆ ವಲಯದ ಆನೆಮಾಳದ ಬಳಿ ಮದಗಜಗಳ ಕಾದಾಟದಲ್ಲಿ ಗಾಯ ಗೊಂಡಿದ್ದ ಗಂಡಾನೆಯೊಂದು ಮೃತಪಟ್ಟಿದೆ. ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಡಿ.ಬಿ.ಕುಪ್ಪೆ ವಲಯಕ್ಕೆ ಸೇರಿರುವ ಆನೆ ಮಾಳದ ಬಳಿ ನ.25ರಂದು ಮದಗಜಗಳ ನಡುವೆ ಘೋರ ಕಾಳಗ ನಡೆದಿತ್ತು. ಈ ಕಾಳಗದಲ್ಲಿ ಗಾಯಗೊಂಡಿದ್ದ ಒಂದು ಗಂಡಾನೆ ನ.26ರಂದು ಮೃತಪಟ್ಟಿತ್ತು. ಅದನ್ನು ಅರಣ್ಯ ಇಲಾಖೆ ಸಿಬ್ಬಂದಿ ಮರಣೋತ್ತರ ಪರೀಕ್ಷೆ ನಡೆಸಿದ್ದರು. ಆದರೆ, ಮತ್ತೊಂದು ಆನೆ ಸುಳಿವು ದೊರೆತಿರಲಿಲ್ಲ. ಆ ಆನೆಯೂ ಗಂಭೀರವಾಗಿ ಗಾಯಗೊಂಡಿರಬಹುದು ಎಂಬ ಸಂಶಯ ವ್ಯಕ್ತವಾಗಿತ್ತು.

ಗಾಯಗೊಂಡಿದ್ದ ಈ ಆನೆ ಸಹ ಮೃತಪಟ್ಟಿದ್ದು, ಮಂಗಳವಾರ ಮೃತದೇಹ ಡಿ.ಬಿ.ಕುಪ್ಪೆ ವಲಯದಲ್ಲಿ ಆನೆಮಾಳದಲ್ಲಿ ದೊರೆತಿದೆ. ಅಧಿಕಾರಿಗಳು ಆನೆಯ ಮರಣೋತ್ತರ ಪರೀಕ್ಷೆ ನಡೆಸಿ, ಹೆಚ್ಚಿನ ಪರೀಕ್ಷೆಗೆ ಆನೆಗಳ ಕೆಲ ಅಂಗಾಂಗದ ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ. ಡಿ.ಬಿ.ಕುಪ್ಪೆ ಅರಣ್ಯ ವಲಯದಲ್ಲಿ ನ.25ರಂದು ನಡೆದಿದ್ದ ಮದಗಜಗಳ ಕಾಳಗದಲ್ಲಿ ಈ ಎರಡೂ ಆನೆಗಳು ಸಾವನ್ನಪ್ಪಿದ್ದರೆ ಇದಕ್ಕೆ 2 ದಿನಗಳ ಮುನ್ನ ಮತ್ತಿಗೋಡು ಸಾಕಾನೆ ಶಿಬಿರದ ಬಳಿಯ ಅರಣ್ಯದಲ್ಲಿ ನಡೆದಿದ್ದ ಮದಗಜಗಳ ಕಾಳಗದಲ್ಲಿ ಭವಿಷ್ಯದ ಅಂಬಾರಿ ಆನೆ ಎಂದೇ ಕರೆಯಲ್ಪಡುತ್ತಿದ್ದ ಗೋಪಾಲಸ್ವಾಮಿ ಸಾವನ್ನಪ್ಪಿದ್ದ.

ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಜಿ.ಟಿ.ದೇವೇಗೌಡ ಸ್ಪರ್ಧೆ ನಿರ್ಧಾರದ ಹಿನ್ನೆಲೆ: ಸ್ವಾಭಿಮಾನಿ ಕಾರ್ಯಕರ್ತರ ಸಭೆ

ಜೆಡಿಎಸ್‌ಗೆ ಅತೃಪ್ತ ಮುಖಂಡರ ರಾಜೀನಾಮೆ ನಿರ್ಧಾರ



ಮೈಸೂರು ತಾಲೂಕಿನ ಕೇರ್ಗಳ್ಳಿಯ ಕಲ್ಯಾಣ ಮಂಟಪವೊಂದರಲ್ಲಿ ಮಂಗಳವಾರ ಆಯೋಜಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅತೃಪ್ತ ಮುಖಂಡರ ಸಭೆ.

ಮೈಸೂರು, ನ.29(ಎಂಟಿವೈ)– ಮುಂಬರುವ ವಿಧಾನಸಭೆ ಚುನಾವಣೆಗೆ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಶಾಸಕ ಜಿ.ಟಿ.ದೇವೇಗೌಡರ ಹೆಸರು ಅಂತಿಮಗೊಳಿಸುತ್ತಿದ್ದಂತೆ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ವಲಯದಲ್ಲಿ ಕೆಲವರು ಅಸಮಾಧಾನಗೊಂಡಿದ್ದು, ಇಂದು ನಡೆದ ಅತೃಪ್ತರ ಸಭೆಯಲ್ಲಿ ಜೆಡಿಎಸ್ ತೊರೆಯಲು ಒಕ್ಕೊರಲಿನ ನಿರ್ಧಾರ ಪ್ರಕಟಿಸಿದರು.

ಮೈಸೂರು ತಾಲೂಕಿನ ಕೇರ್ಗಳ್ಳಿಯ ಕಲ್ಯಾಣ ಮಂಟಪವೊಂದರಲ್ಲಿ ಮಂಗಳವಾರ ಆಯೋಜಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸ್ವಾಭಿಮಾನ ಕಾರ್ಯಕರ್ತರ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಂಡಿದ್ದು, ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿಯೂ ಕೆಲ ಮುಖಂಡರು ಘೋಷಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಬಂಡಾಯ ನಾಯಕರು ಶಾಸಕ ಜಿ.ಟಿ.ದೇವೇಗೌಡ ವಿರುದ್ಧ ನಡೆಸಿದ ಸಮಾವೇಶದಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿ, 'ನಾವು ಜೆಡಿಎಸ್‌ನಲ್ಲಿ ಇರಬೇಕೇ, ಬೇಡವೇ ಎಂದು ನೆರೆದಿದ್ದ ಕಾರ್ಯಕರ್ತರನ್ನು ಪ್ರಶ್ನಿಸಿದರು. ಈ ವೇಳೆ ರಾಜೀನಾಮೆ ಕೊಡಿ ಎಂದು ಕಾರ್ಯಕರ್ತರು ಒಕ್ಕೊರಲಿನಿಂದ ಬೆಂಬಲಿಸಿದರು.

ನಿಮ್ಮ ಆಣತಿಯಂತೆ ರಾಜೀನಾಮೆ ನೀಡುತ್ತೇವೆ. ಮುಂದಿನ ನಮ್ಮ ರಾಜಕೀಯ ನಿರ್ಧಾರದ ಬಗ್ಗೆ ಮತ್ತೆ ಸ್ವಾಭಿಮಾನಿ ಸಮಾವೇಶ ಮಾಡುತ್ತೇವೆ. ನಿಮ್ಮ ತೀರ್ಮಾನದಂತೆ ನಡೆಯುತ್ತೇವೆ. ಈ ಸಭೆಗೆ ಜೆಡಿಎಸ್ ಕಾರ್ಯಕರ್ತರನ್ನು ಮಾತ್ರ ಕರೆದಿದ್ದೇವೆ. ಆದರೆ, ಇಷ್ಟು ಸಂಖ್ಯೆಯಲ್ಲಿ ಕಾರ್ಯಕರ್ತರು ಬರುತ್ತಾರೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರನ್ನು ಸೋಲಿಸಿ ತಪ್ಪು ಮಾಡಿದ್ದೇವೆ. ಮುಂದಿನ ಚುನಾವಣೆಯಲ್ಲಿ ಜಿಟಿಡಿಗೆ ಪಾಠ ಕಲಿಸುತ್ತೇವೆ ಎಂದು ಎಚ್ಚರಿಸಿದರು.

ಹುಷಾರಿಲ್ಲದ ಸಂದರ್ಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ತಮ್ಮ ಮನೆಗೆ ಕರೆಸಿ, ಮೊಸಳೆ ಕಣ್ಣೀರು ಹಾಕ್ತೀರಿ. ನಿಮ್ಮ ಸ್ವಾರ್ಥಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಜನರನ್ನು ಬಲಿ ಕೊಡುತ್ತಿದ್ದೀರಾ ಎಂದು ಮಾವಿನಹಳ್ಳಿ ಸಿದ್ದೇಗೌಡ ಪ್ರಶ್ನಿಸಿದರು. ರಾಜಕೀಯದ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇವೆ. ಯಾವ ಮನವೊಲಿಕೆಗೂ ಬಗ್ಗುವ ಪ್ರಶ್ನೆಯೇ ಇಲ್ಲ. ಆ ಹಂತ ದಾಟಿ ಇಂದು ಜೆಡಿಎಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ತೀರ್ಮಾನ ಮಾಡಿದ್ದೇವೆ ಎಂದರು.

ಜಿಟಿಡಿಯಿಂದ ಜೆಡಿಎಸ್‌ಗೆ ದ್ರೋಹ: ಜಿ.ಪಂ ಮಾಜಿ ಸದಸ್ಯ ಮಾದೇಗೌಡ ಮಾತನಾಡಿ, ಜಿಟಿಡಿ ಅವರು ಚುನಾವಣೆಗಳಲ್ಲಿ ಜೆಡಿಎಸ್‌ಗೆ ದ್ರೋಹ ಬಗೆದರು. ಕುಮಾರಣ್ಣ ನಮ್ಮನ್ನೆಲ್ಲ ಕರೆದು ಪಕ್ಷದ ಸಂಘಟನೆ ಮಾಡಿ ಎಂದಿದ್ದರು. ನಿಮ್ಮಲ್ಲಿ ಒಬ್ಬರಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಕೊಡುತ್ತೇನೆ ಎಂದೂ ಭರವಸೆ ನೀಡಿದ್ದರು. ಜಿಟಿಡಿ ಮತ್ತೆ ಪಕ್ಷಕ್ಕೆ ಬಂದಾಗ, ನಾವು ಪ್ರಶ್ನೆ ಮಾಡಿದೆವು. 'ನನ್ನದೇನು ಇಲ್ಲ ಬ್ರದರ್. ಐ ಆಮ್ ಹೆಲ್ಪ್‌ಲೆಸ್ ಎಂದು ಹೆಚ್‌ಡಿಕೆ ಸಹ ಕೈ ಬಿಟ್ಟರು ಎಂದರು. ಜಿಟಿಡಿ, ಮೇಯರ್ ಚುನಾವಣೆ ವೇಳೆ ನನ್ನ ಬೆನ್ನಿಗೆ ಚೂರಿ ಹಾಕಿದ್ದರು. ನಾನು ಅವರಿಗಾಗಿ ದುಡಿದಿರುವೆ. ಆದರೆ, ನನ್ನ ಹೆಂಡತಿಯನ್ನು ಮೇಯರ್ ಸ್ಥಾನದಿಂದ ಕೆಳಗಿಳಿಸಿದರು. ನನ್ನ ನಾದಿನಿಯನ್ನು ಚುನಾವಣೆಯಲ್ಲಿ ನಿಲ್ಲಿಸಿದ್ದಾಗ ಅಪ್ಪ–ಮಗ ಎದುರಾಳಿಗಳಿಗೆ ಸಹಾಯ ಮಾಡಿ, ಸೋಲಿಸಿದ್ದರು. ಮುಂದಿನ ಚುನಾವಣೆಯಲ್ಲಿ ನಿಮಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಗುಡುಗಿದರು.

ಸೋಲಿಸೋದು ಖಚಿತ: ಸಭೆಯಲ್ಲಿ ಜಿ.ಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಚಾಮುಂಡೇಶ್ವರಿ ಹಾಗೂ ಹುಣಸೂರು ಕ್ಷೇತ್ರದಲ್ಲಿ ಸ್ಪರ್ಧಿಸುವ ಅಪ್ಪ–ಮಗನನ್ನು ಸೋಲಿಸುವುದೇ ನಮ್ಮ ಆದ್ಯತೆಯಾಗಿದೆ. ಜಿ.ಟಿ.ದೇವೇಗೌಡರಿಂದ ತೊಂದರೆಯಾಗಿರುವವರೆಲ್ಲಾ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ನಿರ್ಧರಿಸಿದ್ದಾರೆ. ಈ ಹಿಂದೆ ಜೆಡಿಎಸ್ ವಿರುದ್ಧ ಕೆಲಸ ಮಾಡಿದ್ದ ಜಿಟಿಡಿ ಮತ್ತು ಅವರ ಪುತ್ರನಿಗೆ ಟಿಕೆಟ್ ಕೊಡಲು ಮುಂದಾಗಿದ್ದು, ಇದು ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರಿಗೆ ಮಾಡಿದ ಅನ್ಯಾಯ. ಜಿಟಿಡಿಗಾಗಿ ನಾವು ಸಾಕಷ್ಟು ದುಡಿದಿದ್ದೇವೆ. ಆದರೆ, ಅವರು ನಮಗೆ ಅನ್ಯಾಯ ಮಾಡಿದ್ದಾರೆ. ಇಂತಹವರಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಹೇಳಿದರು.

ನಿಮಗೆ ಶಕ್ತಿ ತುಂಬಿದ್ದು ಚಾಮುಂಡೇಶ್ವರಿ ಕ್ಷೇತ್ರದ ಜನರು. ನಮ್ಮನ್ನು ನೀವು ಗೆದ್ದ ದಿನದಿಂದ ಟಾರ್ಗೆಟ್ ಮಾಡಿದ್ದೀರಿ. ದೇವರ ಮುಂದೆ ಪ್ರಮಾಣ ಮಾಡಿ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ನಮ್ಮನ್ನು ಸೋಲಿಸಲು ಪ್ರಯತ್ನ ಮಾಡಿದ್ದೀರಿ. ಆದರೆ, ಈ ಕ್ಷೇತ್ರದ ಜನರು ಬೆಂಬಲ ನೀಡಿದರು. ಹುಣಸೂರಿನ ಉಪಚುನಾವಣೆಯಲ್ಲಿ ಏನು ಮಾಡಿದ್ದೀರಿ. ಜೆಡಿಎಸ್ ಅಭ್ಯರ್ಥಿ ಸೋಮಶೇಖರ್‌ಗೆ ಸಹಾಯ ಮಾಡುತ್ತೇನೆ ಎಂದು ಹೇಳಿ, ಕಾಂಗ್ರೆಸ್ ಅಭ್ಯರ್ಥಿಗೆ ಸಹಕಾರ ನೀಡಿದ್ದೀರಿ. ಅದೇ ರೀತಿ ವಿಧಾನಪರಿಷತ್ ಚುನಾವಣೆಯಲ್ಲೂ ಪಕ್ಷಕ್ಕೆ ದ್ರೋಹ ಮಾಡುತ್ತೀರಿ. ನಾವೆಲ್ಲರು ಸ್ವಾಭಿಮಾನಿಗಳು. ನಿಮಗೆ ಸ್ವಾಭಿಮಾನ ಇದೆಯಾ ಎಂದು ಪ್ರಶ್ನಿಸಿದರು. ಜೆಡಿಎಸ್ ವಿರುದ್ಧ ಬಂಡಾಯ ಎದ್ದಿರುವ ಮುಖಂಡರಾದ ಬೀರಿಹುಂಡಿ ಬಸವಣ್ಣ, ಮಾವಿನಹಳ್ಳಿ ಸಿದ್ದೇಗೌಡ, ಕೆಂಪನಾಯಕ, ಬೆಳವಾಡಿ ಶಿವಮೂರ್ತಿ, ಜಿ.ಪಂ. ಮಾಜಿ ಸದಸ್ಯ ಮಾದೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ದೇವರಾಜ ಟಿ.ಕಾಟೂರು, ತಾಲೂಕು ನಾಯಕ ಸಂಘದ ಅಧ್ಯಕ್ಷ ಕೆಂಪನಾಯ್ಕ, ಚಲುವೇಗೌಡ, ಮಾವಿನಹಳ್ಳಿ ನಾಗೇಶ್, ರಮೇಶ್, ವೀರಭದ್ರಪ್ಪ, ಚೆನ್ನವೀರಪ್ಪ, ಬೆಳವಾಡಿ ಆನಂದ್, ಸೋಮಣ್ಣ ಸೇರಿದಂತೆ ಇನ್ನಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ತಾಲೂಕು ರಮ್ಮನಹಳ್ಳಿಯಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ಅಪ್ಪು ನಮನೋತ್ಸವ ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಪಾಲ್ಗೊಂಡಿದ್ದರು. ಕಾಂಗ್ರೆಸ್ ಮುಖಂಡರಾದ ಧ್ರುವಕುಮಾರ್, ರಾಕೇಶ್ ಪಾಪಣ್ಣ ಇತರರು ಪಾಲ್ಗೊಂಡಿದ್ದರು. ಈ ಸಮಾರಂಭದಲ್ಲಿ ಅತೃಪ್ತ ಜೆಡಿಎಸ್ ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಜಿಪಂ ಮಾಜಿ ಸದಸ್ಯ ಮಾದೇಗೌಡ ಇತರರು ಭಾಗವಹಿಸಿದ್ದರು.

ಮೈಸೂರಲ್ಲಿ ಆರಂಭವಾಗಿದೆ ಕಟ್ಟುನಿಟ್ಟಿನ ವಾಹನ ತಪಾಸಣೆ ಕಾರ್ಯಾಚರಣೆ



ಮೈಸೂರು,ನ.29(ಎಂಕೆ)–ಸಂಚಾರ ನಿಯಮಗಳ ಜಾರಿ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ಹಿನ್ನೆಲೆ ಮೈಸೂರು ನಗರದ ಎಲ್ಲಾ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರಿಂದ ಮಂಗಳವಾರ ವಾಹನಗಳ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಯಿತು.

ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಸೂಚನೆ ಮೇರೆಗೆ ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ ನೇತೃತ್ವದಲ್ಲಿ ನಡೆದ ಜಂಟಿ ತಪಾಸಣಾ ಕಾರ್ಯಾಚರಣೆ ಸಯ್ಯಾಜಿರಾವ್ ರಸ್ತೆ, ಹುಣಸೂರು ಮುಖ್ಯರಸ್ತೆ, ಬನ್ನೂರು ಮುಖ್ಯರಸ್ತೆ, ಮಹದೇವರಪುರ ಮುಖ್ಯರಸ್ತೆ ಸೇರಿದಂತೆ ನಗರದ 25ಕ್ಕೂ ಹೆಚ್ಚು ಸ್ಥಳಗಳಲ್ಲಿ ನಡೆಯಿತು. ಸಂಜೆ 6ರಿಂದ ರಾತ್ರಿ 9ರವರೆಗೆ ಪ್ರತ್ಯೇಕ ಸ್ಥಳಗಳಲ್ಲಿ ತಪಾಸಣಾ ಕಾರ್ಯಾಚರಣೆಗಿಳಿದ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರು ಗೂಡ್ಸ್ ವಾಹನಗಳು, ಕಾರು, ಮಿನಿ ವ್ಯಾನ್, ತ್ರಿಬಲ್ ರೈಡಿಂಗ್ ಸೇರಿದಂತೆ ಅನುಮಾನಾಸ್ಪದವಾಗಿ ಕಂಡುಬರುವ ವಾಹನಗಳನ್ನು ನಿಲ್ಲಿಸಿ, ತಪಾಸಣೆ ನಡೆಸಿದರು.

ನಗರದ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಮಹದೇವಪುರ ಮುಖ್ಯರಸ್ತೆ, ರಾಜೀವ್‌ನಗರ, ಶಾಂತಿನಗರದ ಮುಖ್ಯ ರಸ್ತೆಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಯಿತು.

ರಸ್ತೆಗಿಳಿದ ಪ್ರತಿಯೊಂದು ವಾಹನವನ್ನು ತಪಾಸಣೆ ನಡೆಸಿದ ಪೊಲೀಸರು, ಸವಾರರಿಂದ ಖಚಿತ ಮಾಹಿತಿ ಪಡೆದ ನಂತರವೇ ಬಿಟ್ಟು ಕಳುಹಿಸುತ್ತಿದ್ದರು.

ಮೈಸೂರು ನಗರದಲ್ಲಿ ಸಂಚಾರ ನಿಯಮಗಳ ಕಟ್ಟುನಿಟ್ಟಿನ ಜಾರಿ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಂಚಾರ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಿಎಆರ್ ಪೊಲೀಸರು ಜಂಟಿಯಾಗಿ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಲಾಗಿದೆ. ವಿಶೇಷ ತಪಾಸಣಾ ಕಾರ್ಯಾಚರಣೆಯನ್ನು ಒಂದೆರಡು ದಿನಗಳಿಗೆ ಸೀಮಿತಗೊಳಿಸದೆ ಮುಂದುವರೆಯುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿಶ್ವಾಸದಿಂದ ಅಧ್ಯಯನ ಮಾಡಿದರೆ ಯಶಸ್ಸು ಸಾಧ್ಯ

ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಎಸ್ಪಿ ಆರ್.ಚೇತನ್ ಅಭಿಮತ

ಮೈಸೂರು, ನ.29(ಆರ್‌ಕೆ)–ನಾನು ಹಳ್ಳಿಯವನು. ಇಂಗ್ಲೀಷ್ ಬರುವುದಿಲ್ಲ ಎಂಬ ಕೀಳರಿಮೆ ಬಿಟ್ಟು ವಿಶ್ವಾಸದಿಂದ ನಿರಂತರ ಅಧ್ಯಯನ ಮಾಡಿದಲ್ಲಿ ಎಂತಹ ಸ್ಪರ್ಧಾತ್ಮಕ ಪರೀಕ್ಷೆಯನ್ನೂ ಯಶಸ್ವಿಯಾಗಿ ಎದುರಿಸಬಹುದು ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ) ಆರ್.ಚೇತನ್ ಅಭಿಪ್ರಾಯಪಟ್ಟಿದ್ದಾರೆ.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ) ಆರ್.ಚೇತನ್ ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಮಂಗಳವಾರ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮಿಂದ ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸ್ ಮಾಡಲು ಸಾಧ್ಯವೇ ಎಂಬ ಕೀಳರಿಮೆ ಕೆಲವರಲ್ಲಿದೆ. ಅಂತಹ ಭಾವನೆ ಕಿತ್ತೊಗೆದು, ಶ್ರದ್ಧೆಯಿಂದ ಅಭ್ಯಾಸ ಮಾಡಿದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ನಿರಂತರವಾಗಿ ತರಬೇತಿ ಕಾರ್ಯಾಗಾರ ನಡೆಯುತ್ತಿರುವುದರಿಂದ ಹಲವು ಮಂದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾಗುತ್ತಿದ್ದಾರೆ. ಮಾರ್ಗದರ್ಶನದ ಅಗತ್ಯತೆಗಳನ್ನು ತರಬೇತಿ ಕೇಂದ್ರಗಳು ಪೂರೈಸುತ್ತಿವೆ. ಆದರೆ ಅಭ್ಯರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ ಇದ್ದರೆ ಮಾತ್ರ ಸಾಧನೆ ಸಾಧ್ಯ ಎಂದ ಚೇತನ್, 7 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ ಸಾವಿರ ಮಂದಿ ಮಾತ್ರ ಸೇವೆಗೆ ಆಯ್ಕೆಯಾಗುವ ಅವಕಾಶ ಲಭ್ಯವಾಗುತ್ತದೆ ಎಂದರು.

ಋಣಾತ್ಮಕ ಮನಸ್ಥಿತಿಗಳು ಗೆಲುವಿಗೆ ಮಾರಕವಾಗುತ್ತವೆ. ಜ್ಞಾನ, ಪರಿಶ್ರಮ, ತೊಡಗಿಸಿಕೊಳ್ಳುವಿಕೆಯಿಂದ ಮಾತ್ರ ಇಂತಹ ಪರೀಕ್ಷೆಗಳನ್ನು ಎದುರಿಸಲು ಸಾಧ್ಯ. ದಿನಪತ್ರಿಕೆಗಳ ಸಂಪಾದಕೀಯ, ಪ್ರಮುಖ ಘಟನಾವಳಿಗಳ ಸುದ್ದಿಗಳನ್ನು ಓದಬೇಕು. ಎಲ್ಲಾ ವಿಷಯಗಳ ಬಗ್ಗೆಯೂ ತಿಳಿದುಕೊಂಡು ನಿಮ್ಮ ಜ್ಞಾನ ಭಂಡಾರ ಹೆಚ್ಚಿಸಿಕೊಳ್ಳುವ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡಿ ಎಂದು ಸಲಹೆ ನೀಡಿದರು.

ಕರಾಮುವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಸಾಧನೆ ಮಾಡಿದವರನ್ನು ಮಾದರಿಯಾಗಿಸಿ ಅಭ್ಯಾಸ ಮಾಡಿದರೆ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ಆಕಾಂಕ್ಷಿಗಳಿಗೆ ಕಿವಿಮಾತು ಹೇಳಿದರು. ಮುಕ್ತ ವಿವಿ ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷ, ಕುಲಸಚಿವ ಡಾ.ಕೆಎಲ್‌ಎನ್ ಮೂರ್ತಿ, ಪರೀಕ್ಷಾಂಗ ಕುಲಸಚಿವ ಕೆ.ಬಿ.ಪ್ರವೀಣ್, ಅಧ್ಯಯನ ಕೇಂದ್ರದ ಡೀನ್ ಡಾ.ರಾಮನಾಥಂನಾಯ್ಡು, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಡಾ.ವಿಜಯಕುಮಾರ್, ಸಿದ್ದೇಶ್, ಗಣೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಭೂಗಳ್ಳರ ರಕ್ಷಣೆಗಾಗಿ 'ಭೂಕಬಳಿಕೆ ನಿಷೇಧ ಕಾಯ್ದೆ'ಗೆ ತಿದ್ದುಪಡಿ ಆರೋಪ

ಹೈಕೋರ್ಟ್‌ನಲ್ಲಿ ದಾವೆ ಹೂಡಲು ಜಸಂಪ ನಿರ್ಧಾರ



ತಿದ್ದುಪಡಿಗೆ ಪರಿಷತ್ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ ಖಂಡನೆ

" ತಿದ್ದುಪಡಿ ಪ್ರಕಾರ ಬಿಬಿಎಂಪಿ ಪರಿಮಿತಿಯಿಂದ 18 ಕಿ.ಮೀ. ಒಳಗೆ, ಪಾಲಿಕೆ ಪರಿಮಿತಿಯಿಂದ 10 ಕಿ.ಮೀ. ಒಳಗೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ ಒಳಗಿನ 3 ಕಿ.ಮೀ. ವ್ಯಾಪ್ತಿಯ ಭೂಮಿಯನ್ನು ಹೊರತುಪಡಿಸಿ ಇದರ ಪ್ರದೇಶಗಳಲ್ಲಿನ ಭೂ ಕಬಳಿಕೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳನ್ನು ತಕ್ಷಣದಿಂದ ಕೊನೆಗೊಳಿಸಲಾಗಿದೆ. ಆ ಮೂಲಕ 10 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಭೂಮಿಯನ್ನು ಅಕ್ರಮವಾಗಿ ಭೂಗಳ್ಳರಿಗೆ ನೀಡಲು ಸರ್ಕಾರ ಮುಂದಾಗಿದೆ. –ರಾಘವೇಂದ್ರ ಕುಷ್ಟಗಿ

ಮೈಸೂರು,ನ.29(ಪಿಎಂ)– ಭೂಗಳ್ಳರ ರಕ್ಷಣೆಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ 'ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆ–2011'ಕ್ಕೆ ತಿದ್ದುಪಡಿ ತಂದಿದೆ ಎಂದು ಆರೋಪಿಸಿದ ಜನ ಸಂಗ್ರಾಮ ಪರಿಷತ್ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ, ಸದರಿ ತಿದ್ದುಪಡಿ ವಿರುದ್ಧ ತಮ್ಮ ಪರಿಷತ್‌ನಿಂದ ಹೈಕೋರ್ಟ್‌ನಲ್ಲಿ ದಾವೆ ಹೂಡುವುದಾಗಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಅರಣ್ಯ ಮತ್ತು ಕಂದಾಯ ಭೂಮಿ ಸೇರಿದಂತೆ ಲಕ್ಷಾಂತರ ಎಕರೆ ಭೂಗಳ್ಳರ ವಶದಲ್ಲಿವೆ. ಈ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರ ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ರಚನೆ ಮಾಡಿತ್ತು. ಸಮಿತಿಯು ಭೂಕಬಳಿಕೆ ಬಗ್ಗೆ ವರದಿ ನೀಡಿತ್ತು. ನಂತರದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಕಾರ್ಯಪಡೆಯೂ ರಾಜ್ಯದ ಉದ್ದಗಲಕ್ಕೆ ಭೂ ಒತ್ತುವರಿ ಪತ್ತೆ ಹಚ್ಚಿ ವರದಿ ನೀಡಿತ್ತು ಎಂದು ವಿವರಿಸಿದರು.

ಅದರಂತೆ ಒಂಭತ್ತೂವರೆ ಲಕ್ಷ ಎಕರೆ ಕಂದಾಯ ಭೂಮಿ ಮತ್ತು ಮೂರೂವರೆ ಲಕ್ಷ ಎಕರೆ ಅರಣ್ಯ ಭೂಮಿ ಕಬಳಿಕೆಯಾಗಿದ್ದು, ರಾಜ್ಯದ ಭ್ರಷ್ಟ ಅಧಿಕಾರಿಗಳು, ಕೆಟ್ಟ ರಾಜಕಾರಣಿಗಳು, ಭೂಗಳ್ಳರು, ಗುತ್ತಿಗೆದಾರರು ಕಬಳಿಕೆ ಮಾಡಿರುವುದನ್ನು ಈ ವರದಿಗಳು ಬಹಿರಂಗಪಡಿಸಿವೆ. ಈ ಹಿನ್ನೆಲೆಯಲ್ಲಿ ಅಂದು ಭೂಕಬಳಿಕೆ ನಿಷೇಧ ಕಾಯ್ದೆ ರೂಪಿಸಿ ಜಾರಿಗೊಳಿಸಲಾಗಿತ್ತು. ಕಾಯ್ದೆಯಡಿ 'ಭೂ ಕಬಳಿಕೆ ವಿಶೇಷ ನ್ಯಾಯಾಲಯ'ವನ್ನು ಸ್ಥಾಪನೆ ಮಾಡಿತ್ತು. ಈ ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿರುವ ಸಂದರ್ಭದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿದು ರಾಜ್ಯ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದಿದೆ ಎಂದು ಆರೋಪಿಸಿದರು.

ನಿಷೇಧಿತ ಪ್ಲಾಸ್ಟಿಕ್ ಬಳಕೆ ವಿರುದ್ಧ ಹೋರಾಟ: ದೇಶ ಮತ್ತು ರಾಜ್ಯದಲ್ಲಿ ಹಲವು ಪ್ರಕಾರದ ಪ್ಲಾಸ್ಟಿಕ್ ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಆದರೆ ಮೈಸೂರು ನಗರ ಒಳಗೊಂಡಂತೆ ರಾಜ್ಯದೆಲ್ಲೆಡೆ ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳಾದ ಕ್ಯಾರಿಬ್ಯಾಗ್ ಕವರ್‌ಗಳು, ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಕೋಟೆಡ್ ಪೇಪರ್ ಕಪ್‌ಗಳು ಸೇರಿದಂತೆ ಮೊದಲಾದ ನಿಷೇಧಿತ ಪ್ಲಾಸ್ಟಿಕ್ ಎಗ್ಗಿಲ್ಲದೆ ಬಳಕೆಯಾಗುತ್ತಿವೆ. ಮೈಸೂರು ಜಿಲ್ಲೆ ಮತ್ತು ನಗರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಆಡಳಿತ ಮತ್ತು ಸಂಬಂಧಿಸಿದ ಪ್ರಾಧಿಕಾರಗಳು ಕಂಡೂ ಕಾಣದಂತೆ ಬೇಜವಾಬ್ದಾರಿತನದಿಂದ ವರ್ತಿಸುತ್ತಿವೆ. ಇದರ ವಿರುದ್ಧ ಪರಿಷತ್‌ನ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ಪರಿಷತ್ ರಾಜ್ಯಾಧ್ಯಕ್ಷ ನಗರ್ಲೆ ಎಂ.ವಿಜಯ್‌ಕುಮಾರ್, ಉಪಾಧ್ಯಕ್ಷ ಪ್ರಸನ್ನ, ಸಂಘಟನಾ ಕಾರ್ಯದರ್ಶಿ ಗೀತಾ ಮೇಲುಮಣಿ, ಜಾನಪದ ಕಲಾವಿದ ಕಂಸಾಳೆ ರವಿ, ಪರಿಸರ ಚಿಂತಕ ರಮೇಶ್‌ಕುಮಾರ್ ಮಾಲಿ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ ಬುಧವಾರ 30 ನವೆಂಬರ್ 2022

ಭತ್ತ, ರಾಗಿ ಖರೀದಿ ಕೇಂದ್ರ ತೆರೆಯಲು ರೈತರ ಒತ್ತಾಯ



ಶ್ರೀರಂಗಪಟ್ಟಣ, ನ.29– ಭತ್ತ ಹಾಗೂ ರಾಗಿ ಖರೀದಿ ಕೇಂದ್ರಗಳನ್ನು ಶೀಘ್ರ ತೆರೆಯುವಂತೆ ರೈತ ಸಂಘದ ಸದಸ್ಯರು, ತಹಸೀಲ್ದಾರ್ ಶ್ವೇತಾ ಎನ್. ರವೀಂದ್ರ ಅವರನ್ನು ಒತ್ತಾಯಿಸಿ, ಮನವಿ ಸಲ್ಲಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಗೆ ರೈತ ಸಂಘದ ತಾಲೂಕು ಅಧ್ಯಕ್ಷ ಕೃಷ್ಣೇಗೌಡ ನೇತೃತ್ವದಲ್ಲಿ ತೆರಳಿದ ಸದಸ್ಯರು, ಭತ್ತ ಹಾಗೂ ರಾಗಿ ಖರೀದಿ ಕೇಂದ್ರಗಳನ್ನು ಶೀಘ್ರ ತೆರೆಯುವಂತೆ ಒತ್ತಾಯಿಸಿದರು.

ನಂತರ ಪಿಎಸ್ಎಸ್‌ಕೆ ಮಾಜಿ ನಿರ್ದೇಶಕ ಪಾಂಡು ಮಾತನಾಡಿ, ಈಗಾಗಲೇ ತಾಲೂಕಿನಾದ್ಯಂತ ಭತ್ತ ಕೊಯ್ಲು ಹಂತಕ್ಕೆ ಬಂದಿದ್ದು, ಇದುವರೆಗೂ ಸರ್ಕಾರ ಭತ್ತ ಹಾಗೂ ರಾಗಿ ಕೇಂದ್ರಗಳನ್ನು ತೆರೆಯದೇ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಸರ್ಕಾರ ರೈತರು ಬೆಳೆದ ರಾಗಿ ಹಾಗೂ ಭತ್ತದ ಬೆಳೆಗಳನ್ನು ವೇರ್‌ಹೌಸ್‌ಗೆ ಕಳುಹಿಸುವ ಆಲೋಚನೆ ಇಟ್ಟುಕೊಂಡಿದ್ದು, ಇದು ರೈತರ ಗಮನಕ್ಕೆ ಬಂದಿದೆ. ಒಂದು ವೇಳೆ ರೈತ ತನ್ನ 1 ಕ್ವಿಂಟಾಲ್ ಭತ್ತವನ್ನು ವೇರ್‌ಹೌಸ್‌ಗೆ ಸಾಗಾಣಿಕೆ ಮಾಡಿದಲ್ಲಿ, 100 ರು. ಹೆಚ್ಚಿಗೆ ಹೊರೆ ಬೀಳಲಿದೆ. ಹಾಗಾಗಿ ಸರ್ಕಾರ ವೇರ್‌ಹೌಸ್ ನಿಲ್ಲಿಸಿ ಈ ಹಿಂದೆ ರೈಸ್ ಮಿಲ್ ಮಾಲೀಕರಿಗೆ ಕೊಡುತ್ತಿದ್ದ ರೀತಿಯಲ್ಲಿ ಭತ್ತ ಹಾಗೂ ರಾಗಿ ಖರೀದಿಸಿ ಕೊಳ್ಳಲು ಮುಂದಾಗುವಂತೆ ಆಗ್ರಹಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಸರ್ಕಾರ ಕೇವಲ ಸುಗ್ಗಿ ಕಾಲದಲ್ಲಿ ಮಾತ್ರ ಖರೀದಿ ಕೇಂದ್ರ ತೆರೆದರೆ ಸಾಲದು, ನಿರಂತರವಾಗಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಈ ಹಿಂದೆ ರೈಸ್ ಮಿಲ್ ಮಾಲೀಕರ ರೈತರ ಬಳಿ ಬಂದು ಭತ್ತ ಹಾಗೂ ರಾಗಿ ಖರೀದಿ ಮಾಡುತ್ತಿದ್ದರು. ಇದರಿಂದ ರೈತರಿಗೆ ಅನುಕೂಲವಾಗುತ್ತಿತ್ತು. ಅದೇ ಮಾದರಿ ಮುಂದುವರಿಯುವಂತೆ ಸರ್ಕಾರದ ಗಮನಕ್ಕೆ ತರುವಂತೆ ಮನವಿ ಮಾಡಿದರು. ಈ ವೇಳೆ ಮೇಳಾಪುರ ಸ್ವಾಮೀಗೌಡ, ಕೆಂಪೇಗೌಡ, ತಿಮ್ಮೇಗೌಡ, ನಾಗೇಂದ್ರ ಸೇರಿದಂತೆ ಇತರರು ಇದ್ದರು.

ಮೂರೂವರೆ ವರ್ಷದಲ್ಲಿ ಊರಿಗೆ ಮೂರು ಮನೆ ಕೊಟ್ಟಿಲ್ಲ... ಇವರ ಮನೆ ಹಾಳಾಗೋಗಾ...

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ



ಕೆ.ಆರ್.ಪೇಟೆ, ನ.29– ನನ್ನ ಐದು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ 3ಲಕ್ಷ ಮನೆಯಂತೆ ಐದು ವರ್ಷದಲ್ಲಿ 15ಲಕ್ಷ ಆಶ್ರಯ ಮನೆಗಳನ್ನು ಬಡವರಿಗೆ ನೀಡಿದ್ದೆ, ಆದರೆ ಬಿಜೆಪಿಯವರು ಕಳೆದ ಮೂರೂವರೆ ವರ್ಷಗಳಿಂದ ಒಂದು ಊರಿಗೆ ಮೂರು ಮನೆ ನೀಡಿಲ್ಲ. ಇವರ ಮನೆ ಹಾಳಾಗೋಗಾ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಅವರು ಕೆ.ಆರ್.ಪೇಟೆ ಪಟ್ಟಣದ ಪುರಸಭಾ ಕಚೇರಿ ಬಳಿ ಇರುವ ಮೈದಾನದಲ್ಲಿ ಮಂಡ್ಯ ಜಿಲ್ಲಾ ಕುರುಬರ ಸಂಘ ಹಾಗೂ ತಾಲೂಕು ಕುರುಬರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಕನಕ ಜಯಂತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದರೆ ರಾಜ್ಯ ಎಲ್ಲಾ ಬಡವರಿಗೆ ತಲಾ 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡುವ ಯೋಜನೆಯನ್ನು ಜಾರಿಗೆ ತರುವುದಾಗಿ ಘೋಷಣೆ ಮಾಡಿದರು. ಕೆ.ಆರ್. ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಾವು 0ಯಾರನ್ನೇ ಅಭ್ಯರ್ಥಿ ಮಾಡಿದರೂ ಅವರನ್ನು ಗೆಲ್ಲಿಸಿದರೆ ನನಗೆ ಶಕ್ತಿ ಬರುತ್ತದೆ. ಆಗ ನಾನು ನಿಮ್ಮ ಎಲ್ಲಾ ಕೆಲಸಗಳನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

1988 ರಲ್ಲಿ ಮೊದಲ ಬಾರಿಗೆ ನಾನು ಸಚಿವನಾಗಿದ್ದ ವೇಳೆ 500ನೇ ಕನಕ ಜಯಂತಿಯನ್ನು ವರ್ಷವಿಡೀ ಆಚರಣೆ ಮಾಡಲಾಗಿತ್ತು. ನಂತರ 1992ರಲ್ಲಿ ಕನಕ ಗುರುಪೀಠ ಆರಂಭಿಸಲಾಯಿತು. ಇದರಿಂದ ಕುರುಬ ಸಮಾಜವು ಶಿಕ್ಷಣ, ಆರೋಗ್ಯ, ಆರ್ಥಿಕ ಶಕ್ತಿ, ರಾಜಕೀಯ ಶಕ್ತಿ ಆರಂಭಿಸಲು ಸಾಧ್ಯವಾಯಿತು ಎಂದರು.

ಕನಕದಾಸರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿದ ಮಹಾನ್ ಸಂತ. ಇವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಉಡುಪಿಯಲ್ಲಿ ಅರ್ಚಕರು ಕನಕದಾಸರನ್ನು ಕೃಷ್ಣ ದರ್ಶನಕ್ಕೆ ಒಳಕ್ಕೆ ಬಿಡಲಿಲ್ಲ. ಕನಕದಾಸರು ಕೃಷ್ಣನನ್ನು ಕುರಿತು ಪ್ರಾರ್ಥನೆ ಮಾಡಿದಾಗ, ಶ್ರೀ ಕೃಷ್ಣ ದಕ್ಷಿಣಾಭಿಮುಖವಾಗಿ ತಿರುಗಿ ದರ್ಶನ ನೀಡಿದ ಪವಾಡ ನಡೆಯಿತು ಕನಕದಾಸರು. ಇಂತಹ ದಾಸ ಶ್ರೇಷ್ಠ ಕನಕದಾಸರ ಆದರ್ಶಗಳನ್ನು ಮೈಗೂಡಿಸಬೇಕು. ನಾನು ಎಂಬ ಅಹಂಕಾರವನ್ನು ದೂರಮಾಡಬೇಕು. ನಾವು, ನಾವೆಲ್ಲಾ ಎಂಬ ವಿಶಾಲ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಅಂಬೇಡ್ಕರ್, ಕನಕ, ಬಸವಣ್ಣ ಸಮಾಜಕ್ಕಾಗಿ ತ್ಯಾಗ ಮಾಡಿದ ಗುಣದಿಂದ ಅವರ ಜಯಂತಿ ಆಚರಣೆ ಮಾಡುತ್ತೇವೆ. ಹಾಗಾಗಿ ನಾವು ಸಮಾಜಕ್ಕಾಗಿ ಬದುಕಬೇಕೇ ಹೊರತು, ನಮಗಾಗಿ ಅಲ್ಲ ಎಂದು ಸಿದ್ದರಾಮಯ್ಯ ಹೇಳಿದರು. ಕಾಗಿನೆಲೆ ಕನಕ ಗುರುಪೀಠದ ಕೆ.ಆರ್.ನಗರ ಶಾಖಾ ಮಠದ ಶ್ರೀಗಳಾದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸಿ.ಎಲ್. ಸುರೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕನಕ ಗುರುಪೀಠದ ಕೆ.ಆರ್.ನಗರ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಅಹಿಂದ ವರ್ಗಗಳ ನೇತಾರ ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿ ಆಗಲು ಜನರ ಸಹಕಾರ ಇರಬೇಕು ಎಂದರು.

ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಎನ್.ಚೆಲುವರಾಯಸ್ವಾಮಿ, ನರೇಂದ್ರಸ್ವಾಮಿ, ಎಚ್.ಎಂ.ರೇವಣ್ಣ, ಶಾಸಕರಾದ ಭೈರತಿ ಸುರೇಶ್, ದಿನೇಶ್ ಗೂಳೀಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರಕುಮಾರ್, ಸಮಾಜ ಸೇವಕರಾದ ಆರ್.ಟಿ.ಒ ಮಲ್ಲಿಕಾರ್ಜುನ್, ವಿಜಯ್ ರಾಮೇಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್, ಕಾರ್ಯದರ್ಶಿ ಕೆ.ಎಸ್.ಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮುಖಂಡರಾದ ನರಹರಿ, ಎಂ.ಡಿ.ಕೃಷ್ಣಮೂರ್ತಿ, ಕೋಡಿ ಮಾರನಹಳ್ಳಿ ದೇವರಾಜು, ಡಿ.ರವಿಶಂಕರ್, ಮಲ್ಕುಟ್ ಶಿವಣ್ಣ ಎಂ.ಜೆ. ಶೌಟ್, ಕೆ.ಆರ್. ರವೀಂದ್ರಬಾಬು, ಡಿ.ಪ್ರೇಮ ಕುಮಾರ್, ಸಣ್ಣನಿಂಗೇಗೌಡ, ಚಂದ್ರೇಗೌಡ, ಈರೇಗೌಡ, ಕೆ.ಎಸ್.ಕುಮಾರ್, ಪ್ರಸನ್ನಕುಮಾರ್, ಶ್ರೀನಿವಾಸ್ ಮುತ್ತಣ್ಣ, ಶಕುಂತಲಾ ರವಿಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಜ ಸೇವಕ ಮಲ್ಲಿಕಾರ್ಜುನ್ ಅವರು ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಗದೆ ನೀಡಿ ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮುಖಂಡ ನರಹರಿ ಅವರು ತಲಾ ಎರಡು ಸಾವಿರಗಳನ್ನು ನಗದು ಬಹುಮಾನ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಸುಮಾರು 15ರಿಂದ 20 ಸಾವಿರ ಮಂದಿ ಭಾಗವಹಿಸಿದ್ದರು.

ಸಾಸಲು ಗ್ರಾಮದಲ್ಲಿ ನಾಗಾರಾಧನೆ

ಕಿಕ್ಕೇರಿ, ನ.29– ನಾಗಾರಾಧನೆ ಪವಿತ್ರ ಕ್ಷೇತ್ರವಾದ ಹೋಬಳಿಯ ಸಾಸಲು



ಕ್ಷೇತ್ರದಲ್ಲಿ ಸಹಸ್ರಾರು ಭಕ್ತರು ಆಗಮಿಸಿ ನಾಗಬನದಲ್ಲಿ ನಾಗ ದೇವರ ಆರಾಧನೆಯನ್ನು ಶ್ರದ್ಧಾ ಭಕ್ತಿಯಿಂದ ಮಾಡಿದರು. ಬಯಲು ಸೀಮೆಯ ಕುಕ್ಕೆ ಸುಬ್ರಹ್ಮಣ್ಯ ಎಂದು ಪ್ರಸಿದ್ಧಿ ಪಡೆದಿರುವ ಸುಕ್ಷೇತ್ರಕ್ಕೆ ಷಷ್ಠಿ ಅಂಗವಾಗಿ ಜಿಲ್ಲೆ, ರಾಜ್ಯವಲ್ಲದೆ ಹೊರರಾಜ್ಯಗಳಿಂದ ಭಾಗವಹಿಸಿದ್ದ ಭಕ್ತರು ಹರಕೆ ಕಾಣಿಕೆಯನ್ನು ದೇವರಿಗೆ ಅರ್ಪಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಪವಿತ್ರ ಪುಷ್ಕರಿಣಿಯಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು ಸೋಮೇಶ್ವರ, ಶಂಭುಲಿಂಗೇಶ್ವರ, ಕುದುರೆಮಂಡಮ್ಮ ದೇವರ ದರ್ಶನ ಪಡೆದರು. ನಾಗಬನಕ್ಕೆ ತೆರಳಿ ಹುತ್ತಕ್ಕೆ, ನಾಗರಕಲ್ಲಿಗೆ ಹರಿದ್ರಾಭಿಷೇಕ, ಹಾಲು ತುಪ್ಪದ ತನಿ ಎರೆದು ಭಕ್ತಿ ಪರಾಕಾಷ್ಠೆ ಮೆರೆದರು.

ಹಲವು ಭಕ್ತರು ತಣ್ಣೀರು ಬಟ್ಟೆಯಲ್ಲಿ ಹುತ್ತದ ಮಣ್ಣು(ಮೃತ್ತಿಕೆ), ಪೂಜಾ ಗಿಡವಾದ ಹುಲಿಕಡ್ಡಿ(ಗಿಡದಲ್ಲಿ ಸಿಗುವ ಒಂದು ಬಗೆಯ ಕಡ್ಡಿ) ರೂಪ ಹುಲಿಕಡ್ಡಿ ನಾಗಬನದಲ್ಲಿ ಹಾಲಿನ ತನಿ ಎರೆಯುವಿಕೆಯಿಂದ ಇಡೀ ಪ್ರದೇಶದಲ್ಲಿ ಹಾಲು ಹರಿದು ಭಕ್ತರು ತುಳಿದುಕೊಂಡೆ ಓಡಾಡುವಂತಾಯಿತು.

ಶ್ರೀ ಶಂಭುಲಿಂಗೇಶ್ವರ, ಸೋಮೇಶ್ವರ ಅನ್ನದಾಸೋಹ ಸಮಿತಿಯಿಂದ ದಾನಿಗಳ ಸಹಕಾರದಲ್ಲಿ ಅನ್ನದಾಸೋಹ ಹಮ್ಮಿಕೊಳ್ಳಲಾಗಿತ್ತು.

ರೈತರ ನ್ಯಾಯಯುತ ಬೇಡಿಕೆಯನ್ನು ಸರ್ಕಾರ ಈಡೇರಿಸಲಿ: ಚುಂಚಶ್ರೀ



ಮಂಡ್ಯ,ನ.29– ಜಿಲ್ಲೆಯ ರೈತರು ಕಬ್ಬಿಗೆ ನ್ಯಾಯಯುತ ಬೆಂಬಲ ಬೆಲೆ ನಿಗದಿ ಮಾಡಬೇಕೆಂದು ಆಗ್ರಹಿಸಿ, ಹಲವು ದಿನಗಳಿಂದ ಮಂಡ್ಯ ನಗರದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಅವರ ಬೇಡಿಕೆಯನ್ನು ಸರ್ಕಾರ ಈ ಕೂಡಲೇ ಈಡೇರಿಸಬೇಕೆಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಒತ್ತಾಯಿಸಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡಲು ಆಗ್ರಹಿಸಿ, ರೈತರು ನಡೆಸುತ್ತಿರುವ ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿದ ಶ್ರೀಗಳು, ರೈತರು ಪ್ರಸ್ತುತ ಹಳ್ಳಿಯಲ್ಲಿ ಕೃಷಿ ಕೆಲಸವನ್ನು ಬಿಟ್ಟು ಪಟ್ಟಣಕ್ಕೆ ಕಸ ಗುಡಿಸುವ ಕೆಲಸ ಸಿಕ್ಕರೂ ಸಾಕು ಹೋಗೋಣ ಎಂಬ ಚಿಂತನೆಯಲ್ಲಿದ್ದಾರೆ. ಇದಕ್ಕೆ ಕಾರಣ ರೈತ ಬೆಳೆದ ಬೆಳೆಗೆ ಸಮರ್ಪಕ ಬೆಲೆ ಸಿಗುತ್ತಿಲ್ಲ. ರೈತರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಹೀಗಾದರೆ ಕೃಷಿ ಪ್ರಧಾನ ಜಿಲ್ಲೆಯ ಮಂಡ್ಯ ಅಭಿವೃದ್ಧಿಯಾಗುವುದು ಹೇಗೆ? ಎಂದು ಪ್ರಶ್ನಿಸಿದರು.

ರೈತರು ಬೆಳೆಯುವಂತಹ ಬೆಳೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಿದರೆ ಕೃಷಿಯನ್ನೇ ನಂಬಿ ಜೀವನ ಮಾಡುವವರ ಸಂಖ್ಯೆ ಹೆಚ್ಚಾಗುತ್ತದೆ. ವ್ಯವಸಾಯವನ್ನು ಹೊಸ ಹೊಸ ತಂತ್ರಜ್ಞಾನದಲ್ಲಿ ಮಾಡಿ. ಅಪ್ಪ ಹಾಕಿದ ಆಲದ ಮರದಂತೆ ಅದನ್ನೇ ಮಾಡಿದರೆ, ಖರ್ಚು ಜಾಸ್ತಿಯಾಗುತ್ತದೆ. ಕೃಷಿಯಲ್ಲಿ ಲಾಭ ಪಡೆಯಲು ಹೊಸ ಹೊಸ ವೈಜ್ಞಾನಿಕ ಸಂಶೋಧನೆಗಳನ್ನು ಕೃಷಿಯಲ್ಲಿ ತೊಡಗಿಕೊಳ್ಳಿ ಎಂದು ಸಲಹೆ ನೀಡಿದರು.

ಹೊಸ ಹೊಸ ವಿಧಾನಗಳನ್ನು ಸರ್ಕಾರಗಳು ರೈತರಿಗೆ ಅರಿವು ಮೂಡಿಸಿಕೊಳ್ಳುವ ಕೆಲಸ ಮಾಡಲಿ. ರೈತರ ನ್ಯಾಯಯುತ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮಾನಂದಶ್ರೀ, ರೈತ ಮುಖಂಡರಾದ ಮಧು ಚಂದನ್, ವಿನಯ್‌ಕುಮಾರ್, ಎಎಪಿ ಮುಖಂಡ ಬೂದನೂರು ಬೊಮ್ಮಯ್ಯ ಇತರರಿದ್ದರು.

ಎಸ್.ಜೆ. ಬೋಜೇಗೌಡ ನಿಧನ

ಕಿಕ್ಕೇರಿ, ನ.29– ಪಟ್ಟಣದ ಚನ್ನನಕೊಪ್ಪಲು ಬಡಾವಣೆ ನಿವಾಸಿ ಎಸ್.ಜೆ. ಬೋಜೇಗೌಡ (75) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಸರ್ಕಾರಿ ಪ್ರೌಢಶಾಲಾ ಇಂಗ್ಲೀಷ್ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿ



ನಿವೃತ್ತ ಜೀವನ ಸಾಗಿಸುತ್ತಿದ್ದರು. ಕೆಲವೇ ದಿನಗಳಲ್ಲಿ 30 ವರ್ಷಗಳ ಹಳೆಯ ಶಿಷ್ಯರು ಒಂದೆಡೆ ಸೇರಿ ಇವರಿಗೆ ಗುರು ನಮನ ಸಲ್ಲಿಸಲು ಕಾರ್ಯಯೋಜನೆ ರೂಪಿಸಿಕೊಂಡಿದ್ದರು. ಗುರು ನಮನ ಸಲ್ಲಿಸುವ ಮುನ್ನವೇ ಗುರುಗಳು ಮೃತರಾದ ವಿಷಯ ತಿಳಿದು ಅಪಾರ ಶಿಷ್ಯವೃಂದದವರು ತೀವ್ರ ಕಂಬನಿ ಮಿಡಿದಿದ್ದಾರೆ.

ಮೃತರು ಪತ್ನಿ, ನಾಲ್ವರು ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಸೊಳ್ಳೇಪುರದ ತೋಟದಲ್ಲಿ ನೆರವೇರಿತು.

ಚೀಟಿ ವ್ಯವಹಾರದಲ್ಲಿ ತೊಡಗಿದ್ದ ದಂಪತಿಗಳಿಂದ ವಂಚನೆ ಪ್ರಕರಣ

ಪತಿ ಆತ್ಮಹತ್ಯೆ ಮಾಡಿಕೊಂಡರೆ; ಪತ್ನಿ ಪರಾರಿ

* ಸಂತ್ರಸ್ತರಿಂದ ಪೊಲೀಸರಿಗೆ ದೂರು * ವಂಚಿಸಿದ ಹಣದಲ್ಲಿ ಆಸ್ತಿ ಮಾಡಿರುವ ಶಂಕೆ

ನಂಜನಗೂಡು, ನ. 29– ಡೆತ್‌ನೋಟ್ ಬರೆದಿಟ್ಟು ಶಾಲಾ ಶಿಕ್ಷಕ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಟ್ವಿಸ್ಟ್ ದೊರೆತಿದ್ದು, ಶಿಕ್ಷಕನ ಪತ್ನಿ ನಾಪತ್ತೆಯಾಗಿದ್ದರೆ, ಆಕೆ ವಿರುದ್ಧ ಇಬ್ಬರು ವಂಚನೆ ದೂರು ದಾಖಲಿಸಿದ್ದಾರೆ.

ನಂಜನಗೂಡು ಪಟ್ಟಣದ ರಾಮಸ್ವಾಮಿ ಲೇಔಟ್ ನಿವಾಸಿಯಾಗಿದ್ದ ಶಿಕ್ಷಕ ಶಂಭುಲಿಂಗ(47) ಎಂಬುವರು ನವೆಂಬರ್ 3ರಂದು ರಾತ್ರಿ ಡೆತ್‌ನೋಟ್ ಬರೆದಿಟ್ಟು ತಮ್ಮ ಕಾರ್ ಶೆಡ್‌ನಲ್ಲಿ ನೇಣಿಗೆ ಶರಣಾಗಿದ್ದರು. ಇವರ ಪತ್ನಿ ದಾಕ್ಷಾಯಿಣಿ ಪರವಾನಗಿ ಪಡೆದು ಚೀಟಿಗಳನ್ನು ನಡೆಸುತ್ತಿದ್ದು, ಶಿಕ್ಷಕ ಶಂಭುಲಿಂಗ ಅವರಿಂದ ಕೆಲವರು ಹಣ ಪಡೆದು ಹಿಂತಿರುಗಿಸಲು ಸತಾಯಿಸುತ್ತಿದ್ದರು. ಅಲ್ಲದೇ, ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಯೊಬ್ಬರು ಖಾಲಿ ಚೆಕ್‌ಗಳನ್ನು ಪಡೆದು, ಶಂಭುಲಿಂಗ ಅವರಿಗೆ ಬೆದರಿಕೆ ಹಾಕುತ್ತಿದ್ದರು. ಇದರಿಂದ ಖಿನ್ನತೆಗೊಳಗಾಗಿದ್ದ ಅವರು, ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅವರ ಪತ್ನಿ ದಾಕ್ಷಾಯಿಣಿ ನಂಜನಗೂಡು ಪಟ್ಟಣ ಠಾಣೆಯಲ್ಲಿ 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಇದಕ್ಕೂ 2 ತಿಂಗಳ ಮುನ್ನ ತಮ್ಮ ಮನೆಯಲ್ಲಿ ರಾಬರಿ ನಡೆದು ಖದೀಮರು ಚಿನ್ನಾಭರಣ ಕಳವು ಮಾಡಿದ್ದಾರೆ ಎಂದು ಕೂಡ ಪ್ರಕರಣ ದಾಖಲಾಗಿತ್ತು.

ಈ ಮಧ್ಯೆ ಶಿಕ್ಷಕನ ಪತ್ನಿ ದಾಕ್ಷಾಯಿಣಿ ನಾಪತ್ತೆಯಾಗಿದ್ದು, ಆಕೆಯ ವಿರುದ್ಧ ಚೀಟಿ ಹಣ ಮರುಪಾವತಿ ಮಾಡದೇ ವಂಚನೆ ಎಸಗಿರುವ ಆರೋಪದಡಿ 2 ಪ್ರಕರಣಗಳು ದಾಖಲಾಗಿವೆ. ಒಂದು ಪ್ರಕರಣದಲ್ಲಿ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಕಬ್ಬು ನಿರೀಕ್ಷಕ ಮಹದೇವಸ್ವಾಮಿ(48) ಎಂಬುವರು ತನಗೆ 8.90 ಲಕ್ಷ ರೂ.ಗಳನ್ನು ದಾಕ್ಷಾಯಿಣಿ ವಂಚಿಸಿದ್ದಾರೆ ಎಂದು ದೂರು ನೀಡಿದ್ದಾರೆ. ಶಿಕ್ಷಕನಾಗಿದ್ದ ಶಂಭುಲಿಂಗ ತಮಗೆ ಪರಿಚಯಸ್ಥರಾಗಿದ್ದರು. ಅವರ ಪತ್ನಿ ದಾಕ್ಷಾಯಿಣಿ ಪರವಾನಗಿ ಪಡೆದು ಚೀಟಿ ನಡೆಸುತ್ತಿರುವ ಬಗ್ಗೆ ತಮಗೆ ತಿಳಿಸಿ ಚೀಟಿ ಹಾಕುವಂತೆ ಹೇಳಿದ್ದರು. ಈ ಹಿನ್ನೆಲೆಯಲ್ಲಿ ತಾನು 3 ಚೀಟಿಗಳನ್ನು ಹಾಕಿದ್ದು, ಒಟ್ಟು 8.90 ಲಕ್ಷ ರೂ.ಗಳನ್ನು ದಾಕ್ಷಾಯಿಣಿ ಅವರಿಗೆ ಪಾವತಿಸಿದ್ದೇನೆ. ಅವರು ನನಗೆ ಹಣ ಹಿಂತಿರುಗಿಸದೇ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಮೂಲತಃ ನಂಜನಗೂಡು ತಾಲೂಕು ದೇವೀರಮ್ಮನಹಳ್ಳಿ ಗ್ರಾಮದವರಾಗಿದ್ದು, ಹಾಲಿ ಬೆಂಗಳೂರಿನ ಕತ್ರಿಗುಪ್ಪೆಯಲ್ಲಿ ವಾಸವಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕೆ.ಬಿ. ಕಾವ್ಯಶ್ರೀ(23) ಎಂಬುವರು ತಾವು ದಾಕ್ಷಾಯಿಣಿ ಅವರಿಂದ 3.20 ಲಕ್ಷ ರೂ. ವಂಚನೆಗೊಳಗಾಗಿರುವುದಾಗಿ ದೂರು ಸಲ್ಲಿಸಿದ್ದಾರೆ. ಶಿಕ್ಷಕ ಶಂಭುಲಿಂಗ ಅವರು, ತಮ್ಮ ಪತಿ ನಂದೀಶ್ ಅವರಿಗೆ ಪರಿಚಯಸ್ಥರಾಗಿದ್ದು, ಅವರ ಮನವಿಯ ಮೇರೆಗೆ ದಾಕ್ಷಾಯಿಣಿ ಬಳಿ 5 ಲಕ್ಷ ಮೊತ್ತದ ಚೀಟಿ ಹಾಕಿ ಈಗಾಗಲೇ 3.20 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ಪಾವತಿಸಲಾಗಿದೆ. ಶಂಭುಲಿಂಗ ಅವರು ಆತ್ಮಹತ್ಯೆ ಮಾಡಿಕೊಂಡ ವಿಚಾರ ನವೆಂಬರ್ 4ರಂದು ತಮಗೆ ಗೊತ್ತಾಗಿದ್ದು, ದಾಕ್ಷಾಯಿಣಿ ಬಳಿ ಚೀಟಿ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದ್ದ 250ರಿಂದ 300 ಮಂದಿ ನಂಜನಗೂಡಿನ ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಗೆ ಹೋದಾಗ ಅಲ್ಲಿಗೆ ಆಗಮಿಸಿದ ದಾಕ್ಷಾಯಿಣಿ, ತಮ್ಮ ಪತಿಯ ತಿಥಿ ಕಾರ್ಯದ ನಂತರ ಎಲ್ಲರಿಗೂ ಹಣ ಹಿಂತಿರುಗಿಸುವುದಾಗಿ ಸಬ್ ಇನ್ಸ್‌ಪೆಕ್ಟರ್ ಸಮ್ಮುಖದಲ್ಲಿ ಒಪ್ಪಿಕೊಂಡಿದ್ದರು. ಆದರೆ, ನವೆಂಬರ್ 17ರವರೆಗೂ ಅವರು ಹಣ ಮರುಪಾವತಿ ಮಾಡದ ಕಾರಣ, ಅವರ ಮನೆ ಬಳಿ ಹೋಗಿ ನೋಡಿದಾಗ ದಾಕ್ಷಾಯಿಣಿ ಮನೆಯಿಂದ ನಾಪತ್ತೆಯಾಗಿದ್ದಾರೆ. ಶಂಭುಲಿಂಗು ಅವರು, ಪತ್ನಿ ಹೆಸರಿನಲ್ಲಿ ಚೀಟಿ ವ್ಯವಹಾರ ನಡೆಸಿ ಜನರಿಂದ ಹಣ ವಸೂಲಿ ಮಾಡಿ ಪತ್ನಿ, ಅತ್ತೆ, ಮಾವ, ಬಾಮೈದನ ಹೆಸರಿನಲ್ಲಿ ಮನೆ, ಜಮೀನು ಹಾಗೂ ನಿವೇಶನಗಳನ್ನು ಖರೀದಿಸಿರುವುದು ಗೊತ್ತಾಗಿದೆ. ಶಂಭುಲಿಂಗ ಆತ್ಮಹತ್ಯೆ ನಂತರ ದಾಕ್ಷಾಯಿಣಿ ಜನರ ಹಣದಲ್ಲಿ ಆಸ್ತಿ ಮಾಡಿಕೊಂಡು ವಂಚನೆ ಎಸಗಿದ್ದಾರೆ ಎಂದು ಕಾವ್ಯಶ್ರೀ ದೂರು ಸಲ್ಲಿಸಿದ್ದಾರೆ.

ಎರಡೂ ದೂರುಗಳನ್ನೂ ಪ್ರತ್ಯೇಕವಾಗಿ ದಾಖಲಿಸಿಕೊಂಡಿರುವ ನಂಜನಗೂಡು ಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ವಂಚನೆ ಆರೋಪದಡಿ ಪ್ರಕರಣ ದಾಖಲಾದ ಹಿನ್ನೆಲೆ

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ರಾಜೀನಾಮೆಗೆ ಒತ್ತಾಯ



ಮೈಸೂರು,ನ.29(ಪಿಎಂ)– ವೈದ್ಯಕೀಯ ಸೀಟು ಕೊಡಿಸುವುದಾಗಿ 35 ಲಕ್ಷ ರೂ. ಪಡೆದು ವಂಚಿಸಿರುವ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಅವರು ಸಂಘದ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಇಲ್ಲವೇ ಸದಸ್ಯತ್ವವನ್ನೇ ವಜಾಗೊಳಿಸಬೇಕೆಂದು ಜಾಗೃತ ಒಕ್ಕಲಿಗ ಸಮುದಾಯ ಸಂಘಟನೆ ನೇತೃತ್ವದಲ್ಲಿ ಹಲವು ಮುಖಂಡರು ಮಂಗಳವಾರ ಸಭೆ ನಡೆಸಿ ಒತ್ತಾಯಿಸಿದರು.

ಮೈಸೂರಿನ ಕೋರ್ಟ್ ಎದುರಿನ ಉದ್ಯಾನವನದಲ್ಲಿ ಸಭೆ ನಡೆಸಿದ ಸಮುದಾಯದ ಮುಖಂಡರು, ಕೆಂಪೇಗೌಡ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ 35 ಲಕ್ಷ ರೂ ಹಣ ಪಡೆದು ವಂಚಿಸಿರುವ ಆರೋಪದಡಿ ಅವರ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿ ವಿಚಾರಣೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಮುಖಂಡ ಮೆಲ್ಲಹಳ್ಳಿ ಮಹದೇವಸ್ವಾಮಿ ಮಾತನಾಡಿ, ಒಕ್ಕಲಿಗರ ಸಂಘದ ನಿರ್ದೇಶಕನಾಗಿ ಸಮುದಾಯದ ಘನತೆ ಎತ್ತಿಹಿಡಿಯುವ ಬದಲು ಮಸಿ ಬಳಿಯುವ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು. ಮೈಸೂರು ತಾಲೂಕು ಒಕ್ಕಲಿಗರ ಸಂಘದ ಕೃಷ್ಣ ಮಾತನಾಡಿ, ಸಮುದಾಯಕ್ಕೆ ಕಳಂಕ ತಂದ ಮಂಜೇಗೌಡರನ್ನು ವಜಾಗೊಳಿಸುವಂತೆ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಿಗೆ ಮನವಿ ಸಲ್ಲಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್‌ಗೌಡ ಮಾತನಾಡಿ, ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಅವರ ಮನೆ ಮುಂದೆ ಪ್ರತಿಭಟನಾ ಧರಣಿ ನಡೆಸುವುದು ಸೂಕ್ತ ಎಂದು ಹೇಳಿದರು.

ನಮ್ಮೂರು ನಮ್ಮೋರು ಟ್ರಸ್ಟಿನ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ ಮಾತನಾಡಿ, ನಾನು ಸಹ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿ. ಅಲ್ಪ ಮತಗಳಿಂದ ಸೋತಿದ್ದೇನೆ. ಆದರೆ ಚುನಾವಣೆಗೆ ಮೊದಲು ಮತ್ತು ಈಗಲೂ ಹೇಳುವುದೊಂದೇ, ಇಂತಹ ಭ್ರಷ್ಟಾಚಾರಕ್ಕೆ ಚುನಾವಣಾ ಅಕ್ರಮವೇ ಕಾರಣ ಎಂದರು. ಅಭ್ಯರ್ಥಿ ಆಯ್ಕೆ ಮಾಡುವಾಗ ಪರಾಮರ್ಶೆ ಮಾಡಬೇಕು. ಸರ್ಕಾರಿ ನೌಕರರಾಗಿರುವುದು ಮಾತ್ರವಲ್ಲದೆ, ಹತ್ತಾರು ಸಂಸ್ಥೆಗಳಲ್ಲಿ ನಿರ್ದೇಶಕರಾಗಿದ್ದ ಮಂಜೇಗೌಡರನ್ನು ಆಯ್ಕೆ ಮಾಡಿದ್ದು ಎಷ್ಟು ಸರಿ ಎಂಬ ಪ್ರಶ್ನೆ ಕಾಡುತ್ತಿದೆ. ನನ್ನ ವಿರುದ್ಧ ಗೆದ್ದವರು ಎಂಬ ಆಕ್ರೋಶದಲ್ಲಿ ಮಾತನಾಡುತ್ತಿಲ್ಲ. ಸಂಘದ ಗೌರವ ಮುಖ್ಯ. ಅದನ್ನು ಉಳಿಸುವ ನಿಟ್ಟಿನಲ್ಲಿ ಮಂಜೇಗೌಡ ವಿಫಲರಾಗಿದ್ದಾರೆ. ಅವರು ಈ ಕೂಡಲೇ ರಾಜೀನಾಮೆ ನೀಡುವುದೇ ಸೂಕ್ತ ಎಂದು ಅಭಿಪ್ರಾಯಪಟ್ಟರು. ಸಮುದಾಯ ಮುಖಂಡರಾದ ಕರೀಗೌಡ, ಭೈರಪ್ಪ, ಕೃಷ್ಣಪ್ಪ, ಶೇಖರ್, ಉಮೇಶ್, ಶಂಕರ್, ಕುಮಾರ್‌ಗೌಡ ಸೇರಿದಂತೆ ವಿವಿಧ ಸಂಘಟನೆಗಳ ಸಮುದಾಯದ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮನೆ ಬೀಗ ಮುರಿದು 1.39 ಲಕ್ಷದ ಚಿನ್ನಾಭರಣ ಕಳವು

ಗುಂಡ್ಲುಪೇಟೆ, ನ. 29– ಕುಟುಂಬಸ್ಥರು ತಿರುಪತಿ ಪ್ರವಾಸ ಹೋಗಿದ್ದ ವೇಳೆ ಮನೆ ಬೀಗ ಮುರಿದು 1.39 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಗುಂಡ್ಲುಪೇಟೆ ಪಟ್ಟಣದ ಹಳೇ ಹೌಸಿಂಗ್ ಬೋರ್ಡ್ ಕಾಲೋನಿಯಿಂದ ವರದಿಯಾಗಿದೆ.

ಅಲ್ಲಿನ ನಿವಾಸಿ ಮಣಿ(30) ಎಂಬುವರು ಕುಟುಂಬ ಸಮೇತರಾಗಿ ನ. 20ರಂದು ತಿರುಪತಿ ಪ್ರವಾಸಕ್ಕೆ ಹೊರಟಿದ್ದರು. ನ. 22ರಂದು ಬೆಳಗ್ಗೆ ಅವರ ಮನೆ ಬೀಗ ಹೊಡೆದಿರುವುದನ್ನು ಕಂಡ ಮನೆ ಮಾಲೀಕರು ಮೊಬೈಲ್ ಮೂಲಕ ಅವರಿಗೆ ವಿಚಾರ ತಿಳಿಸಿದ್ದಾರೆ. ಮರುದಿನ ವಾಪಸ್ಸಾದ ಮಣಿ, ಮನೆಯನ್ನು ಪರಿಶೀಲಿಸಿದಾಗ 20 ಮತ್ತು 10 ಗ್ರಾಂ ತೂಕದ ಎರಡು ಚಿನ್ನದ ಸರ, 5 ಗ್ರಾಂ ತೂಕದ ಎರಡು ಉಂಗುರ, 5 ಗ್ರಾಂ ತೂಕದ ಚಿನ್ನದ ಓಲೆ ಸೇರಿದಂತೆ 1,39,500 ರೂ. ಮೌಲ್ಯದ 45 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಿಂಗ್ ರಸ್ತೆಯಲ್ಲಿ ದುಷ್ಕರ್ಮಿಗಳ ಅಟ್ಟಹಾಸ: ಹೂ ಡೆಕೋರೇಟರ್ ತಡೆದು ಚಾಕು ತೋರಿಸಿ ಸ್ಕೂಟರ್ ಕಳವು

ಮೈಸೂರು, ನ. 29– ಡೆಕೋರೇಷನ್ ಸಾಮಾನುಗಳನ್ನು ತರಲು ಸ್ನೇಹಿತನೊಂದಿಗೆ ತೆರಳುತ್ತಿದ್ದ ಹೂ ಡೆಕೋರೇಟರ್‌ನನ್ನು ದುಷ್ಕರ್ಮಿಗಳು ಅಡ್ಡಗಟ್ಟಿ ದ್ವಿಚಕ್ರ ವಾಹನ ಕಿತ್ತುಕೊಂಡು ಹೋದ ಘಟನೆ ಮೈಸೂರಿನ ರಿಂಗ್ ರಸ್ತೆಯಲ್ಲಿ ನ. 27ರಂದು ಸರಿರಾತ್ರಿ 1.30ರ ಸುಮಾರಿನಲ್ಲಿ ನಡೆದಿದೆ. ಮೈಸೂರಿನ ಬಸವೇಶ್ವರನಗರ ನಿವಾಸಿ ಸಿ.ಟಿ. ಜಯಕೀರ್ತಿ(19) ದ್ವಿಚಕ್ರ ವಾಹನ ಕಳೆದುಕೊಂಡವರಾಗಿದ್ದು, ಇವರು ಸಾ.ರಾ. ಮಹೇಶ್ ಕಲ್ಯಾಣ ಮಂಟಪದಲ್ಲಿ ನ. 27ರಂದು ರಾತ್ರಿ ಹೂ ಡೆಕೋರೇಷನ್ ಮಾಡಿದ್ದು, ಮರುದಿನದ ಡೆಕೋರೇಷನ್‌ಗಾಗಿ ಸಾಮಾನುಗಳನ್ನು ತರಲು ರಾತ್ರಿ 1.30ರಲ್ಲಿ ಸ್ನೇಹಿತ ಅಚ್ಚಪ್ಪಣ್ಣ ಎಂಬುವರೊಂದಿಗೆ ಹೋಂಡಾ ಆಕ್ಟೀವಾ (ಕೆಎ 44–ಡಬ್ಲ್ಯೂ 8949)ದಲ್ಲಿ ಬೋಗಾದಿ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ ಆಚಾರ್ಯ ಕಲ್ಯಾಣ ಮಂಟಪದ ಬಳಿ ಇಬ್ಬರು ದುಷ್ಕರ್ಮಿಗಳು ಇವರನ್ನು ಅಡ್ಡಗಟ್ಟಿ, ಚಾಕು ತೋರಿಸಿ ಹೆದರಿಸಿ ಸ್ಕೂಟರ್ ಮತ್ತು ಅವರ ಬಳಿ ಇದ್ದ 500 ರೂ. ಕಸಿದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರಿಂಗ್ ರಸ್ತೆಯಲ್ಲಿ ರಾತ್ರಿ ವೇಳೆ ಪದೇ ಪದೆ ದ್ವಿಚಕ್ರ ವಾಹನಗಳನ್ನು ಅಡ್ಡಗಟ್ಟಿ ಸುಲಿಗೆ ಮಾಡುವ ಪ್ರಕರಣಗಳು ನಡೆಯುತ್ತಲೇ ಇವೆ. ಸಾರ್ವಜನಿಕರು ರಿಂಗ್ ರಸ್ತೆಯಲ್ಲಿ ಸಂಚರಿಸಲು ಭಯಪಡುವಂತಹ ವಾತಾವರಣ ನಿರ್ಮಾಣವಾಗಿದೆ. ಹಲವರು ದುಷ್ಕರ್ಮಿಗಳಿಂದ ಹಣ ಕಳೆದುಕೊಂಡರೂ, ಜೀವ ಉಳಿದಿದ್ದೇ ಸಾಕು ಎಂದು ಪೊಲೀಸರಿಗೆ ದೂರನ್ನೇ ಸಲ್ಲಿಸದೇ ಇರುವುದು ಕೂಡ ಕಂಡುಬಂದಿದೆ. ಪೊಲೀಸರು ರಿಂಗ್ ರಸ್ತೆಯಲ್ಲಿ ಗಸ್ತನ್ನು ಹೆಚ್ಚಿಸಿ ದುಷ್ಕರ್ಮಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಮುಸುಕಿನ ಜೋಳ ಖರೀದಿಸಿ 15.85 ಲಕ್ಷ ವಂಚಿಸಿದ ತಮಿಳ್ನಾಡು ವರ್ತಕರು

ಹೆಚ್.ಡಿ.ಕೋಟೆ, ನ. 29– ಹೆಚ್.ಡಿ.ಕೋಟೆಯ ವರ್ತಕರೊಬ್ಬರಿಂದ ಮುಸುಕಿನ ಜೋಳ ಖರೀದಿಸಿದ ತಮಿಳುನಾಡಿನ ಇಬ್ಬರು ವರ್ತಕರು 15.85 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ಟ್ರೇಡರ್ಸ್ ಮಾಲೀಕ ಎಂ.ಎ. ನವೀನ್(40) ವಂಚನೆಗೊಳಗಾದವರಾಗಿದ್ದು, ತಮಿಳುನಾಡಿನ ತಿರುಪ್ಪೂರ್ ಜಿಲ್ಲೆ ಪಲ್ಲಡಂ ತಾಲೂಕಿನ ಸೆಂಜೇರಿ ಪುದೂರ್ ಗ್ರಾಮದ ನಟರಾಜ್ ಟ್ರೇಡರ್ಸ್ ಮಾಲೀಕರಾದ ಸೆಂದಿಲ್‌ಕುಮಾರ್ ಮತ್ತು ವೆಂಕಟೇಶ್ ಆರೋಪಿಗಳಾಗಿರುವವರು. ಆರಂಭದಿಂದ ಅವರು ಹೆಚ್.ಡಿ.ಕೋಟೆಯಲ್ಲಿ ರೈತರಿಂದ ಹತ್ತಿ ಹಾಗೂ ಮುಸುಕಿನ ಜೋಳ ಖರೀದಿಸಿ ತಮಿಳುನಾಡಿನ ವರ್ತಕರಿಗೆ ಸಗಟಾಗಿ ಮಾರಾಟ ಮಾಡುವ ವ್ಯವಹಾರ ನಡೆಸುತ್ತಿದ್ದಾರೆ. ತಮಿಳುನಾಡಿನ ಸೆಂದಿಲ್‌ಕುಮಾರ್ ಮತ್ತು ವೆಂಕಟೇಶ್ ಮಾಲೀಕತ್ವದ ನಟರಾಜ್ ಟ್ರೇಡರ್ಸ್‌ಗೆ ಅವರು ಕಳೆದ ಸೆಪ್ಟೆಂಬರ್ 17ರಿಂದ 21ರವರೆಗೆ 17,85,930 ರೂ. ಮೌಲ್ಯದ 1066 ಕ್ವಿಂಟಾಲ್ ಮುಸುಕಿನ ಜೋಳವನ್ನು ಸರಬರಾಜು ಮಾಡಿದ್ದರು. ಆದರೆ, ತಮಿಳುನಾಡು ವರ್ತಕರು ಇವರ ಬ್ಯಾಂಕ್ ಖಾತೆಗೆ ನ.8ರಂದು 2 ಲಕ್ಷ ರೂ. ಮಾತ್ರ ವರ್ಗಾವಣೆ ಮಾಡಿದ್ದು, 15,85,930 ರೂ. ವಂಚಿಸಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಭಾರತೀಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ

ಸಂಸ್ಕೃತ ವಿದ್ವಾಂಸ ನಾರಾಯಣ ದೇಸಾಯಿ ಅಭಿಮತ



ಮೈಸೂರು,ನ.29(ಪಿಎಂ)– ಭಾರತೀಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಮಹರ್ಷಿ ಪದವಿಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ವಿದ್ವಾನ್ ನಾರಾಯಣ ದೇಸಾಯಿ ಅಭಿಪ್ರಾಯಪಟ್ಟರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾಷಾ ವಿಭಾಗಗಳು ಹಾಗೂ ಐಕ್ಯೂಎಸಿ ವತಿಯಿಂದ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಮೌಲ್ಯಯುತ ಜೀವನಕ್ಕೆ ಭಾರತೀಯ ಸಾಹಿತ್ಯದ ಕೊಡುಗೆ' ಕುರಿತು ಮಾತನಾಡಿದ ಅವರು, ಭಾರತೀಯ ಸಾಹಿತ್ಯ ವಿಶಾಲವಾಗಿದ್ದು, ಅದರಲ್ಲಿ ವೇದ ಸಾಹಿತ್ಯವು ಅತ್ಯಂತ ಪ್ರಾಚೀನತೆ ಹೊಂದಿದೆ ಎಂದು ಹೇಳಿದರು. ಸಮುದಾಯದಲ್ಲಿ ಪರಸ್ಪರ ವಿರೋಧವನ್ನು ಎಂದಿಗೂ ಮಾಡದಂತೆ, ಮಿತ್ರರಾಗಿ ಸಹಬಾಳ್ವೆ ನಡೆಸುವ ಬಗ್ಗೆ ವಿಶ್ವ ಚಿಂತನೆ ವೇದ ಸಾಹಿತ್ಯದಲ್ಲಿದೆ. 'ವಸುಧೈವ ಕುಟುಂಬಕಂ' ಪರಿಪಾಲನೆಗೆ ಮಹತ್ವ ನೀಡಲಾಗಿದೆ. ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ಭಾರತೀಯ ಸಂಸ್ಕೃತಿ, ಸಭ್ಯತೆ, ಜೀವನ ಮೌಲ್ಯಗಳ ಸಾಕಾರರೂಪ. ಶ್ರೀರಾಮ ಗುಣವಂತ, ಧೀರ, ಶೀಲವಂತ, ಸತ್ಯನಿಷ್ಠ, ಧರ್ಮಜ್ಞ, ವಿದ್ವಾಂಸ, ಸರ್ವಪ್ರಾಣಿ ಹಿತಾಸಕ್ತ ಎಂದು ಬಣ್ಣಿಸಿದರು.

ರಾಮನು ಅನಂತ ಗುಣಗಳ ಗಣಿ. ಮಾನವ ಜೀವನ ಮೌಲ್ಯಗಳನ್ನು ಸಮಗ್ರವಾಗಿ ತಿಳಿಸುವ ಕಾವ್ಯ ವಾಲ್ಮೀಕಿ ವಿರಚಿತ ರಾಮಾಯಣವಾಗಿದೆ. ಇಲ್ಲಿ ಬರುವ ಅನೇಕ ಪಾತ್ರಗಳ ಮೂಲಕ ಜೀವನದ ಮೌಲ್ಯಗಳಾದ ಧರ್ಮ, ಅರ್ಥ, ಕಾಮಗಳನ್ನು ಕವಿ ವಾಲ್ಮೀಕಿ ಅರ್ಥೈಸಿದ್ದಾನೆ. ಇಂದಿನ ಜಗತ್ತಿಗೆ ಶಾಂತಿ ನೀಡಬಲ್ಲ ಶಕ್ತಿ ಈ ಮೌಲ್ಯಗಳಿಗೆ ಇದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಕೆ.ಆರ್.ಮಂಜುನಾಥ್, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.



ಶ್ರದ್ಧಾಭಕ್ತಿಯಿಂದ ಸುಬ್ರಹ್ಮಣ್ಯ ಷಷ್ಠಿ ಆಚರಣೆ

ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ, ಸಾವಿರಾರು ಭಕ್ತರು ಭಾಗಿ



ಮಡಿಕೇರಿ, ನ.29– ಕೊಡಗು ಜಿಲ್ಲೆಯಾದ್ಯಂತ ಸುಬ್ರಹ್ಮಣ್ಯ ಷಷ್ಠಿ ಉತ್ಸವ ಶ್ರದ್ಧಾ ಭಕ್ತಿಯಿಂದ ಆಚರಿಸಲ್ಪಟ್ಟಿತು. ಕಾವೇರಿ ಸಂಗಮದ ಊರಾದ ಕೂಡಿಗೆಯಲ್ಲಿ ಸುಬ್ರಹ್ಮಣ್ಯ ಷಷ್ಠಿಯ ರಥೋತ್ಸವದಲ್ಲಿ ಭಕ್ತಿ ಭಾವ ಮೇಳೈಸಿದರೆ, ಮಡಿಕೇರಿ ತಾಲೂಕಿನ ಮೂರ್ನಾಡಿನ ಬೈರಂಬಾಡದ ಷಷ್ಠಿ ಉತ್ಸವಕ್ಕೆ ಸಹಸ್ರಾರು ಮಂದಿ ಸಾಕ್ಷಿಯಾದರು.

ಕೂಡಿಗೆಯ ಶ್ರೀ ಉದ್ಭವ ಸುಬ್ರಮಣ್ಯ ಸ್ವಾಮಿಯ 54ನೇ ವರ್ಷದ ವಾರ್ಷಿಕ ರಥೋತ್ಸವ ಶ್ರದ್ಧಾ ಭಕ್ತಿಯಿಂದ ನಡೆಯಿತು. ದೇವರ ರಥವನ್ನು ನೂರಾರು ಭಕ್ತಾದಿಗಳು ಎಳೆದು ಪುನೀತರಾದರು. ಸ್ವಾಮಿಯ ರಥೋತ್ಸವದ ಅಂಗವಾಗಿ ಭಕ್ತಾದಿಗಳಿಗೆ ಮಧ್ಯಾಹ್ನ ಅನ್ನಸಂತರ್ಪಣೆ ನೆರವೇರಿತು. ಸ್ಥಳೀಯ ಸಂಘ ಸಂಸ್ಥೆಗಳ ಆಶ್ರಯದಲ್ಲಿ ರಥೋತ್ಸವದ ಅಂಗವಾಗಿ ಸ್ಥಳೀಯ ಶ್ರೀ ಸುಬ್ರಮಣ್ಯ ಭಕ್ತ ಮಂಡಳಿ ವತಿಯಿಂದ ಮಂಗಳೂರಿನ ತಂಡದವರಿಂದ ಹುಲಿವೇಷ, ಕೀಲುಕುದುರೆ ಕುಣಿತ, ಗೊಂಬೆ ಕುಣಿತ, ಚೆಂಡೆ ವಾದ್ಯ ಪ್ರದರ್ಶನ ರಥದೊಂದಿಗೆ ಸಾಗಿ ಗಮನ ಸೆಳೆಯಿತು. ಅರ್ಚಕರಾದ ಯಜ್ಞೇಶ್ವರ ಐತಾಳ್ ಮತ್ತು ನವೀನ್ ಭಟ್ ತಂಡದ ಸದಸ್ಯರಿಂದ ಪೂಜಾ ವಿಧಿ ವಿಧಾನಗಳು ಜರುಗಿದವು.

ಬೈರಂಬಾಡ: ಇತಿಹಾಸ ಪ್ರಸಿದ್ಧ ಬೈರಂಬಾಡದ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತಾದಿಗಳ ಸಮ್ಮುಖದಲ್ಲಿ ಷಷ್ಠಿ ಉತ್ಸವ ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ದೇವಸ್ಥಾನದಲ್ಲಿ ಬೆಳಗ್ಗಿನಿಂದಲೆ ವಿಶೇಷ ಪೂಜಾ ಕೈಂಕರ್ಯಗಳು ಆರಂಭಗೊಂಡು ಶ್ರೀ ಸುಬ್ರಮಣ್ಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಕ್ಷೀರಾಭಿಷೇಕ, ರುದ್ರಾಭಿಷೇಕಗಳು ನಡೆದವು. ಮುಂಜಾನೆಯಿಂದಲೇ ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ಹಣ್ಣುಕಾಯಿ, ಹರಕೆಯ ಹಣಗಳನ್ನು ಒಪ್ಪಿಸಿ ಪೂಜೆ ಸಲ್ಲಿಸಿದರು. ಮೂರ್ನಾಡು, ಬಲಮುರಿ, ವೀರಾಜಪೇಟೆ, ಸಿದ್ದಾಪುರ, ಮರಗೋಡು, ಹಾಕತ್ತೂರು ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಭಕ್ತಾದಿಗಳು ತಂಡೋಪತಂಡವಾಗಿ ಬಂದು ದೇವರ ದರ್ಶನ ಪಡೆದರು.

ದೇವರಿಗೆ ಮಹಾಮಂಗಳಾರತಿ ಸೇವೆ ನಡೆದ ಬಳಿಕ ಮಧ್ಯಾಹ್ನ ನೆರೆದ ಭಕ್ತಾದಿಗಳಿಗೆ ದೇವಸ್ಥಾನದ ವತಿಯಿಂದ ಅನ್ನಸಂತರ್ಪಣೆ ನಡೆಯಿತು. ದೇವಾಲಯದ ಹೊರಭಾಗದಲ್ಲಿ ಹರಕೆ ಹೊತ್ತ ಭಕ್ತಾದಿಗಳು ಕೇಶ ಮುಂಡನ ನೆರವೇರಿಸಿದರು. ಹರಕೆ ಹೊತ್ತ ಭಕ್ತರು ನಾಗರೂಪ, ಆಳುರೂಪಗಳನ್ನು ಒಪ್ಪಿಸಿ ಹರಕೆಗಳನ್ನು ಒಪ್ಪಿಸಿದರು.

ಮಡಿಕೇರಿ: ಮಡಿಕೇರಿಯ ಇತಿಹಾಸ ಪ್ರಸಿದ್ಧ ಶ್ರೀ ಓಂಕಾರೇಶ್ವರ ದೇವಾಲಯ ದಲ್ಲಿ ಶ್ರದ್ಧಾ ಭಕ್ತಿಗಳಿಂದ ಸುಬ್ರಹ್ಮಣ್ಯನ ಆರಾಧನೆ ನಡೆಯಿತು. ಬೆಳಗ್ಗಿನಿಂದಲೇ ದೇವರಿಗೆ ಅಭಿಷೇಕ, ಹೂವಿನ ಅಲಂಕಾರ, ಮಹಾಪೂಜೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಷಷ್ಠಿ ಉತ್ಸವವನ್ನು ನಡೆಸಲಾಯಿತು. ನಂತರ ನೆರೆದಿದ್ದ ಭಕ್ತರಿಗೆ ಅನ್ನದಾನ ನಡೆಯಿತು. ನಗರದ ಶ್ರೀಮುತ್ತಪ್ಪ ದೇವಾಲಯದ ಆವರಣದಲ್ಲಿರುವ ಸುಬ್ರಹ್ಮಣ್ಯ ಗುಡಿಯಲ್ಲೂ ವಿಶೇಷ ಪೂಜೆ ನಡೆಯಿತು. ಶ್ರೀಮುತ್ತಪ್ಪನ್ ಹಾಗೂ ಶ್ರೀಸುಬ್ರಹ್ಮಣ್ಯ ದೇವರ ಆರಾಧನೆಯೊಂದಿಗೆ ಬಲಿ ಪೂಜೆ, ಕ್ಷೀರಾಭಿಷೇಕ, ಪುಷ್ಪಾರ್ಚನೆ ಸೇರಿದಂತೆ ವಿವಿಧ ಸೇವೆಗಳು ಜರುಗಿದವು. ನೂರಾರು ಭಕ್ತರು ಷಷ್ಠಿ ಪೂಜೆಗೆ ಸಾಕ್ಷಿಯಾದರು. ನಗರದ ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕೋಟೆಮಾರಿಯಮ್ಮ ದೇಗುಲದಲ್ಲಿ ಹಾಗೂ ಅಶ್ವತ್ಥಕಟ್ಟೆಯಲ್ಲಿ ನಾಗರ ಕಲ್ಲಿಗೆ ಭಕ್ತರು ಹಾಲೆರೆದು ವಿಶೇಷ ಪೂಜೆ ಸಲ್ಲಿಸಿದರು.

ನಕಲಿ ಆಧಾರ್ ಕಾರ್ಡ್ ಬಳಸಿ ವ್ಯಾಪಾರಕ್ಕೆ ಯತ್ನ

ಹಿಂದೂಪರ ಸಂಘಟನೆಗಳಿಂದ ಅನ್ಯಧರ್ಮೀಯ ವ್ಯಾಪಾರಿಯ ಪತ್ತೆ

ಮಡಿಕೇರಿ, ನ.29– ನಕಲಿ ಆಧಾರ್ ಕಾರ್ಡ್ ಬಳಸಿ, ತಾನು ಹಿಂದೂ ಎಂದು ಸುಳ್ಳು ಹೇಳಿ ವ್ಯಾಪಾರ ಮಾಡುತ್ತಿದ್ದ ವ್ಯಕ್ತಿಯನ್ನು ಹಿಂದೂಪರ ಸಂಘಟನೆಯ ಕಾರ್ಯಕರ್ತರು ಪತ್ತೆ ಹಚ್ಚಿ ಅಂಗಡಿಯನ್ನು ತೆರವುಗೊಳಿಸಿದ ಘಟನೆ ಪೊನ್ನಂಪೇಟೆ ತಾಲೂಕಿನ ಹರಿಹರದಲ್ಲಿ ಸಂಭವಿಸಿದೆ.

ಶ್ರೀ ಸುಬ್ರಹ್ಮಣ್ಯ ಷಷ್ಠಿ ಪ್ರಯುಕ್ತ ಪೊನ್ನಂಪೇಟೆ ತಾಲೂಕಿನ ಹರಿಹರ ಸುಬ್ರಹ್ಮಣ್ಯ ದೇವಾಲಯ ಜಾತ್ರೆಯಲ್ಲಿ ಅನ್ಯಧರ್ಮಿಯರ ವ್ಯಾಪಾರಕ್ಕೆ ಹಿಂದೂಪರ ಸಂಘಟನೆಗಳು ನಿರ್ಬಂಧ ವಿಧಿಸಿದ್ದು, ನಕಲಿ ಆಧಾರ್ ಕಾರ್ಡ್ ಬಳಸಿ ತಾನೂ ಹಿಂದೂ ಎಂದು ಬಿಂಬಿಸಿ, ಅನ್ಯಧರ್ಮಿಯ ವ್ಯಕ್ತಿಯೊಬ್ಬ ಫ್ಯಾನ್ಸಿ ಅಂಗಡಿಯನ್ನಿಟ್ಟು ವ್ಯಾಪಾರ ನಡೆಸುತ್ತಿದ್ದನೆನ್ನಲಾಗಿದೆ. ಆಧಾರ್ ಕಾರ್ಡ್‌ನ ಒಂದು ಬದಿ ರವೀಶ್ ಎಂದು ದಾಖಲಾಗಿದ್ದು, ಮತ್ತೊಂದು ಬದಿಯಲ್ಲಿ ಶಂಭು ಶಾ ಹುಸೈನಿ ಎಂದು ದಾಖಲು ಮಾಡಲಾಗಿದೆ. ಬಳಿಕ ಅಂಗಡಿಯನ್ನು ಸ್ಥಳದಿಂದ ತೆರವುಗೊಳಿಸಲಾಯಿತು.

ಹರಿಹರ ಸುಬ್ರಹ್ಮಣ್ಯ ದೇವಾಲಯ ಜಾತ್ರೆಯಲ್ಲಿ ಅನ್ಯಧರ್ಮಿಯರು ವ್ಯಾಪಾರ ನಡೆಸದಂತೆ ಹಿಂದೂಪರ ಸಂಘಟನೆಗಳು ನಿರ್ಬಂಧ ವಿಧಿಸಿದ್ದು, ಹಿಂದುಗಳ ಯಾವುದೇ ಜಾತ್ರೆಯಲ್ಲೂ ಅನ್ಯಧರ್ಮಿಯರು ವ್ಯಾಪಾರ ನಡೆಸಲು ಅವಕಾಶ ನೀಡುವುದಿಲ್ಲ. ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಹಿಂದೂ ದೇವಾಲಯಗಳನ್ನು ಟಾರ್ಗೆಟ್ ಮಾಡಲಾಗಿದ್ದು ಬೆಳಕಿಗೆ ಬಂದಿತ್ತು.

ಈ ಹಿನ್ನೆಲೆಯಲ್ಲಿ ಅನ್ಯಧರ್ಮಿಯರ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದಿಲ್ಲ ಎಂದು ವಿಶ್ವಹಿಂದೂ ಪರಿಷತ್‌ನ ಪೊನ್ನಂಪೇಟೆ ಪ್ರಖಂಡದ ಅಧ್ಯಕ್ಷ ಹರೀಶ್ ಸ್ಪಷ್ಟಪಡಿಸಿದ್ದಾರೆ. ದೇವರ ಉತ್ಸವದಲ್ಲಿ ನೂರಾರು ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡಿದ್ದು, ಸ್ಥಳದಲ್ಲಿ ಪೊಲೀಸ್ ತುಕಡಿಯನ್ನು ನಿಯೋಜಿಸಲಾಗಿದ್ದು, ಅಗತ್ಯ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಭೂಮಿ ಹಸ್ತಾಂತರ

ಮಡಿಕೇರಿ, ನ.29– ಮಡಿಕೇರಿ ತಾಲೂಕು ತಹಶೀಲ್ದಾರರು, ಕಂದಾಯ ಪರಿವೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು, ಭೂಮಾಪಕರು, ಪೊಲೀಸ್ ಇಲಾಖೆ ಸಿಬ್ಬಂದಿಗಳು, ಗ್ರಾಮ ಪಂಚಾಯ್ತಿ ಸಿಬ್ಬಂದಿಗಳ ಸಮಕ್ಷಮದಲ್ಲಿ ಮಡಿಕೇರಿ ಹೋಬಳಿ ಎಸ್ ಕಟ್ಟೆಮಾಡು ಗ್ರಾಮದ ಸ.ನಂ 154 ರ 1.47 ಎಕ್ರೆ ವಿಸ್ತೀರ್ಣದ ಸರ್ಕಾರಿ ಕೆರೆ ಜಾಗವನ್ನು ಒತ್ತುವರಿಯಿಂದ ಮುಕ್ತಗೊಳಿಸಿ ಗ್ರಾಮ ಪಂಚಾಯ್ತಿಗೆ ಹಸ್ತಾಂತರಿಸಲಾಯಿತು.

ಪೊನ್ನಂಪೇಟೆಯಲ್ಲಿ ಮಿನಿ ವಿಧಾನಸೌಧ ನಿರ್ಮಾಣ

ಹುದಿಕೇರಿಯಲ್ಲಿ ನಾಡಕಚೇರಿ ಉದ್ಘಾಟಿಸಿದ ಶಾಸಕ ಬೋಪಯ್ಯ



ಗೋಣಿಕೊಪ್ಪ, ನ.29– ಪೊನ್ನಂಪೇಟೆಯಲ್ಲಿ ಮಿನಿ ವಿಧಾನಸೌಧ ನಿರ್ಮಿಸಲಾಗುವುದು ಎಂದು ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದ್ದಾರೆ.

18.75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹುದಿಕೇರಿ ನಾಡ ಕಚೇರಿ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನರಿಗೆ ಸರ್ಕಾರಿ ಸೇವೆ ನೀಡಲು ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಸನ್ನಿಹಿತ ಎಂದರು.

ಗ್ರಾಮೀಣ ಜನರಿಗೆ ಎಲ್ಲ ಸೇವೆಗಳು ನಿಗದಿತ ಸಮಯದೊಳಗೆ ಸಿಗಬೇಕು ಎಂಬ ನಿಟ್ಟಿನಲ್ಲಿ ಮತ್ತು ನಾಡ ಕಚೇರಿಗಳನ್ನು ಬಲಪಡಿಸಲು ಪೂರ್ವ ಯೋಜಿತ ಕಟ್ಟಡ ಸ್ಥಾಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಸಿಬ್ಬಂದಿ ಕೊರತೆಗಳನ್ನು ತುಂಬಲಾಗುತ್ತಿದೆ. ತಹಸೀಲ್ದಾರ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಜನರ ಸೇವೆಗೆ ಒತ್ತು ನೀಡಿದಾಗ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲು ಸಾಧ್ಯವಾಗಲಿದೆ ಎಂದರು. ಜಿಲ್ಲಾ ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ ಮಾತನಾಡಿ, ಸಾರ್ವಜನಿಕರಿಗೆ ಕಂದಾಯ ಇಲಾಖೆಯಿಂದ ಪೂರಕವಾದ ವ್ಯವಸ್ಥೆಗಳನ್ನು ನೀಡಲು ಸ್ಥಳೀಯವಾಗಿ ಉಪತಹಸೀಲ್ದಾರ್ ಮತ್ತು ಗ್ರಾಮ ಲೆಕ್ಕಿಗರನ್ನು ನೇಮಿಸಲಾ ಗುವುದು ಎಂದರು. ಪೊನ್ನಂಪೇಟೆ ತಹಸೀಲ್ದಾರ್ ಎನ್. ಎಸ್. ಪ್ರಶಾಂತ್, ಹುದಿಕೇರಿ ಗ್ರಾಪಂ ಅಧ್ಯಕ್ಷ ವಾಸು ಬಿದ್ದಪ್ಪ, ಬಗರ್‌ಹುಕುಂ ಸಾಗುವಳಿ ಸಕ್ರಮೀ ಕರಣ ಸಮಿತಿ ತಾಲೂಕು ಅಧ್ಯಕ್ಷ ಕಾಡ್ಯಮಾಡ ಗಿರೀಶ್ ಗಣಪತಿ, ಬಿಜೆಪಿ ಮಂಡಲ ಅಧ್ಯಕ್ಷ ನೆಲ್ಲಿರ ಚಲನ್ ಕುಮಾರ್, ಕಾರ್ಯದರ್ಶಿ ಅಜ್ಜಿಕುಟ್ಟೀರ ಪ್ರವೀಣ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಂಞಂಗಡ ಅರುಣ್ ಭೀಮಯ್ಯ, ತಾಲೂಕು ಸರ್ವೇ ಅಧಿಕಾರಿ ಬಾನಂಗಡ ಅರುಣ್ ಇದ್ದರು.

ಡಿಸೆಂಬರ್‌ನಲ್ಲಿ ಉದ್ಯೋಗ ಮೇಳ

ಮಡಿಕೇರಿ, ನ.29– ಕೊಡಗು ಜಿಲ್ಲಾಡಳಿತ ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಡಿಸೆಂಬರ್ ಎರಡು ಮತ್ತು ಮೂರನೇ ವಾರದಲ್ಲಿ ಉದ್ಯೋಗ ಮೇಳ ಆಯೋಜಿಸುವ ಬಗ್ಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ವತಿಯಿಂದ ಉದ್ಯೋಗ ಮೇಳ ಆಯೋಜಿಸುವ ಸಂಬಂಧ ಮಂಗಳವಾರ ಪೂರ್ವಭಾವಿ ಸಭೆ ನಡೆಯಿತು. ಡಿಸೆಂಬರ್ 13 ರಂದು ಕುಶಾಲನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಡಿಸೆಂಬರ್ 16 ರಂದು ಮಡಿಕೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಡಿಸೆಂಬರ್ 20 ರಂದು ಗೋಣಿಕೊಪ್ಪ ಕಾವೇರಿ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಉದ್ಯೋಗ ಮೇಳ ಆಯೋಜಿಸಲು ಎಲ್ಲಾ ರೀತಿಯ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಕಾಲೇಜಿನ ಪ್ರಾಂಶುಪಾಲರ ಜೊತೆ ಸಮನ್ವಯ ಸಾಧಿಸಿ ಉದ್ಯೋಗ ಮೇಳ ಯಶಸ್ಸಿಗೆ ಶ್ರಮಿಸುವಂತೆ ನಿರ್ದೇಶನ ನೀಡಿದರು. ಉದ್ಯೋಗ ಮೇಳ ಸಂದರ್ಭದಲ್ಲಿ ಕಾರ್ಡ್ ನೋಂದಣಿಗೆ ಕ್ರಮವಹಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗೆ ಜಿಲ್ಲಾಧಿಕಾರಿ ಅವರು ಸೂಚಿಸಿದರು.

ಜಿ.ಪಂ.ಸಿಇಒ ಡಾ.ಎಸ್.ಆಕಾಶ್ ಅವರು ಮಾತನಾಡಿ ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳ ನೋಂದಣಿಗೆ ಕ್ರಮವಹಿಸುವುದು, ಉದ್ಯೋಗ ಮೇಳದಲ್ಲಿ ಭಾಗವಹಿಸುವ ಉದ್ಯೋಗದಾತರ ನಿಖರ ಮಾಹಿತಿಯನ್ನು ಒದಗಿಸುವಂತೆ ಅವರು ತಿಳಿಸಿದರು.

ಡಿ.7, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

ಮಡಿಕೇರಿ, ನ.29– ಜಿಲ್ಲಾಡಳಿತ ಹಾಗೂ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಡಿ.7 ರಂದು ಬೆಳಗ್ಗೆ 10 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಆವರಣದಲ್ಲಿರುವ ಯುದ್ಧ ಸ್ಮಾರಕದಲ್ಲಿ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ನಡೆಯಲಿದೆ.

ಲೆಫ್ಟಿನೆಂಟ್ ಕರ್ನಲ್, ಮಹಾವೀರ ಚಕ್ರ(ನಿವೃತ್ತ) ಪಿ.ಎಸ್.ಗಣಪತಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಯುದ್ಧ ಸ್ಮಾರಕಕ್ಕೆ ಪುಷ್ಪ ಗುಚ್ಛ ಅರ್ಪಿಸಿ ಗೌರವ ನಮನ ಸಲ್ಲಿಸಲಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಸೈನಿಕ ಮಂಡಳಿ ಅಧ್ಯಕ್ಷರಾದ ಡಾ.ಬಿ.ಸಿ.ಸತೀಶ ಹಾಗೂ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ಜೆ.ಆರ್. ಬಾಲಸುಬ್ರಮಣ್ಯಂ ಇತರರು ಪಾಲ್ಗೊಳ್ಳಲಿದ್ದಾರೆ.

ಕನ್ನಡ ಗೀತೆಗಾಯನ ಸ್ಪರ್ಧೆ

ಮಡಿಕೇರಿ, ನ.29– ತಾಲೂಕು ಬಾಲಭವನ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸೋಮವಾರಪೇಟೆ ಶಿಶು ಅಭಿವೃದ್ಧಿ ಯೋಜನೆ ವತಿಯಿಂದ 2022–23ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಯುಕ್ತ 5 ರಿಂದ 16 ವರ್ಷದ ಮಕ್ಕಳಿಗೆ ವೈಯಕ್ತಿಕ ಕನ್ನಡ ಗೀತೆಗಾಯನ ಸ್ಪರ್ಧೆ ಮತ್ತು ಗಾಂಧಿ ಜಯಂತಿ ದಿನಾಚರಣೆ ಪ್ರಯುಕ್ತ 5 ರಿಂದ 16 ವರ್ಷದ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆಯು ಡಿ.5 ರಂದು ಬೆಳಗ್ಗೆ 11 ಗಂಟೆಗೆ ಸೋಮವಾರಪೇಟೆ ತಾಪಂ ಆವರಣದ ಸ್ತ್ರೀಶಕ್ತಿ ಭವನ ಕಟ್ಟಡದಲ್ಲಿ ನಡೆಯಲಿದೆ. ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಸೋಮವಾರಪೇಟೆ, ದೂ.ಸಂ: 08276–282281 ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಾ.ನಗರ ಜಿಲ್ಲೆಯಾದ್ಯಂತ ಷಷ್ಠಿ ಆಚರಣೆ





ಚಾಮರಾಜನಗರ, ನ.29– ಜಿಲ್ಲೆಯಾದ್ಯಂತ ಮಂಗಳವಾರ ಸುಬ್ರಹ್ಮಣ್ಯ ಷಷ್ಠಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಬೆಳಗ್ಗೆಯಿಂದಲೇ ತಮ್ಮ ಮನೆಯ ಸಮೀಪ ಇರುವ ಹುತ್ತದ ಬಳಿಗೆ ಕುಟುಂಬ ಸಮೇತರಾಗಿ ಆಗಮಿಸಿ, ಹುತ್ತಕ್ಕೆ ಹಾಲೆರೆದು, ಕೆಲವು ಕಡೆ ಕೋಳಿ ಬಲಿಕೊಟ್ಟು ಪೂಜೆ ಸಲ್ಲಿಸಿದರು. ಹುತ್ತಕ್ಕೆ ಹಾಲೆರೆದರೆ ಅಥವಾ ಕೋಳಿ ಬಲಿ ಕೊಟ್ಟರೆ, ಹಾವುಗಳಿಂದ ತಮಗೆ ಅಪಾಯ ಇರುವುದಿಲ್ಲ ಎಂಬ ನಂಬಿಕೆ ಇರುವುದರಿಂದ ಜನರು ಹುತ್ತಕ್ಕೆ ಪೂಜೆ ಸಲ್ಲಿಸಿದರು.

ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಹುತ್ತಕ್ಕೆ ಪೂಜೆ ಸಲ್ಲಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಹುತ್ತದ ಬಳಿ ಜನಸಂದಣಿ ಕಂಡು ಬಂತು. ಉಪವಾಸ ಇದ್ದು ಹುತ್ತಕ್ಕೆ ಪೂಜೆ ಸಲ್ಲಿಸಿದ ಬಳಿಕ ಉಪಾಹಾರ ಸೇವಿಸಿದರು. ಚಾಮರಾಜನಗರ ತಾಲೂಕಿನ ಶಿವಪುರ, ಉತ್ತುವಳ್ಳಿ, ಮಲ್ಲಯ್ಯನಪುರ, ದಡದಹಳ್ಳಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಹುತ್ತಕ್ಕೆ ಕೋಳಿಯನ್ನು ಬಲಿಕೊಡಲಾಯಿತು. ಹುತ್ತಕ್ಕೆ ಕೋಳಿ ರಕ್ತವನ್ನು ಸಮರ್ಪಿಸುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ಕೊಳ್ಳೇಗಾಲ ವರದಿ: ದೇವಾಂಗಪೇಟೆಯ ಸುಬ್ರಮಣ್ಯೇಶ್ವರ ದೇಗುಲದ ಆವರಣದಲ್ಲಿ ಮಂಗಳವಾರ ಷಷ್ಠಿ ಹಬ್ಬದ ಹಿನ್ನೆಲೆ ಶ್ರೀ ವಲ್ಲೀ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ರಹ್ಮರಥೋತ್ಸವವು ಸಾಂಗವಾಗಿ ಜರುಗಿತು.

ದೇವಾಲಯದ ಬಳಿ ಉತ್ಸವಮೂರ್ತಿಯನ್ನು ರಥೋತ್ಸವಕ್ಕೆ ಪ್ರತಿಷ್ಠಾಪಿಸಿದ ಬಳಿಕ ವಿಧಿ, ವಿಧಾನಗಳೊಂದಿಗೆ ನೂರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ದೇವಾಂಗಪೇಟೆಯ ಎಲ್ಲಾ ಬೀದಿಗಳಲ್ಲಿ ಮಂಗಳವಾದ್ಯದ ಸಮೇತ ಮೆರವಣಿಗೆ ನಡೆಸಲಾಯಿತು. ದೇಗುಲದಲ್ಲಿ ಪ್ರಾತಃಕಾಲದಿಂದ ಸಂಜೆ ತನಕ ವಿದ್ವಾನ್ ಪೂಲಾ ಸುಬ್ಬಯ್ಯ, ಪೂಲಾ ನಾಗಲಿಂಗಸ್ವಾಮಿ, ಡಾ.ವಿದ್ವಾನ್ ಶ್ರೀ ಪೂಲಾ ಎನ್.ಸುಬ್ರಮಣ್ಯ ಸ್ವಾಮಿಗಳು, ಕುಮಾರಸ್ವಾಮಿ ಇನ್ನಿತರರ ಸಮ್ಮುಖದಲ್ಲಿ ಪೂಜಾ ಕೈಂಕರ್ಯಗಳು ಜರುಗಿದರೆ, ರಥೋತ್ಸವದ ವೇಳೆ ಶಾಸಕ ಮಹೇಶ್, ನಗರಸಭೆ ಸದಸ್ಯ ಚಿಂತು ಪರಮೇಶ್, ಪವಿತ್ರ ರಮೇಶ್, ರಾಮಕೃಷ್ಣ , ಶಂಕರ್, ರಾಜರಾಜೇಶ್ವರಿ ಕಲ್ಯಾಣ ಮಂಟಪ ಟ್ರಸ್ಟ್ ಕಾರ್ಯದರ್ಶಿ ನಿರಂಜನ್ ರವಿ, ಹಾಗೂ ಸುಬ್ರಹ್ಮಣ್ಯೇಶ್ವರ ದೇಗುಲದ ಸೇವಾ ಟ್ರಸ್ಟ್ ಪದಾಧಿಕಾರಿಗಳು ಪಾಲ್ಗೊಂಡು ಕಳೆ ತಂದರು.

ಮಂಗಳವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ಸುಬ್ರಹ್ಮಣ್ಯೇಶ್ವರಸ್ವಾಮಿ ಮೂರ್ತಿಗೆ ಏಕವಾರ ರುದ್ರಾಭಿಷೇಕ, ಬಲಿದಾನ, ಮಹಾಮಂಗಳಾರತಿ ನಡೆಸಲಾಯಿತು. ಬಳಿಕ ಶ್ರೀ ವಲ್ಲೀ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ಉತ್ಸವಮೂರ್ತಿಯನ್ನು ಅಲಂಕಾರಗೊಂಡಿದ್ದ ರಥದಲ್ಲಿ ಇಟ್ಟು ಪೂಜೆ ಸಲ್ಲಿಸಿ ದೇವಾಂಗಪೇಟೆಯ ಹಲವೆಡೆ ಮೆರವಣಿಗೆ ನಡೆಸಲಾಯಿತು. ಮಂಗಳವಾರ ಸಂಜೆಯೂ ಸಹಾ ಮೆರವಣಿಗೆ ನಡೆಸಿ ಗಮನ ಸೆಳೆಯಲಾಯಿತು. ರಥೋತ್ಸವಕ್ಕೆ ನೆರೆದಿದ್ದ ಭಕ್ತರು ಹುರಗಡಲೆ, ನಾಣ್ಯಗಳು, ಮೆಣಸು, ಹಾಗೂ ಧವನ, ಧಾನ್ಯ ಎಸೆದು ತಮ್ಮ ಇಷ್ಟಾರ್ಥ ಸಿದ್ದಿಸಿಲೆಂದು ಪ್ರಾರ್ಥಿಸಿದರು

ಇಡಿ, ಐಟಿಗೆ ದೂರು ನೀಡಿದರೆ ಎದುರಿಸಲು ಶಾಸಕರು ಸಿದ್ಧ

ಕಾಡಾ ಅಧ್ಯಕ್ಷ ನಿಜಗುಣರಾಜು ಹೇಳಿಕೆಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತಿರುಗೇಟು



ಚಾಮರಾಜನಗರ, ನ.29– ಕಾಡಾ ಅಧ್ಯಕ್ಷ ನಿಜಗುಣರಾಜು ಅವರು ಶಾಸಕ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಇಡಿ ಹಾಗೂ ಐ.ಟಿಗೆ ದೂರು ನೀಡಲಿ, ಅದನ್ನು ಎದುರಿಸಲು ಶಾಸಕರು ಸಿದ್ಧರಿದ್ದಾರೆ ಎಂದು ಚಾಮರಾಜನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ ಶನಿವಾರ ಹೇಳಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಅಕ್ರಮವಾಗಿ ಆಸ್ತಿ ಸಂಪಾದನೆ ಮಾಡಿದ್ದಾರೆ. ಕ್ವಾರಿ ಖರೀದಿ ಮಾಡುವಾಗ 2 ಕೋಟಿಗೂ ಅಧಿಕ ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದಾರೆ. ಇದರ ವಿರುದ್ಧ ಇ.ಡಿ ಹಾಗೂ ಐ.ಟಿಗೆ ದೂರು ನೀಡಲಾಗುವುದು? ಎಂದು ನಿಜಗುಣರಾಜು ಅವರು ಸುದ್ದಿಗೋಷ್ಠಿ ನಡೆಸಿ ನೀಡಿದ ಹೇಳಿಕೆಗೆ, ಗುರುಸ್ವಾಮಿ ಹಾಗೂ ಕಾಂಗ್ರೆಸ್‌ನ ಹಲವು ಮುಖಂಡರು ಪ್ರತಿಯಾಗಿ ಸುದ್ದಿಗೋಷ್ಠಿ ನಡೆಸಿ, ಕಾಡಾ ಅಧ್ಯಕ್ಷರ ವಿರುದ್ಧ ವಾಗ್ದಾಳಿ ನಡೆಸಿದರು.

ನಮ್ಮ ಶಾಸಕರ ಬಗ್ಗೆ ನಿಜಗುಣರಾಜು ಮಾಡಿರುವ ಆರೋಪಗಳು ಸಮಂಜಸವಲ್ಲ. ಅವರು 40 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದಾರೆ. 15 ವರ್ಷಗಳಿಂದ ಶಾಸಕರಾಗಿದ್ದಾರೆ. ಜನಪ್ರತಿನಿಧಿಯಾಗಿ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತಾ ಬಂದಿದ್ದಾರೆ. 42 ವರ್ಷಗಳಿಂದ ಗಣಿಗಾರಿಕೆಯಲ್ಲೂ ಅವರು ತೊಡಗಿಕೊಂಡಿದ್ದಾರೆ. ನ್ಯಾಯಸಮ್ಮತವಾಗಿಯೇ ಮಾಡುತ್ತಾ ಬಂದಿದ್ದಾರೆ ಎಂದರು.

ಕರಿಕಲ್ಲು ವ್ಯಾಪಾರ ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರವಾಗಿದ್ದು, ಕರಿಕಲ್ಲಿಗೆ ಉತ್ತಮ ಬೇಡಿಕೆ ಇದೆ. ಜಾಗತಿಕವಾಗಿ ಬೆಲೆ ಹೆಚ್ಚಾದರೆ, ಗಣಿ ಮಾಲೀಕರಿಗೂ ಉತ್ತಮ ಲಾಭವಾಗುತ್ತದೆ. ಆರು ಪಟ್ಟು ಲಾಭ ಸಿಗುವ ಉದಾಹರಣೆಯೂ ಇದೆ. ನಿಜಗುಣರಾಜು ಅವರು ದೂರು ನೀಡಲಿ. ಅದಕ್ಕೆ ಕಾನೂನಾತ್ಮಕವಾಗಿ ಶಾಸಕರು ಉತ್ತರ ನೀಡಲಿದ್ದಾರೆ ಎಂದರು.

ನಿಜಗುಣರಾಜು ಅವರು ತಮ್ಮ ರೆಸಾರ್ಟ್ ಬಳಿ ನಗರಸಭೆಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ನಾವು ಈ ಹಿಂದೆಯೇ ಪತ್ರಿಕಾಗೋಷ್ಠಿಯಲ್ಲಿ ಆರೋಪ ಮಾಡಿದ್ದೆವು. ಅವರಿನ್ನೂ ಆ ಜಾಗ ತೆರವುಗೊಳಿಸಿಲ್ಲ. ಇದಕ್ಕೆ ಅವರು ಮೊದಲು ಸ್ಪಷ್ಟನೆ ನೀಡಲಿ. ಅದು ಬಿಟ್ಟು ಬ್ಲಾಕ್ ಮೇಲ್ ತಂತ್ರ ಅನುಸರಿಸುವುದನ್ನು ಅವರು ಬಿಡಲಿ ಎಂದು ಗುರುಸ್ವಾಮಿ ಹೇಳಿದರು. ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕ ಮಹದೇವು, ಮುಖಂಡರಾದ ಚಂಗುಮಣಿ, ಮಹದೇವಯ್ಯ ಇದ್ದರು.

ಡಿ.3, ನಗರದಲ್ಲಿ ಶರಣ ಸಾಹಿತ್ಯ ಪರಿಷತ್ತಿನಿಂದ ಪ್ರಶಸ್ತಿ ಪ್ರದಾನ ಸಮಾರಂಭ

ಚಾಮರಾಜನಗರ, ನ.29– ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಡಿಸೆಂಬರ್ 3ರಂದು ಸಂಜೆ 5 ಗಂಟೆಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ ಹಾಗೂ ಪುರಸ್ಕಾರ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ದುಗ್ಗಹಟ್ಟಿ ವಿ. ಮಲ್ಲಿಕಾರ್ಜುನಸ್ವಾಮಿ ತಿಳಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಶ್ರೀ ಶಿವರಾತ್ರಿ ರಾಜೇಂದ್ರ ಸೇವಾ ಪ್ರಶಸ್ತಿಯನ್ನು ನಗರದ ದೀನಬಂಧು ಸಂಸ್ಥೆಯ ಪ್ರೊ. ಜಿ.ಎಸ್. ಜಯದೇವ ಅವರಿಗೆ, ಕೆ.ಸಿ. ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿಯನ್ನು ಗುಂಡ್ಲುಪೇಟೆ ತಾಲೂಕಿನ ಹೊಂಗಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರ ಬಿ. ಮಹದೇಶ್ವರಸ್ವಾಮಿ ಅವರಿಗೆ, ಕೆ.ಸಿ. ಶಿವಪ್ಪ ಪ್ರತಿಭಾ ಪುರಸ್ಕಾರವನ್ನು ಮರಿಯಾಲ ಶ್ರೀ ಮುರುಘ ರಾಜೇಂದ್ರಸ್ವಾಮಿ ಪ್ರೌಢಶಾಲೆಯ ಸ್ಫೂರ್ತಿ ಅವರಿಗೆ ಸಮಾರಂಭದಲ್ಲಿ ನೀಡಲಾಗುವುದು ಎಂದರು.

ಅಂದು ನಡೆಯುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್ ಅವರು ವಹಿಸಲಿದ್ದಾರೆ.

ಮಾದಮ್ಮ ನಿಧನ



ಯಳಂದೂರು, ನ.29– ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಸಾಮಾಜಿಕ ಹೋರಾಟಗಾರ, ಆರ್‌ಟಿಐ ಕಾರ್ಯಕರ್ತ ಹಾಗೂ ತಾಲೂಕು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಎಂ. ಶಿವಣ್ಣ ಅವರ ತಾಯಿ ಮಾದಮ್ಮ (72) ತಮ್ಮ ಮನೆಯಲ್ಲೇ ನಿಧನರಾದರು. ಮೃತರು ಎಂ.ಶಿವಣ್ಣ ಸೇರಿದಂತೆ ಮೂವರು ಪುತ್ರಿಯರು ಮತ್ತು ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಮಂಗಳವಾರ ಅವರ ಜಮೀನಿನಲ್ಲಿ ನೆರವೇರಿತು. ಮೃತರ ನಿಧನಕ್ಕೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕನ್ನಡಾಭಿಮಾನ ಬೆಳೆಸುವಲ್ಲಿ ಆಟೋಚಾಲಕರ ಪಾತ್ರ ದೊಡ್ಡದು: ಶಾಸಕ ಪುಟ್ಟರಂಗಶೆಟ್ಟಿ



ಚಾಮರಾಜನಗರ, ನ.29– ಕನ್ನಡಾಭಿಮಾನ ಬೆಳೆಸುವಲ್ಲಿ ಆಟೋಚಾಲಕರು, ಮಾಲೀಕರ ಪಾತ್ರ ದೊಡ್ಡದು ಎಂದು ಮಾಜಿ ಸಚಿವರು ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಶ್ರೀ ವಾಲ್ಮೀಕಿ ಆಟೋ ನಿಲ್ದಾಣದಲ್ಲಿ ಆಟೋ ಮಾಲೀಕರು ಮತ್ತು ಚಾಲಕರ ಸಂಘದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ದ್ರಾವಿಡ ಭಾಷೆಗಳಲ್ಲಿ ಪ್ರಾಮುಖ್ಯವುಳ್ಳ ಭಾಷೆಯೂ ಭಾರತದ ಪುರಾತನ ಭಾಷೆಗಳಲ್ಲಿ ಒಂದೂ ಆಗಿರುವ ಕನ್ನಡ ಭಾಷೆ ಉಳಿವಿಗೆ ನಾವೆಲ್ಲರೂ ಕಂಕಣ ಬದ್ಧರಾಗಿರೋಣ. ನಮ್ಮ ದೇಶ ಸಾಂಸ್ಕೃತಿಕ ವೈವಿಧ್ಯಮಯ ಶ್ರೀಮಂತ ರಾಷ್ಟ್ರವಾಗಿದ್ದು, ಹಲವಾರು ಭಾಷೆಗಳಿಂದ ಕೂಡಿದ ಈ ದೇಶದಲ್ಲಿ ಕನ್ನಡಕ್ಕೆ ಅತಿ ಹೆಚ್ಚಿನ ಹೆಚ್ಚಿನ ಮಹತ್ವ ಇದೆ. ಕನ್ನಡ ಭಾಷೆಯನ್ನು ಹೆಚ್ಚಾಗಿ ಮಾತನಾಡುವ ಮೂಲಕ ಉಳಿಸಿ–ಬೆಳೆಸಬೇಕಿದೆ ಎಂದರು

ಅಜಾದ್ ಹಿಂದೂ ಸೇನೆಯ ಅಧ್ಯಕ್ಷ ಎಂ.ಎಸ್.ಪೃಥ್ವಿರಾಜ್ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಕನ್ನಡ ನಾಡು, ನುಡಿ, ಸಂರಕ್ಷಣೆ ಮಾಡುವಲ್ಲಿ ಆಟೋ ಚಾಲಕರು ಪ್ರಮುಖ ಪಾತ್ರ ವಹಿಸಿದ್ದಾರೆ. ಇತಿಹಾಸದಲ್ಲಿ ಕನ್ನಡಿಗರು ಅನ್ಯ ಭಾಷಿಕರ ಮೇಲೆ ದಬ್ಬಾಳಿಕೆ, ದೌರ್ಜನ್ಯ ಮಾಡಿರುವ ಒಂದು ನಿರ್ದೇಶನವೂ ಇಲ್ಲ. ದೇಶ ಎಷ್ಟು ಮುಖ್ಯವೂ ಅಷ್ಟೆ ಕನ್ನಡ ಭಾಷೆಯೂ ಮುಖ್ಯವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಉದ್ಯಮಿ ಎ.ಜಯಸಿಂಹ, ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಜ. ಸುರೇಶ್ ನಾಗ್, ಶಿಕ್ಷಕ ರಂಗನಾಥ್, ಕರ್ನಾಟಕ ಕಾವಲು ಪಡೆ ಜಿಲ್ಲಾಧ್ಯಕ್ಷ ಪರಶಿವಮೂರ್ತಿ, ಮುಖಂಡ ಚಂದ್ರಶೇಖರ, ಹೋಟೆಲ್ ಉದ್ಯಮಿ ವಿಜಯಕುಮಾರ್ ಕುಲಾಲ್, ಶ್ರೀ ವಾಲ್ಮೀಕಿ ಆಟೋ ಚಾಲಕರು, ಮಾಲೀಕರ ಸಂಘದ ಅಧ್ಯಕ್ಷ ಲಕ್ಷ್ಮಣ್, ಕಾರ್ಯದರ್ಶಿ ಗಣೇಶ್, ಗೌರವ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಗುರುಮೂರ್ತಿ, ಖಜಾಂಚಿ ಗುರು, ಸದಸ್ಯರಾದ ಕೃಷ್ಣರಾಜು, ಯೋಗ, ಮಂಜುನಾಥ್, ಚಿಕ್ಕಣ್ಣ, ಸುಬ್ಬು, ಮಹದೇವು ಇತರರು ಹಾಜರಿದ್ದರು.

ಕನ್ನಡ ಗೀತೆಗಳ ಗಾಯನ: ಕನ್ನಡ ಜಾನಪದ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ಕನ್ನಡ ಗೀತ ಗಾಯನ ಕಾರ್ಯಕ್ರಮ ನಡೆಯಿತು.

ಆಲೂರು ಗ್ರಾಪಂ ಅಧ್ಯಕ್ಷರಾಗಿ ಚಿನ್ನಸ್ವಾಮಿ ಅವಿರೋಧ ಆಯ್ಕೆ



ಚಾಮರಾಜನಗರ, ನ.29– ತಾಲೂಕಿನ ಆಲೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕರಿಯನಕಟ್ಟೆ ಗ್ರಾಮದ ಕೆ.ಬಿ.ಚಿನ್ನಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಕಚೇರಿಯಲ್ಲಿ ಸೋಮವಾರ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಕೆ.ಬಿ. ಚಿನ್ನಸ್ವಾಮಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾಗಿದ್ದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೊಹಮ್ಮದ್ ಮುಕ್ತಾರ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಆಲೂರು ಗ್ರಾಪಂನಲ್ಲಿ ಒಟ್ಟು 21 ಸದಸ್ಯರಿದ್ದಾರೆ. ಇವರಲ್ಲಿ ಕಾಂಗ್ರೆಸ್ ಬೆಂಬಲಿತ 17 ಹಾಗೂ ಬಿಜೆಪಿ ಬೆಂಬಲಿತ 4 ಮಂದಿ ಸದಸ್ಯರಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ಪ್ರವರ್ಗಕ್ಕೆ ನಿಗದಿಯಾಗಿತ್ತು. ಮೊದಲಿಗೆ ಎ.ಸಿ. ಮಹದೇವಸ್ವಾಮಿ ಅಧ್ಯಕ್ಷರಾಗಿದ್ದರು. ಪಕ್ಷದಲ್ಲಿ ನಡೆದ ಒಪ್ಪಂದದಂತೆ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆದು ಕೆ.ಬಿ. ಚಿನ್ನಸ್ವಾಮಿ ಅವಿರೋಧ ಆಯ್ಕೆಯಾದರು.

ಈ ಸಂದರ್ಭದಲ್ಲಿ ಪಿಡಿಒ ಸೀಮಾ, ಗ್ರಾಪಂ ಉಪಾಧ್ಯಕ್ಷ ಶಂಕರ ನಾಯಕ, ಸದಸ್ಯರಾದ ಆಶಾಲತಾ, ನಂದಿನಿ, ನಳಿನಕುಮಾರಿ, ನಾಗಶೆಟ್ಟಿ, ಕಲಾವತಿ, ಮಂಜುಳ, ಸುರೇಶ್, ಮಹದೇವಸ್ವಾಮಿ, ದೊಡ್ಡಸ್ವಾಮಿ, ಸರೋಜ, ದುಂಡಮ್ಮ, ನಿಂಗಮ್ಮ, ಶಶಿರೇಖಾ, ರೇವಣ್ಣ, ಜಕಾವುಲ್ಲಾ ಷರೀಫ್, ಅಫಿನ್ ತಾಜ್, ಶೋಭಾ ರವಿ, ಶಿವಾನಂದ, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ರಾ.ಮಹದೇವ್, ದೊಡ್ಡರಾಯಪೇಟೆ ರವಿಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಯ್ಯ, ಮಾಜಿ ಉಪಾಧ್ಯಕ್ಷ ಪುಟ್ಟಸ್ವಾಮಿ ಉಪಸ್ಥಿತರಿದ್ದರು.

'ಟಿಪ್ಪು ನಿಜಕನಸುಗಳು' ಕಲಾಮಂದಿರದಲ್ಲಿ ಪ್ರದರ್ಶನ



ಮೈಸೂರು, ನ.29(ಎಂಕೆ)– ಮೈಸೂರಿನ ಕಲಾಮಂದಿರದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ಮಂಗಳವಾರ ಪ್ರದರ್ಶನಗೊಂಡಿತು. ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆಯಿರುವ ಕಲಾಮಂದಿರದ ವೇದಿಕೆಯಲ್ಲಿ ಮೊದಲ ಪ್ರದರ್ಶನ ಕಂಡ 'ಟಿಪ್ಪು ನಿಜಕನಸುಗಳು' ನಾಟಕಕ್ಕೆ ಭಾರೀ ಪ್ರಶಂಸೆ ವ್ಯಕ್ತವಾಯಿತು. ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರಾಧ್ಯಕ್ಷ ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಗಿರಿಧರ್, ಆರ್‌ಎಸ್‌ಎಸ್ ಪ್ರಮುಖರು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ನಾಟಕ ವೀಕ್ಷಣೆ ಮಾಡಿದರು.

ರಂಗಾಯಣ ಭೂಮಿಗೀತ ವೇದಿಕೆಯಲ್ಲಿ 5 ಹಾಗೂ ಕಲಾಮಂದಿರದಲ್ಲಾದ ಮೊದಲ ಪ್ರದರ್ಶನ ಸೇರಿ 6 ಪ್ರದರ್ಶನವೂ ಭರ್ತಿಯಾಗಿತ್ತು. ಭೂಮಿಗೀತ ವೇದಿಕೆಯಲ್ಲಿ ಸಾವಿರಕ್ಕೂ ಹೆಚ್ಚು ಹಾಗೂ ಕಲಾಮಂದಿರದಲ್ಲಿ ಸಾವಿರ ರಂಗಾಸಕ್ತರು 'ಟಿಪ್ಪು ನಿಜಕನಸುಗಳು' ನಾಟಕ ವೀಕ್ಷಣೆ ಮಾಡಿದರಲ್ಲದೆ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪೊಲೀಸ್ ಭದ್ರತೆ: 'ಟಿಪ್ಪು ನಿಜಕನಸುಗಳು'ನಾಟಕ ಪ್ರದರ್ಶನಕ್ಕೆ ಅಡಚಣೆಯುಂಟಾಗದಂತೆ ಒದಗಿಸಿರುವ ಪೊಲೀಸ್ ಭದ್ರತೆ ಮುಂದುವರೆದಿದ್ದು, ಎಂದಿನಂತೆ ನಾಟಕ ನೋಡಲು ಬರುವವರನ್ನು ತಪಾಸಣೆಗೆ ಒಳಪಡಿಸಿ ಅವಕಾಶ ಮಾಡಿಕೊಡಲಾಯಿತು. ಕಲಾಮಂದಿರದ ವೇದಿಕೆಗೆ ಮುಖ್ಯ ದ್ವಾರ ಸೇರಿ ಇರುವ ಐದು ದ್ವಾರಗಳ ಪೈಕಿ ನಾಲ್ಕು ದ್ವಾರಗಳನ್ನು ಬಂದ್ ಮಾಡಿದ್ದ ಪೊಲೀಸರು ಒಂದು ದ್ವಾರದಲ್ಲಿ ಮಾತ್ರ ಒಳ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟರು.

ಡಿ.1ಕ್ಕೆ 7ನೇ ಪ್ರದರ್ಶನ: ರಂಗಪ್ರೇಕ್ಷಕರ ಒತ್ತಾಯದ ಮೇರೆಗೆ ಕಲಾಮಂದಿರದಲ್ಲಿ ಡಿ.1ಕ್ಕೆ ನಾಟಕದ 7ನೇ ಪ್ರದರ್ಶನ ನಡೆಯಲಿದೆ. ಈಗಾಗಲೇ ಹಲವು ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿರು.

ಕೊಲೆ ಬೆದರಿಕೆ: ದೂರು ದಾಖಲು: ನನಗೆ ಜೀವ ಬೆದರಿಕೆ ಇದೆಯೆಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ವಿರೋಧ ವ್ಯಕ್ತಪಡಿಸಿರುವ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಹಾಗೂ ಪತ್ರದ ಮುಖೇನ ನನಗೆ ಜೀವ ಬೆದರಿಕೆ ಒಡ್ಡುತ್ತಿದ್ದಾರೆ. ಮೈಸೂರಿನ ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಎಂಬುವವರ ವಿಡಿಯೋ ಒಂದರಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಪ್ರಚೋದನೆಗೊಂಡ ಕೆಲವರು ನನ್ನನ್ನು ನಿಂದಿಸಲು ತೊಡಗಿದ್ದಾರೆ. ನ.28ರಂದು ಪತ್ರ ಮುಖೇನ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ರೌಡಿಗಳಿರಲಿಲ್ವಾ ಅಂತಾರೆ ಸಿಎಂ!

ವಲಯಗಳಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯ ವರು, ಕಾಂಗ್ರೆಸ್‌ನಲ್ಲಿ ರೌಡಿಗಳಿರಲಿಲ್ಲವೇ ಎಂದು ಪ್ರಶ್ನಿಸಿ ದ್ದಾರೆ. ಅಲ್ಲಿ ಎಷ್ಟು ಜನ ರೌಡಿಶೀಟರ್ ಇದ್ದಾರೆ ಎಂದು ಲೆಕ್ಕ ಹಾಕಲಿ ಎಂದು ಸಮರ್ಥಿಸಿಕೊಂಡಿದ್ದಾರೆ. ಈ ಬಗ್ಗೆ ದೆಹಲಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ರೌಡಿ ಪಟ್ಟಿಯಲ್ಲಿದ್ದ ವರು ಸಮಾಜದ ಮುಖ್ಯವಾಹಿನಿಗೆ ಬರುವಂತಿಲ್ಲವೆ ಎಂದು ಪ್ರಶ್ನಿಸಿದ್ದಾರೆ. ತಮ್ಮ ಪಕ್ಷದಲ್ಲಿ ರೌಡಿಗಳನ್ನಿಟ್ಟುಕೊಂಡು ನಮ್ಮ ವಿರುದ್ಧ ಆರೋಪಿಸುವುದು ಸರಿಯಲ್ಲ ಎಂದು ಅವರು ದೂರಿದರು. ಮುಖ್ಯಮಂತ್ರಿ ಅವರ ಹೇಳಿಕೆಗೆ ಕೆಂಡಕಾರಿ ರುವ ಸಿದ್ದರಾಮಯ್ಯ, ಇತ್ತೀಚೆಗೆ ಅವರಿಗೆ ಒಂದು ರೋಗ ಅಂಟಿಕೊಂಡಿದೆ. ತಮ್ಮ ವಿರುದ್ಧ ಯಾವುದೇ ಆರೋಪ ಬರಲಿ, ಈ ಆರೋಪ ಕಾಂಗ್ರೆಸ್ ಮೇಲಿರ ಲಿಲ್ಲವೇ ಎಂದು ಪ್ರಶ್ನಿಸುತ್ತಾರೆ. ಈಗ ನೀವೇನು ಮಾಡುತ್ತಿದ್ದೀರಿ ಹೇಳ್ರೀ ಎಂದರೆ, ಅದನ್ನು ಹೇಳದೆ ಕಾಂಗ್ರೆಸ್ ಪಕ್ಷವನ್ನು ದೂಷಿಸುವುದು ಅವರ ಕಾಯಕವಾಗಿದೆ. ಕಾಂಗ್ರೆಸ್‌ನವರು ಜೈಲಿಗೆ ಹೋಗಿರಲಿಲ್ಲವಾ? ಎಂದೆಲ್ಲ ಅವರು ಮಾತನಾಡುತ್ತಾರೆ. ಆದರೆ ಅವರಿಗೆ ನೆನಪಿರ ಬೇಕು. ಇವತ್ತು ಕೇಂದ್ರದ ಗೃಹ ಸಚಿವರಾದ ಅಮಿತ್ ಶಾ ಸಹ ಮೂರು ವರ್ಷ ಜೈಲಿನಲ್ಲಿದ್ದರು. ಅಂಥವರು ಈ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ, ಈಗ ಗೃಹ ಸಚಿವರಾಗಿದ್ದಾರೆ. ಇದನ್ನು ಬೊಮ್ಮಾಯಿ ಮರೆಯದಿದ್ದರೆ ಒಳ್ಳೆಯದು. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಅಪರಾಧಿಗಳನ್ನು ಮೆರೆಸುತ್ತಿಲ್ಲ. ಯುವ ಕಾಂಗ್ರೆಸ್ ಅಧ್ಯಕ್ಷ ನಳಪಾಡ್ ರೌಡಿಯಲ್ಲ. ಅವರ ಮೇಲೆ ಆರೋಪವಿದೆ. ಅವರು ಅಪರಾಧಿ ಎಂದು ಪರಿಗಣಿಸಲ್ಪಟ್ಟಿಲ್ಲ. ಆದರೆ ಸೈಲೆಂಟ್ ಸುನೀಲ ಒಬ್ಬ ರೌಡಿ ಶೀಟರ್. ಪೊಲೀಸರು ಆತನನ್ನು ಹುಡುಕುತ್ತಿದ್ದಾರೆ. ಆದರೆ ಆತ ಬಿಜೆಪಿಯ ಸಂಸದರು ಮತ್ತು ಶಾಸಕರ ಜತೆ ವೇದಿಕೆ ಹಂಚಿಕೊಂಡಿದ್ದಾರೆ.

ಇನ್ನು ಫೈಟರ್ ರವಿ ಎಂಬಾತನನ್ನು ಬಿಜೆಪಿ ಪಕ್ಷಕ್ಕೆ ಸೇರಿಸಿಕೊಂಡಿದೆ. ಆತನ ಹೆಸರಿನಲ್ಲೇ ಎಲ್ಲವೂ ಗೊತ್ತಾಗುತ್ತದೆ ಎಂದು ವ್ಯಂಗ್ಯವಾಡಿದರು. ಈ ಮಧ್ಯೆ ಬಿಜೆಪಿಯ ಸಂಸದರು ಮತ್ತು ಶಾಸಕರು ರೌಡಿ ಸೈಲೆಂಟ್ ಸುನೀಲನ ಜತೆ ವೇದಿಕೆ ಹಂಚಿಕೊಂಡ ಬೆಳವಣಿಗೆ ವ್ಯಾಪಕ ಚರ್ಚೆಗೆ ಗ್ರಾಸವಾಗುತ್ತಿದ್ದಂತೆಯೇ ಮುಜುಗರಗೊಂಡ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರು, ಯಾವ ಕಾರಣಕ್ಕೂ ಸೈಲೆಂಟ್ ಸುನೀಲನನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದರು.

ಸಿಂಡಿಕೇಟ್ ಸಭೆ ನೇರ ಪ್ರಸಾರ

ಹಮ್ಮಿಕೊಂಡಿವೆ. ಡಿಸೆಂಬರ್ 1ರಿಂದ ಪ್ರತಿದಿನವೂ ಕಾರ್ಯ ಕ್ರಮ ಜರುಗಲಿದೆ. ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ಪೋಸ್ಟರ್ ರಚನೆ ಸ್ಪರ್ಧೆ, ಉದ್ಯಮ ಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕಾರ್ಯಾಗಾರಗಳು, ವಿದ್ವತ್‌ಗೋಷ್ಠಿಗಳು ಇತ್ಯಾದಿ ನಡೆಯಲಿವೆ. ಜೊತೆಗೆ, ಬೇರೆ ಬೇರೆ ವಿಭಾಗಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಶ್ವತ್ಥ ನಾರಾಯಣ ತಿಳಿಸಿದರು. ಎನ್‌ಇಪಿ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಐದು ವರ್ಷಗಳ ಗುರಿಯನ್ನಿಟ್ಟುಕೊಂಡು ಸಾಂಸ್ಥಿಕ ಅಭಿವೃದ್ಧಿ ಯೋಜನೆ (ಐಡಿಪಿ) ಸಿದ್ಧಪಡಿಸಲು ವಿವಿಗಳಿಗೆ ಸೂಚಿಸಲಾಗಿದೆ. 'ನೀತಿ' ಆಯೋಗ ಕೂಡ ಇದನ್ನು ಕಡ್ಡಾಯಗೊಳಿಸಿದೆ. ಈ ನಿಟ್ಟಿನಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಡಿಸೆಂಬರ್ ಮೊದಲ ವಾರದಲ್ಲಿ ಕಾರ್ಯಾಗಾರವನ್ನು ನಡೆಸಲಿದೆ ಎಂದರು. ಉದ್ಯಮದ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಕೌಶಲಾಭಿವೃದ್ಧಿ ಇಲಾಖೆ ವತಿಯಿಂದ 'ಸ್ಕಿಲ್ ಕನೆಕ್ಟ್' ಪೋರ್ಟಲ್ ಅನ್ನು ಪರಿಷ್ಕೃತಗೊಳಿಸಲಾಗಿದ್ದು, ಮುಖ್ಯ ಮಂತ್ರಿ ಅವರು ಡಿಸೆಂಬರ್ 1ರಂದು ಇದನ್ನು ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು. ಸ್ವ-ಸಹಾಯ ಗುಂಪುಗಳ ಮಹಿಳೆಯರ ಜೀವನೋಪಾಯ ಸಾಮರ್ಥ್ಯ ವೃದ್ಧಿಗಾಗಿ ತಂತ್ರಾಂಶ ಅಳವಡಿಕೆಗೆ ಇದೇ ಸಂದರ್ಭದಲ್ಲಿ ಚಾಲನೆ ಕೊಡಲಾಗುವುದು ಎಂದು ಸಚಿವರು ತಿಳಿಸಿದರು.

ಇಂದು 'ಸುಪ್ರೀಂ' ವಿಚಾರಣೆ

ಕೆಲವು ಗ್ರಾಮಸ್ಥರು ಕರ್ನಾಟಕಕ್ಕೆ ಸೇರಲು ನಿರ್ಧರಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹಳ್ಳಿಗಳು ಸೇರ್ಪಡೆಯಾಗಲು ನಿಯಮಗಳಿವೆ. ಜತ್ ತಾಲೂಕಿನ 42 ಗ್ರಾಮಸ್ಥರು ಸಿಎಂ ಭೇಟಿಗೆ ಅವಕಾಶ ಕೇಳಿರುವ ಬಗ್ಗೆ ಉತ್ತರಿಸಿ ಈ ಸಮಸ್ಯೆ ಇಂದು–ನಿನ್ನೆಯದಲ್ಲ. ಸರಿಯಾದ ಸೌಲಭ್ಯ ದೊರಕದ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ಬಹಳಷ್ಟು ವರ್ಷದಿಂದ ನೀಡುತ್ತಿದ್ದಾರೆ. ಆದರೆ ವಿಚಾರ ಸುಪ್ರೀಂಕೋರ್ಟ್‌ನಲ್ಲಿದ್ದು, ಸರ್ವಪಕ್ಷ ಸಭೆ ಕರೆದು ಚರ್ಚೆ ಮಾಡಲಾಗುವುದು. ಕಾನೂನು ಸಲಹೆ ಪಡೆದು ಮುಂದುವರೆಯುವುದಾಗಿ ತಿಳಿಸಿದ್ದಾರೆ.

ಪೊಲೀಸರಿಂದ ವೈಜ್ಞಾನಿಕ ತನಿಖೆ ಮೊರೆ

ವ್ಯಕ್ತಪಡಿಸಿದ್ದಾರಂತೆ. ಇನ್ನು ದಿನೇಶ್ ಕುಮಾರ್ ದೇಹದಲ್ಲಿ ಪ್ರಾಣಾಪಾಯ ಸಂಭವಿಸಲು ಕಾರಣವಾಗುವಂತಹ ಯಾವುದಾದರೂ ವಸ್ತು ಇದೆಯೇ? ಎಂಬುದರ ಬಗ್ಗೆ ವೈದ್ಯಕೀಯ ವರದಿ ಬರಬೇಕಾಗಿದೆ. ಅದಕ್ಕಾಗಿ ದೇಹದ ಕೆಲವು ಭಾಗಗಳನ್ನು ವಿಧಿ–ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದ್ದು, ಮೂರ್‍ನಾಲ್ಕು ದಿನಗಳಲ್ಲಿ ವರದಿ ಬಂದ ನಂತರ ತನಿಖೆಗೆ ಸಹಕಾರಿಯಾಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇಂದು ವಿಧಿ–ವಿಜ್ಞಾನ ಪ್ರಯೋಗಾಲಯದ ತಜ್ಞರು ದಿನೇಶ್ ಕುಮಾರ್ ನಿವಾಸಕ್ಕೆ ಭೇಟಿ ನೀಡಿ ಕೆಲ ಸಾಕ್ಷ್ಯಗಳನ್ನು ಕಲೆ ಹಾಕಿದ್ದಾರೆ ಎಂದು ಹೇಳಲಾಗಿದೆ.

ದಿನೇಶ್ ಕುಮಾರ್ ಪತ್ನಿ ಇಂದೂ ಕೂಡ ತಮ್ಮ ಹಿಂದಿನ ಹೇಳಿಕೆಯನ್ನೇ ಪುನರಾವರ್ತನೆ ಮಾಡಿದ್ದು, ಮನಶಾಸ್ತ್ರಜ್ಞರ ನೆರವನ್ನು ಪಡೆದು ಆಕೆಯನ್ನು ವಿಚಾರಿಸಲು ಪೊಲೀಸರು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ನಡುವೆ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು, ದಿನೇಶ್ ಕುಮಾರ್ ಸಂಬಂಧಿಕರಿಗೆ ಒಪ್ಪಿಸಲಾಗಿದ್ದು, ಅವರ ಸೋದರ ಮಾವ ನಾರಾಯಣ್ ನೇತೃತ್ವದಲ್ಲಿ ಸ್ವಗ್ರಾಮವಾದ ಶ್ರೀರಂಗಪಟ್ಟಣ ತಾಲೂಕಿನ ದೊಡ್ಡಪಾಳ್ಯದಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿದೆ. ಮಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ದಿನೇಶ್ ಕುಮಾರ್ ಹಿರಿಯ ಪುತ್ರ ಕುಶಾಲ್ ಅಂತಿಮ ವಿಧಿ–ವಿಧಾನಗಳನ್ನು ನೆರವೇರಿಸಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ವಿವಿಧೆಡೆ ಭಕ್ತಿಭಾವದ ಸ್ಕಂದ ಷಷ್ಠಿ ಆಚರಣೆ

● ಸಿದ್ದಲಿಂಗಪುರದ ದೇವಸ್ಥಾನದಲ್ಲಿ ಸಾಂಪ್ರದಾಯಿಕ ಪೂಜೆ ● ಪ್ರವೇಶ ನಿರ್ಬಂಧವಿದ್ದರೂ ಹರಿದು ಬಂದ ಭಕ್ತ ಸಾಗರ





ಮೈಸೂರು,ನ.29(ಎಂಟಿವೈ)– ಮೈಸೂರು –ಬೆಂಗಳೂರು ಮುಖ್ಯ ರಸ್ತೆಯ ಸಿದ್ದಲಿಂಗಪುರದ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಸಾಂಪ್ರದಾಯಿಕವಾಗಿ ಸ್ಕಂದ ಷಷ್ಠಿ ಪೂಜಾ ಮಹೋತ್ಸವ ಸರಳವಾಗಿ ಆಚರಿಸಲಾಯಿತು.

ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ಸಿದ್ದಲಿಂಗಪುರದ ಷಷ್ಠಿ ಜಾತ್ರೆಗೆ ಕಡಿವಾಣ ಹಾಕಲಾಗಿತ್ತು. ಅಲ್ಲದೇ, ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿತ್ತು. ಆದರೆ, ದೇವಾಲಯದಲ್ಲಿ ನಡೆಯುವ ಸಾಂಪ್ರದಾಯಿಕ ಪೂಜೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಸಂಪ್ರದಾಯದಂತೆ ಪೂಜೆ ನೆರವೇರಿಸಲಾಯಿತು.

ದೇವಾಲಯದ ಒಳಗಿನ ಗರ್ಭಗುಡಿಯ ಹಿಂಭಾಗದಲ್ಲಿರುವ ಪ್ರಾಂಗಣದಲ್ಲಿ ಷಷ್ಠಿ ಪೂಜೆ ನೆರವೇರಿಸಲಾಯಿತು. ಗರ್ಭಗುಡಿಯಲ್ಲಿರುವ ಮೂಲ ಹುತ್ತಕ್ಕೆ ಜೀರ್ಣೋದ್ಧಾರ ಕಾಮಗಾರಿಯಿಂದಾಗಿ ಹಾನಿಯಾಗದಂತೆ ಕಟ್ಟೆಚ್ಚರ ವಹಿಸಿ ಕಬ್ಬಿಣದ ಬಾಕ್ಸ್‌ಅನ್ನು ಸುತ್ತ ಜೋಡಿಸಲಾಗಿದ್ದು, ಪೂಜಾ ಕೈಂಕರ್ಯಕ್ಕಾಗಿ ಗರ್ಭಗುಡಿಯ ಹಿಂಭಾಗದ ಪ್ರಾಂಗಣದಲ್ಲಿ ವಿಗ್ರಹವನ್ನಿಟ್ಟು ಅಲಂಕಾರ ಮಾಡಲಾಗಿದೆ. ದೇವಾಲಯದ ಅರ್ಚಕ ಎಂ.ವಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಸಿದ್ದಲಿಂಗಪುರದ ದೇವಾಲಯದಲ್ಲಿ ಬೆಳಗ್ಗೆ 5 ಗಂಟೆಯಿಂದಲೇ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಸಹಸ್ರ ನಾಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ಅಲಂಕಾರ ಮಾಡಿ ಸ್ಕಂದ ಷಷ್ಠಿ ಪೂಜಾ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.

ಭಕ್ತರಿಗೆ ದರ್ಶನ ಭಾಗ್ಯವಿಲ್ಲ: ಸಿದ್ದಲಿಂಗಪುರದ ಷಷ್ಠಿ ಜಾತ್ರೆ ಹಳೆ ಮೈಸೂರು ಭಾಗದಲ್ಲಿ ಹೆಸರುವಾಸಿಯಾಗಿದ್ದು, ಕುಕ್ಕೆಸುಬ್ರಹ್ಮಣ್ಯಕ್ಕೆ ಹೋಗಲು ಸಾಧ್ಯವಾಗದೇ ಇದ್ದವರು ಸಿದ್ದಲಿಂಗಪುರದ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸುವ ವಾಡಿಕೆ ಇದೆ. ಅದರಲ್ಲೂ ಸ್ಕಂದ ಷಷ್ಠಿ ದಿನ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಮಾತ್ರವಲ್ಲದೆ, ಮೈಸೂರು, ಚಾಮರಾಜನಗರ, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳಿಂದಲೂ ಭಕ್ತರು ಭಾಗವಹಿಸುವ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ, ಈ ಬಾರಿ ಸಿದ್ದಲಿಂಗಪುರದ ಸುಬ್ರಹ್ಮಣ್ಯೇಶ್ವರ ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿತ್ತು.

ಕಳೆದ ನಾಲ್ಕು ದಿನದ ಹಿಂದೆಯೇ ತಹಶೀಲ್ದಾರ್ ಗಿರೀಶ್ ಅವರು ಆದೇಶ ಹೊರಡಿಸಿ, ಸಿದ್ದಲಿಂಗಪುರದ ಜಾತ್ರೆ ನಿರ್ಬಂಧ ಹೇರಿರುವ ಬಗ್ಗೆ ಸ್ಪಷ್ಟಪಡಿಸಿದ್ದರು. ಆದರೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸಿದ್ದಲಿಂಗಪುರದ ದೇವಾಲಯಕ್ಕೆ ಆಗಮಿಸಿದ್ದರು. ಯಾರಿಗೂ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಲಿಲ್ಲ. ದೇವಾಲಯದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಹುತ್ತಕ್ಕೆ ಹಾಲೆರೆದ ಭಕ್ತರು: ಸಿದ್ದಲಿಂಗಪುರದ ದೇವಾಲಯಕ್ಕೆ ಪ್ರವೇಶ ನಿರಾಕರಣೆ ಹಿನ್ನೆಲೆಯಲ್ಲಿ ದೇವಾಲಯದ ಸಮೀಪ ಇದ್ದ ಹುತ್ತಕ್ಕೆ ಭಕ್ತರು ಹಾಲೆರೆದು ಪೂಜಿಸಿದರು. ದೇವಾಲಯದಿಂದ 150 ಮೀಟರ್ ಅಂತರದಲ್ಲಿದ್ದ ಖಾಲಿ ಜಾಗದಲ್ಲಿ 3–4 ಹುತ್ತಗಳಿದ್ದು, ಅವುಗಳಿಗೆ ಭಕ್ತರು ಅರಿಶಿನ, ಕುಂಕುಮ ಹಚ್ಚಿ, ಹಾಲು–ತುಪ್ಪ ಎರೆದು ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿದರು.

ಜಾತ್ರಾ ಕಳೆ: ದೊಡ್ಡಮಟ್ಟದಲ್ಲಿ ಭಕ್ತರು ಸೇರುವುದಕ್ಕೆ ತಾಲೂಕು ಆಡಳಿತ ಕಡಿವಾಣ ಹಾಕಲು ಕ್ರಮ ಕೈಗೊಂಡಿದ್ದರೂ ಭಕ್ತರು ಮಾತ್ರ ನಿರಂತರವಾಗಿ ಬರುತ್ತಲೇ ಇದ್ದರು. ಹುತ್ತವಿದ್ದ ಸ್ಥಳಕ್ಕೆ ಹೋಗುವ ಹಾದಿಯಲ್ಲಿ ವಿವಿಧ ಆಟಿಕೆ, ತಿಂಡಿ–ತಿನಿಸು, ಹಬ್ಬಿನ ಜಲ್ಲೆ, ಆಲೆಮನೆ ಬೆಲ್ಲ, ಅಲಂಕಾರಿಕ ವಸ್ತು, ಹಾಲು, ಚಿನ್ನ–ಬೆಳ್ಳಿ ನಾಗರ, ಉಡುಪು, ಚಪ್ಪಲಿ ಸೇರಿದಂತೆ ವಿವಿಧ ವಸ್ತುಗಳ ಮಾರಾಟಗಾರರು ರಸ್ತೆಯಲ್ಲೇ ಟಾರ್ಪಾಲ್ ಮೇಲೆ ವ್ಯಾಪಾರ ಮಾಡುತ್ತಿದ್ದರಿಂದ ಜಾತ್ರೆಯ ಕಳೆಕಟ್ಟಿತ್ತು.

ಮೊದಲ ಬಾರಿಗೆ ನಾಗಾಭರಣ ಧರಿಸಲಿಲ್ಲ: ಸಿದ್ದಲಿಂಗಪುರದ ದೇವಾಲಯದಲ್ಲಿ ಸ್ಕಂಧ ಷಷ್ಠಿ ದಿನ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಮೈಸೂರು ಅರಮನೆಯಿಂದ ಪ್ರತಿವರ್ಷ ಬೆಳ್ಳಿಯ ನಾಗಾಭರಣ ತಂದು ಗರ್ಭಗುಡಿಯಲ್ಲಿರುವ ಮೂಲ ವಿಗ್ರಹಕ್ಕೆ ಧರಿಸಿ ಅಲಂಕಾರ ಮಾಡಲಾಗುತ್ತಿತ್ತು. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಜನನದ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಬೆಳ್ಳಿ ನಾಗಾಭರಣ ನೀಡಲಾಗಿದ್ದು, ವರ್ಷಕ್ಕೆ ಒಂದೇ ದಿನ ಸಿದ್ಧಲಿಂಗಪುರದ ದೇವಾಲಯಕ್ಕೆ ತಂದು ಅಲಂಕಾರ ಮಾಡಿ ಪೂಜಿಸಲಾಗುತ್ತಿತ್ತು. ಈ ಬಾರಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿ ನಡೆಯುತ್ತಿರುವುದರಿಂದ ಈ ಬಾರಿ ನಾಗಾಭರಣ ಕಳುಹಿಸದಂತೆ ಕೋರಲಾಗಿತ್ತು. ಹಾಗಾಗಿ ಇದೇ ಮೊದಲ ಬಾರಿಗೆ ನಾಗಾಭರಣ ಧರಿಸದೇ ಪೂಜಾ ಮಹೋತ್ಸವ ಜರುಗಿತು.

ಎರಡು ದಿನ ಅದೇ ಅಲಂಕಾರ: ದೇವಾಲಯದ ಅರ್ಚಕ ಎಂ.ವಿ.ಸುಬ್ರಹ್ಮಣ್ಯ ಮಾತನಾಡಿ,ಜೀರ್ಣೋದ್ಧಾರ ಕಾಮಗಾರಿಯಿಂದಾಗಿ ಜಾತ್ರಾ ಮಹೋತ್ಸವದಲ್ಲಿ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಿಲ್ಲ. ಸುತ್ತಮುತ್ತಲಿನ ಗ್ರಾಮಸ್ಥರಲ್ಲಿ ಬಹುತೇಕ ಮಂದಿ ಸೋಮವಾರವೇ ದರ್ಶನ ಪಡೆದಿದ್ದಾರೆ.

ಇಂದು ಮಾಡಿರುವ ಅಲಂಕಾರ ಇನ್ನು ಎರಡು ದಿನ ಇರಲಿದ್ದು, ಭಕ್ತರು ಬುಧವಾರದಿಂದ ದೇವಾಲಯಕ್ಕೆ ಬಂದು ದರ್ಶನ ಪಡೆದುಕೊಳ್ಳಬಹುದು. ಇಂದು ಸಂಪ್ರದಾಯ ಹಾಗೂ ಧಾರ್ಮಿಕ ಭಾವನೆಗೆ ಅಡಚಣೆಯಾಗದಂತೆ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಗಿದೆ ಎಂದರು.

ವಿವಿಧೆಡೆ ಪೂಜೆ: ಸಾಂಸ್ಕೃತಿಕ ನಗರಿ ಮೈಸೂರಿನ ವಿವಿಧೆಡೆ ಮಂಗಳವಾರ ಸ್ಕಂದ ಷಷ್ಠಿ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ವಿವಿಧೆಡೆ ಇರುವ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯ ಜರುಗಿದವು. ಕೆಆರ್‌ಎಸ್ ರಸ್ತೆಯ ಮಂಟಿಯಲ್ಲಿರುವ ಸ್ನೇಕ್ ಶ್ಯಾಮ್ ಅವರ ಶಿವದತ್ತ ಸಾಯಿಮಂದಿರದ ಸುಬ್ರಹ್ಮಣ್ಯೇಶ್ವರ ದೇವಾಲಯ, ಬನ್ನಿಮಂಟಪದಲ್ಲಿರುವ ಸುಬ್ರಹ್ಮಣ್ಯೇಶ್ವರ ದೇವಾಲಯ, ಹೆಬ್ಬಾಳು ಬಡಾವಣೆ ಸುಬ್ರಹ್ಮಣ್ಯೇಶ್ವರ, ವಿದ್ಯಾರಣ್ಯಪುರಂ, ಒಂಟಿಕೊಪ್ಪಲಿನ ದೇವಾಲಯದ, ದಿವಾನ್ಸ್ ರಸ್ತೆಅಮೃತೇಶ್ವರ ದೇವಾಲಯ ಸೇರಿದಂತೆ ವಿವಿಧೆಡೆ ವಿಶೇಷ ಪೂಜಾ ಕಾರ್ಯ ನಡೆದವು. ಅಲ್ಲದೆ, ವಿವಿಧೆಡೆ ಇರುವ ಹುತ್ತ ಹಾಗೂ ನಾಗರಕಲ್ಲಿಗೂ ಹಾಲೆರೆದು ಭಕ್ತಿಭಾವದಿಂದ ಸ್ಕಂಧ ಷಷ್ಠಿಯನ್ನು ಆಚರಿಸಿದರು.

ಮೈಸೂರು ಜಿಲ್ಲೆಯಲ್ಲಿ 1.45 ಲಕ್ಷ ಮತದಾರರ ಹೆಸರು ಡಿಲೀಟ್

ಮೈಸೂರು,ನ.29(ಎಂಟಿವೈ)– ಮೈಸೂರು ಜಿಲ್ಲೆಯಲ್ಲೂ ಮತದಾರರ ಪಟ್ಟಿಗೆ ಕನ್ನ ಹಾಕುವ ಕೆಲಸ ನಡೆದಿದ್ದು, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ 1,45,908 ಮತದಾರರನ್ನು ಕಾರಣವಿಲ್ಲದೇ ಕೈಬಿಡಲಾಗಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿ ಯಲ್ಲಿ ಸುದ್ದಿಗೋಷ್ಠಿಯಲ್ಲಿ ದಾಖಲೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಬೆಂಗಳೂರಿನ ಮಾದರಿಯಲ್ಲಿಯೇ ಮೈಸೂರಿನಲ್ಲಿಯೂ ಮತದಾರರ ಪಟ್ಟಿಗೆ ಕನ್ನ ಹಾಕಲಾಗಿದೆ. ಮತದಾರರ ಪಟ್ಟಿಯಿಂದ ಹೆಸರು ಕೈ ಬಿಡಬೇಕಾದರೆ ಕಾರಣ ನೀಡಬೇಕು. ವರ್ಗಾವಣೆ, ನಿಧನ, ಡಬ್ಬಲ್ ಎಂಟ್ರಿಯಾಗಿದ್ದರೆ ತೆಗೆಯಲಾಗುತ್ತದೆ. ಆದರೆ ಕಾರಣವನ್ನೇ ನೀಡದೇ ಮತದಾರರ ಪಟ್ಟಿಯಿಂದ ಹೆಸರು ಕೈ ಬಿಡಲಾಗಿದೆ ಇದು ಪ್ರಜಾ ಪ್ರಭುತ್ವ ವ್ಯವಸ್ಥೆಯ ಅಪವಿತ್ರ ಕಾರ್ಯ, ಅಕ್ಷಮ್ಯ ಅಪರಾಧವೂ ಆಗಿದೆ ಎಂದರು.



ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ 18,007, ಚಾಮರಾಜ ಕ್ಷೇತ್ರ 16,242, ಕೃಷ್ಣರಾಜ ಕ್ಷೇತ್ರ 10,604, ಕೆ.ಆರ್.ನಗರ ಕ್ಷೇತ್ರ 17,856, ವರುಣಾ ಕ್ಷೇತ್ರ 11,987, ಟಿ.ನರಸೀಪುರ ಕ್ಷೇತ್ರ 12,367, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 17,847, ಹೆಚ್.ಡಿ.ಕೋಟೆ ಕ್ಷೇತ್ರ 10,479, ಹುಣಸೂರು ಕ್ಷೇತ್ರ 10,220, ಪಿರಿಯಾಪಟ್ಟಣ ಕ್ಷೇತ್ರ –8,570, ನಂಜನಗೂಡು ಕ್ಷೇತ್ರ 11,724 ಮತಗಳು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 1,45,908 ಮತಗಳನ್ನು ಡಿಲೀಟ್ ಮಾಡಲಾಗಿದೆ. ಚುನಾವಣೆಯನ್ನು ವಾಮಮಾರ್ಗದಲ್ಲಿ ಗೆಲ್ಲುವುದಕ್ಕಾಗಿ ಬಿಜೆಪಿಯವರು ಏನನ್ನು ಮಾಡಲಿಕ್ಕೂ ಸಿದ್ಧರಿದ್ದಾರೆ. ದಯಮಾಡಿ ಸಾರ್ವಜನಿಕರು ಮತ ದಾರರ ಪಟ್ಟಿಯಲ್ಲಿ ತಮ್ಮ ಹೆಸರಿ ದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ನಿಯಮಾವಳಿಯಂತೆ 1,20,780 ಮತದಾರರ ಹೆಸರು ಕೈಬಿಡಲಾಗಿದೆ

ಮೈಸೂರು, ನ.28(ಎಸ್‌ಬಿಡಿ)– ಮೈಸೂರು ಜಿಲ್ಲೆಯ ಸುಮಾರು ಒಂದೂವರೆ ಲಕ್ಷ ಮತದಾರರನ್ನು ಪರಿಷ್ಕರಣೆ ವೇಳೆ ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಆರೋಪಿಸಿದ ಬೆನ್ನಲ್ಲೇ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ನಿಖರ ಮಾಹಿತಿ ಪ್ರಕಟಿಸಿದ್ದಾರೆ.



ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಪೂರ್ವಭಾವಿಯಾಗಿ ಆ.3, 12 ಹಾಗೂ ನ.9ರಂದು ರಾಜಕೀಯ ಪಕ್ಷಗಳ ಸಭೆ ನಡೆಸಿ, ಪ್ರಕ್ರಿಯೆ ಸಂಬಂಧ ಸಂಪೂರ್ಣ ವಿವರಣೆ ನೀಡಲಾಗಿದೆ. ಹಾಗೆಯೇ ಜಿಲ್ಲೆಯಲ್ಲಿ ಪುನಾವರ್ತನೆಗೊಂಡ ಪ್ರಕರಣಗಳಲ್ಲಿ ಕಾನೂನುಬದ್ಧವಾಗಿ ಮತದಾರರನ್ನು ಕೈಬಿಡಲಾಗಿದೆ. ಈ ಸಂಬಂಧ ನಮೂನೆ–7ನ್ನು ಪಡೆದುಕೊಂಡು ಸ್ಥಳ ಪರಿಶೀಲನೆ ಹಾಗೂ ಬೂತ್ ಮಟ್ಟದ ಅಧಿಕಾರಿಗಳ ವರದಿ ನಂತರ ಮತದಾರರನ್ನು ಕೈಬಿಡಲಾಗಿದೆ. ಈ ಬಾರಿ ಮತದಾರರ ಪಟ್ಟಿಯಲ್ಲಿ ಒಂದೇ ರೀತಿಯ ಭಾವಚಿತ್ರ ಹಾಗೂ ವಿವರವನ್ನೊಳಗೊಂಡ ಮತದಾರರನ್ನೂ ಪರಿಶೀಲಿಸಿ ಪಟ್ಟಿಯಿಂದ ಕೈಬಿಟ್ಟಿರುವ ಕಾರಣ ಸಂಖ್ಯೆ ಹೆಚ್ಚಾಗಿದೆ. ಈ ಪ್ರಕ್ರಿಯೆ ಅತ್ಯಂತ ಪಾರದರ್ಶಕವಾಗಿ ನಡೆದಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪರಿಷ್ಕರಣೆ ವೇಳೆ ಜಿಲ್ಲೆಯ ಒಟ್ಟು 11 ವಿಧಾನಸಭಾ ಕ್ಷೇತ್ರಗಳಲ್ಲಿ ಮರಣದ ಕಾರಣದಿಂದ 20,440, ಸ್ಥಳಾಂತರದ ಕಾರಣದಿಂದ 16,933, ಪುನರಾವರ್ತನೆ ಕಾರಣದಿಂದ 2,227, ಒಂದೇ ರೀತಿಯ ಭಾವಚಿತ್ರ ಹಾಗೂ ವಿವರವಿರುವ ಪ್ರಕರಣಗಳು 80,930, ಇತರೆ ಕಾರಣಗಳಿಂದ 256 ಸೇರಿ ಒಟ್ಟು 1,20,786 ಮತರಾರರ ಹೆಸರನ್ನು ಕೈಬಿಡಲಾಗಿದೆ. 'ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ–2023'ರ ಹಕ್ಕು ಮತ್ತು ಆಕ್ಷೇಪಣೆಗೆ ಡಿ.8ರವರೆಗೆ ಅವಕಾಶವಿದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಹಾಗೂ ಅರ್ಹ ಮತದಾರರು ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳಲು ಇನ್ನೂ ಅವಕಾಶವಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

ವಿಧಾನಸಭಾ ಕ್ಷೇತ್ರವಾರು ಕೈಬಿಡಲಾಗಿರುವ ಮತದಾರರ ವಿವರ...

ಕ್ಷೇತ್ರ	ಮರಣ ಕಾರಣ	ಸ್ಥಳಾಂತರ ಕಾರಣ	ಪುನರಾವರ್ತನೆ	ಒಂದೇ ಭಾವಚಿತ್ರ	ಇತರೆ ಕಾರಣ	ಒಟ್ಟು
ಪಿರಿಯಾಪಟ್ಟಣ	170	984	63	2111	5	3333
ಕೆ.ಆರ್.ನಗರ	1291	694	45	2953	3	4986
ಹುಣಸೂರು	1270	741	258	4561	5	6835
ಹೆಚ್.ಡಿ.ಕೋಟೆ	1135	793	112	3509	16	5565
ನಂಜನಗೂಡು	3172	1643	281	4810	125	10031
ಚಾಮುಂಡೇಶ್ವರಿ	4491	3045	326	11554	12	19428
ಕೃಷ್ಣರಾಜ	126	816	63	12775	2	13782
ಚಾಮರಾಜ	110	1470	83	12607	1	14271
ನರಸಿಂಹರಾಜ	2316	2557	501	17412	49	22835
ವರುಣ	4408	1457	321	4612	14	10,812
ತಿ.ನರಸೀಪುರ	1951	2733	174	4026	24	8908
ಒಟ್ಟು	**20440**	**16933**	**2227**	**80930**	**256**	**1,20,786**

ಮೆಮೋರಿ ಪವರ್ ಅಂಡ್ ಸ್ಟಡಿ ಟೆಕ್ನಿಕ್ಸ್ ಕಾರ್ಯಾಗಾರ

ಮೈಸೂರು, ನ. 29– ಮೈಸೂರಿನ ಹೋಲಿಸ್ಟಿಕ್ ಸ್ಟೂಡೆಂಟ್ ಟ್ರೈನಿಂಗ್ ಅಕಾಡೆಮಿ ವತಿಯಿಂದ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಕುವೆಂಪು ಪ್ರೌಢಶಾಲೆಯಲ್ಲಿ ಮೆಮೋರಿ ಪವರ್ ಅಂಡ್ ಸ್ಟಡಿ ಟೆಕ್ನಿಕ್ಸ್ ಕಾರ್ಯಾಗಾರವು ಡಿ. 4ರಂದು ಮಧ್ಯಾಹ್ನ 1ರಿಂದ ಸಂಜೆ 4ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿರುವ ಈ ಕಾರ್ಯಾಗಾರಕ್ಕೆ ಉಚಿತ ಪ್ರವೇಶವಿದೆ. ಹೆಚ್ಚಿನ ಮಾಹಿತಿಗಾಗಿ 7204027654 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ಶ್ರದ್ಧಾ ಕೊಲೆ ಆರೋಪಿ ಅಫ್ತಾಬ್‌ಗೆ ಡಿಸೆಂಬರ್ 1ರಂದು ನಾರ್ಕೋ ಪರೀಕ್ಷೆ

ನವದೆಹಲಿ, ನ.29– ದೆಹಲಿಯ ಬುಲಂದ್ ಶಹರ್‌ನಲ್ಲಿ ನಡೆದ ಶ್ರದ್ಧಾ ವಾಕರ್ ಬರ್ಬರ ಹತ್ಯೆ ಪ್ರಕರಣದ ಆರೋಪಿ ಅಫ್ತಾಬ್ ಅಮೀನ್ ಪೂನಾವಾಲಾಗೆ ಡಿಸೆಂಬರ್ 1ರಂದು ರೋಹಿಣಿಯಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ನಾರ್ಕೋ ಪರೀಕ್ಷೆ ನಡೆಸಲು ದೆಹಲಿ ಕೋರ್ಟ್ ಮಂಗಳವಾರ ದೆಹಲಿ ಪೊಲೀಸರಿಗೆ ಅನುಮತಿ ನೀಡಿದೆ ಎಂದು ಆರೋಪಿ ಪರ ವಕೀಲರು ತಿಳಿಸಿದ್ದಾರೆ.

ಡಿ.1 ಮತ್ತು ಡಿ.5ರಂದು ಪೂನಾವಾಲಾನನ್ನು ರೋಹಿಣಿಯಲ್ಲಿರುವ ಎಫ್‌ಎಸ್‌ಎಲ್‌ಗೆ ಕರೆದೊಯ್ಯಲು ಅನುಮತಿ ಕೋರಿ ಪೊಲೀಸರು ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಅದಕ್ಕೆ ಅನುಮತಿ ನೀಡಿದೆ ಎಂದು ಪೂನಾವಾಲಾ ಪರ ವಕೀಲ ಅಬಿನಾಶ್ ಕುಮಾರ್ ಹೇಳಿದ್ದಾರೆ. ಆರೋಪಿಯನ್ನು ಈಗಾಗಲೇ ಪಾಲಿಗ್ರಾಫ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಇನ್ನೂ ಉತ್ತರಸಿಗದ ಕೆಲವು ಪ್ರಶ್ನೆಗಳಿಗೆ ಉತ್ತರ ಪಡೆಯಲು ಪೂನಾವಾಲಾನನ್ನು ನಾರ್ಕೋ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. 28 ವರ್ಷದ ಪೂನಾವಾಲಾ ತನ್ನೊಂದಿಗೆ ಲಿವ್–ಇನ್ ಸಂಬಂಧದಲ್ಲಿದ್ದ ಪ್ರೇಯಸಿ ಶ್ರದ್ಧಾ ವಾಲ್ಕರ್ ಅವರನ್ನು ಕತ್ತು ಹಿಸುಕಿ ಕೊಂದು, ಆಕೆಯ ದೇಹವನ್ನು 35 ತುಂಡುಗಳಾಗಿ ಕತ್ತರಿಸಿದ್ದನು.

ಚಳಿಗಾಲದ ಅಧಿವೇಶನ: ಡಿ.3ರಂದು ಸೋನಿಯಾ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಸಭೆ

ನವದೆಹಲಿ: ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಕಾರ್ಯತಂತ್ರ ರೂಪಿಸಲು ಕಾಂಗ್ರೆಸ್ ಡಿ.3ರಂದು ಸಭೆ ನಡೆಸಲಿದೆ. ಸಂಸತ್ತಿನ ಚಳಿಗಾಲದ ಅಧಿವೇಶನ ಡಿ.7 ರಿಂದ 29ರವರೆಗೆ ನಡೆಯಲಿದೆ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಅಧಿವೇಶನದ ಕಾರ್ಯತಂತ್ರ ಮತ್ತು ಸಮಸ್ಯೆಗಳ ಕುರಿತು ಚರ್ಚಿಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ಕಾಂಗ್ರೆಸ್ ಮತ್ತಿತರ ಪಕ್ಷಗಳು ಬೆಲೆ ಏರಿಕೆ, ನಿರುದ್ಯೋಗ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರಸ್ತಾಪಿಸಲು ಸಜ್ಜಾಗಿವೆ.

ಕೃಷಿಗೆ ಸರ್ಕಾರ ಸಾವಯವ ಗೊಬ್ಬರ ಒದಗಿಸಲಿ

● ಬೇಬಿ ಮಠದ ಶ್ರೀ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಆಗ್ರಹ ● ಪತ್ರಕರ್ತರಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ನ.29(ಪಿಎಂ)–ಕೃಷಿ ಉತ್ಪಾದನೆಯಲ್ಲಿ ರಾಸಾಯನಿಕ ಗೊಬ್ಬರದ ಬಳಕೆ ಹಿನ್ನೆಲೆಯಲ್ಲಿ ನಾವಿಂದು ನಮಗೆ ಅರಿವಿಲ್ಲದೆ, ವಿಷಯುಕ್ತ ಆಹಾರ ಸೇವನೆ ಮಾಡುತ್ತಿದ್ದೇವೆ. ರೈತರಿಗೆ ರಸಾಯನಿಕ ಗೊಬ್ಬರ ಬದಲು ಸಾವಯವ ಗೊಬ್ಬರ ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಒತ್ತು ನೀಡಬೇಕು ಎಂದು ಶ್ರೀರಂಗಪಟ್ಟಣದ ಬೇಬಿ ಮಠದ ಪೀಠಾಧ್ಯಕ್ಷ ಶ್ರೀ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಜಿಲ್ಲಾ ಪತ್ರಕರ್ತರ ಸಂಘ, ದಕ್ಷಿಣ ಕನ್ನಡ ಮತ್ತು ಕರಾವಳಿ ಸಂಘಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ 7ನೇ ಅಂತಾರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಪತ್ರಕರ್ತರಿಗೆ ಮಂಗಳವಾರ ಹಮ್ಮಿಕೊಂಡಿದ್ದ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನೆಯಲ್ಲಿ ಅವರು ಮಾತನಾಡಿದರು.

ನಮ್ಮ ಆಹಾರ ವಿಷಮುಕ್ತಗೊಳ್ಳಬೇಕು (ರಾಸಾಯನಿಕ ಗೊಬ್ಬರ ಮುಕ್ತ). ಈ ದೇಶದ ಜನತೆಯ ಆರೋಗ್ಯ ಮತ್ತು ಬದುಕು ಸಂರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಬೇಕು. ಪ್ರಜೆಗಳಿಗೆ ಒಳ್ಳೆಯ ಆಹಾರ, ಶುದ್ಧ ನೀರು, ಗುಣಮಟ್ಟದ ಶಿಕ್ಷಣ, ಆರೋಗ್ಯ ಕಲ್ಪಿಸಿಕೊಡಲು ಸರ್ಕಾರ ಬದ್ಧತೆ ತೋರಬೇಕು. ಆಗ ಈ ದೇಶ ಭವ್ಯ ಭಾರತವಾಗಿ ಹೊರಹೊಮ್ಮಲಿದೆ. ಸರ್ಕಾರಗಳು ಯಾವ್ಯಾವುದಕ್ಕೊ ಹೆಚ್ಚಿನ ಅನುದಾನ ನೀಡುತ್ತವೆ. ಆದರೆ ಅವೆಲ್ಲಕ್ಕಿಂತ ಕೃಷಿ ಕ್ಷೇತ್ರಕ್ಕೆ ಆದ್ಯತೆ ನೀಡುವುದು ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೃಷಿ ಉತ್ಪನ್ನಗಳಿಗೆ ದರ ದ್ವಿಗುಣಗೊಳಿಸಬೇಕು ಎಂದು ಒತ್ತಾಯಿಸಿದರು.



ಆಯುರ್ವೇದ ನಮ್ಮ ಸಂಸ್ಕೃತಿ. ದೇಶದಲ್ಲಿ 70 ವರ್ಷಗಳ ಹಿಂದೆ ಇಂಗ್ಲಿಷ್ ಮೆಡಿಸಿನ್ ಮುನ್ನೆಲೆಗೆ ಬಂದಿತು. ಅದಕ್ಕೂ ಮುನ್ನ ನಮ್ಮಲ್ಲಿ ಗಿಡಮೂಲಿಕೆ ಬಳಕೆ ಹೆಚ್ಚಿನ ಪ್ರಮಾಣದಲ್ಲಿತ್ತು. ಆಯುರ್ವೇದ ಔಷಧ ಒಂದಿಷ್ಟು ಸಮಯ ಅಪೇಕ್ಷಿಸುತ್ತದೆಯೇ ಹೊರತು ಅಡ್ಡಪರಿಣಾಮ ಉಂಟು ಮಾಡುವುದಿಲ್ಲ. ಕೋವಿಡ್ ಸಂದರ್ಭದಲ್ಲಿ ಕಷಾಯ ಸೇವನೆ, ಯೋಗ ಮತ್ತು ಪ್ರಾಣಾಯಾಮದಲ್ಲಿ ಹೆಚ್ಚು ಜನರು ತೊಡಗಿಸಿಕೊಂಡರು. ಆ ಮೂಲಕ ಸೋಂಕಿನಿಂದ ಪಾರಾದರು. ಬೇರೆ ರಾಷ್ಟ್ರಗಳು ಹಣದಿಂದ ಶ್ರೀಮಂತ ಎನ್ನಿಸಿಕೊಂಡಿದ್ದರೆ, ಭಾರತ ತನ್ನ ಸಂಸ್ಕೃತಿ, ಸಂಸ್ಕಾರ ದಿಂದ ಶ್ರೀಮಂತವಾಗಿದೆ ಎಂದು ತಿಳಿಸಿದರು. ಆಯುರ್ವೇದ ಸಂಸ್ಥೆಗಳು ಸೇವೆ ವಿಸ್ತರಿಸಿ ಆಯು ರ್ವೇದ ಪದ್ಧತಿಯ ಮಹತ್ವ ತಿಳಿಸಬೇಕು. ಪತ್ರಕರ್ತರು ಎಷ್ಟೇ ಕರ್ತವ್ಯದ ಒತ್ತಡವಿದ್ದರೂ ತಮ್ಮ ಆರೋಗ್ಯ ರಕ್ಷಣೆಗೆ ಒತ್ತು ನೀಡಬೇಕು. ಜೊತೆಗೆ ತಮ್ಮ ಕುಟುಂಬಕ್ಕೂ ಸಮಯ ನೀಡಬೇಕು ಎಂದು ಸಲಹೆ ನೀಡಿದರು. ಮೈಸೂರು ಸ್ವಚ್ಛ ನಗರ, ಮೇಯರ್ ಶಿವ ಕುಮಾರ್ ಅವಧಿಯಲ್ಲಿ ನಗರದಲ್ಲಿ ವಾರ್ಡ್‌ವಾರು ಸ್ವಚ್ಛತೆ ಕೆಲಸ ಕಾರ್ಯಗಳು ದ್ವಿಗುಣಗೊಳ್ಳಬೇಕು. ನಾಗರಿಕರಿಗೆ ಸಮರ್ಪಕ ಮೂಲಭೂತ ಸೌಲಭ್ಯ ಕಲ್ಪಿಸಲು ಹೆಚ್ಚಿನ ಆದ್ಯತೆ ನೀಡಬೇಕು. ಆ ಮೂಲಕ ಮೈಸೂರು ವಿಶ್ವದ ಭೂಪಟದಲ್ಲಿ ಪ್ರಖ್ಯಾತಿ ಹೊಂದಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಶಿಬಿರ ಉದ್ಘಾಟಿಸಿದ ಮೇಯರ್ ಶಿವಕುಮಾರ್ ಮಾತನಾಡಿ, ಆಯುರ್ವೇದ ನಮ್ಮ ಪ್ರಾಚೀನ ಕಾಲದ ವೈದ್ಯ ಪದ್ಧತಿ. ಇದು ತನ್ನದೇ ಆದ ವಿಶಿಷ್ಟತೆ ಹೊಂದಿದೆ. ಜೀವನದಲ್ಲಿ ಆಯುರ್ವೇದ ಅಳವಡಿಸಿಕೊಂಡರೆ ರೋಗಗಳು ಬಾರದಂತೆ ತಡೆಯೊಡ್ಡಬಹುದು. ನಮ್ಮ ಆಯುರ್ವೇದದಲ್ಲಿ ಋತುಗಳಿಗೆ ತಕ್ಕಂತೆ ಆಹಾರ ಕ್ರಮಗಳನ್ನು ಸೂಚಿಸಲಾಗಿದೆ. ಇಡೀ ಜಗತ್ತು ಇಂದು ಆಯುರ್ವೇದದತ್ತ ಮುಖ ಮಾಡಿದೆ ಎಂದು ಹೇಳಿದರು.

ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ತಪಾಸಣಾ ಶಿಬಿರ ನಡೆಯಿತು. ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ ತಪಾಸಣೆ, ಇಸಿಜಿ, ಎಕೋ, ಕಣ್ಣಿನ ಪರೀಕ್ಷೆ ಮತ್ತು ದಂತ ಪರೀಕ್ಷೆಗಳನ್ನು ನಡೆಸಲಾಯಿತು. ವೈದ್ಯರಾದ ಡಾ.ಆಂಜನೇಯಮೂರ್ತಿ, ಡಾ.ಗುರುಬಸವರಾಜು ಮತ್ತಿತರ ವೈದ್ಯರ ನೇತೃತ್ವದಲ್ಲಿ ತಪಾಸಣೆ ನಡೆಸಲಾಯಿತು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಒಕ್ಕೂಟದ ಅಧ್ಯಕ್ಷ ಗ್ರೇಷಿಯನ್ ರೋಡ್ರಿಗಸ್, ಕಾರ್ಯದರ್ಶಿ ನಾರಾಯಣ ಹೆಗಡೆ, ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣಶೆಣೈ ಮತ್ತಿತರರು ಹಾಜರಿದ್ದರು.

ಬಾಲಕನ ಬಲಿ ಪಡೆದ ಚಿರತೆ ಹಿಡಿಯುವಲ್ಲಿ ವಿಫಲ

ಅರಣ್ಯ ಇಲಾಖೆ ಮುಂದೆ ರೈತರು, ವಿವಿಧ ಸಂಘಟನೆಗಳ ಪ್ರತಿಭಟನೆ

ತಿ.ನರಸೀಪುರ, ನ.29– ತಾಲೂಕಿನ ಬನ್ನೂರು ಹೋಬಳಿ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಾರ್ವಜನಿಕರ ನಿದ್ದೆಗೆಡಿಸಿ,ಜೀವ ಹಾನಿ ಮಾಡುವ ಮೂಲಕ ಭೀತಿ ಹುಟ್ಟಿಸಿರುವ ಚಿರತೆ ಹಿಡಿಯಲು ಅರಣ್ಯ ಇಲಾಖೆ ಹಾಗೂ ತಾಲೂಕು ಆಡಳಿತ ವಿಫಲವಾಗಿದೆ ಎಂದು ಆರೋಪಿಸಿ ಪಟ್ಟಣದ ವಲಯ ಅರಣ್ಯ ಇಲಾಖೆಯ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.



ಪಟ್ಟಣದ ಕೊಳ್ಳೇಗಾಲ–ಚಾಮರಾಜನಗರ ಮುಖ್ಯರಸ್ತೆಯಲ್ಲಿರುವ ಅರಣ್ಯ ಇಲಾಖೆಯ ಆವರಣದಲ್ಲಿ ಜಮಾವಣೆಗೊಂಡ ರಾಜ್ಯ ರೈತ ಸಂಘ, ಹಸಿರು ಸೇನೆ ತಾಲೂಕು, ದಲಿತ ಸಂಘರ್ಷ ಸಮಿತಿಯ ಸದಸ್ಯರು ಅರಣ್ಯ ಇಲಾಖೆಯ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ವಿವಿಧ ಮಠಗಳ ಮಠಾಧೀಶರ ಸಹಕಾರದೊಂದಿಗೆ ನಡೆದ ಪ್ರತಿಭಟನೆಯಲ್ಲಿ ಚಿರತೆ ಸೆರೆಹಿಡಿಯುವಲ್ಲಿ ವಿಫಲವಾಗಿ ವಿದ್ಯಾರ್ಥಿಯ ಪ್ರಾಣ ಹಾನಿಯಾದ ಘಟನೆಗೆ ತೀವ್ರ ಆಕ್ರೋಶ ವ್ಯಕ್ತವಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಮದ್ದೂರ ಲಿಂಗಯ್ಯನ ಹುಂಡಿ ಮಠದ ಶ್ರೀ ಗೌರಿಶಂಕರ ಸ್ವಾಮೀಜಿ, ವಿದ್ಯಾರ್ಥಿಯನ್ನು ಚಿರತೆ ಬಲಿಪಡೆದು ತಿಂಗಳು ಕಳೆಯುತ್ತಾ ಬಂದಿದ್ದರೂ ಚಿರತೆಯನ್ನು ಬಂಧಿಸದಿರುವುದು ಅರಣ್ಯ ಇಲಾಖೆಯ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಹಾಗಾಗಿ ಅರಣ್ಯ ಇಲಾಖೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಚಿರತೆಯನ್ನು ಸೆರೆ ಹಿಡಿಯಬೇಕು. ಇಲ್ಲವಾದಲ್ಲಿ ಮುಂದೆ ನಡೆಯುವ ಅನಾಹುತಗಳಿಗೆ ಇಲಾಖೆಯನ್ನೇ ನೇರ ಹೊಣೆ ಮಾಡಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ಘಟನೆ ನಡೆದು ತಿಂಗಳು ಕಳೆದರೂ ಸ್ಥಳಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳುವ ಸೌಜನ್ಯ ತೋರಿಸಿಲ್ಲ. ಇದು ಅವರು ಜನರ ಮೇಲಿಟ್ಟಿರುವ ಅಸಡ್ಡೆ ಪ್ರವೃತ್ತಿಯನ್ನು ತೋರಿಸುತ್ತದೆ. ಐಷಾರಾಮಿ ಕಾರು, ಬಂಗಲೆ ಮತ್ತು ಗೂಟದ ಕಾರಿನಲ್ಲಿ ಓಡಾಡುವುದನ್ನು ಬಿಟ್ಟು ಬಡವರ ಕಷ್ಟಗಳ ಕಡೆ ಗಮನಹರಿಸಬೇಕು. ಜನಸೇವೆ ಮಾಡುವ ಇಚ್ಛಾಶಕ್ತಿ ಇಲ್ಲದಿದ್ದಲ್ಲಿ ರಾಜಕೀಯ ಕ್ಷೇತ್ರವನ್ನು ಬಿಟ್ಟು ಅನ್ಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವಂತೆ ಕಿಡಿಕಾರಿದರು.

ತಿಂಗಳಾದರೂ ಚಿರತೆ ಸೆರೆಯಿಲ್ಲ: ಅಧಿಕಾರಿಗಳ ಮೇಲೆ ಆಕ್ರೋಶ

ಘಟನೆ ನಡೆದ ದಿನದಂದು ಅರಣ್ಯ ಇಲಾಖೆಯವರು ವಾರದೊಳಗೆ ಚಿರತೆಯನ್ನು ಹಿಡಿಯಲು ಕಾಲಾವಕಾಶ ತೆಗೆದುಕೊಂಡಿದ್ದರಿ,ಆದರೆ ತಿಂಗಳು ಕಳೆದರೂ ಚಿರತೆ ಸೆರೆ ಹಿಡಿದಿಲ್ಲ ಎಂದು ಅಧಿಕಾರಿಗಳ ಮೇಲೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಅರಣ್ಯ ಇಲಾಖೆ ಜಿಲ್ಲಾ ಅರಣ್ಯ ಅಧಿಕಾರಿಗಳ ಜೊತೆ ಮಾತನಾಡಿ ತುರ್ತು ಸಭೆಯನ್ನು ನಡೆಸಿ ಕಾರ್ಯಾಚರಣೆಯನ್ನು ಕೈಗೊಂಡು ವಾರದೊಳಗೆ ಚಿರತೆಯನ್ನು ಸೆರೆ ಹಿಡಿಯುವಂತೆ ಅಧಿಕಾರಿಗಳಿಗೆ ಆಗ್ರಹಿಸಿದರು. ತಾಲೂಕು ಮಟ್ಟದಲ್ಲಿರುವ ಸಮಸ್ಯೆಯನ್ನು ಜಿಲ್ಲಾ, ರಾಜ್ಯಮಟ್ಟಕ್ಕೆ ತೆಗೆದುಕೊಂಡು ಹೋಗಬೇಡಿ. ಮತ್ತೆ ಜನರಿಂದ ಎಚ್ಚರಿಕೆ ಪಡೆಯಬೇಕಿಲ್ಲ. ಅಧಿಕಾರಿಗಳು ನಿಮ್ಮ ಕೆಲಸ ಸರಿಯಾಗಿ ಮಾಡಿದರೆ ಜನರು ನಿಮ್ಮನ್ನು ದೂಷಿಸುವುದಿಲ್ಲ ಎಂದರು.

> ಮೃತನ ಮರಣೋತ್ತರ ವರದಿ ಬಂದ ತಕ್ಷಣ ಉಳಿದ ಪರಿಹಾರ ಹಣವನ್ನು ಸಂತ್ರಸ್ತ ಕುಟುಂಬಕ್ಕೆ ಒದಗಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಹೆಚ್ಚು ಪರಿಹಾರ ಕೊಡಿಸಿಕೊಡುವ ಬಗ್ಗೆ ಭರವಸೆ ವ್ಯಕ್ತಪಡಿಸಿದರು.
> -ಶಾಸಕ ಎಂ. ಅಶ್ವಿನ್ ಕುಮಾರ್

ಪ್ರತಿಭಟನೆಯಲ್ಲಿ ಷಡಕ್ಷರ ಸ್ವಾಮೀಜಿ, ಕಳ್ಳಿಪುರ ಮಠದ ಚಿದಾನಂದ ಶಿವಾಚಾರ್ಯ ಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ನೆರಗ್ಯಾತನಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ಅಂಗರಪುರ ಮಠದ ಬಸವಲಿಂಗ ಸ್ವಾಮೀಜಿ, ದಸಂಸ ಜಿಲ್ಲಾ ಸಂಚಾಲಕರಾದ ಆಲಗೂಡು ಡಾ.ಚಂದ್ರಶೇಖರ್, ಸೋಸಲೆ ರಾಜಶೇಖರ್, ರಾಜ್ಯರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಪ್ರಧಾನ ಕಾರ್ಯದರ್ಶಿ ಇಮ್ಮಾವು ರವಿ, ಗೌರವಾಧ್ಯಕ್ಷ ಕೆ.ಜಿ. ಶಿವಪ್ರಸಾದ್, ಜಿಲ್ಲಾ ಪ್ರಧಾನಕಾರ್ಯದರ್ಶಿ ಮಂಜು ಕಿರಣ್, ಜಿಲ್ಲಾ ಸಂಚಾಲಕ ಕಳ್ಳೀಪುರ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಪ್ರದೀಪ್, ದಸಂಸ ಕನ್ನಾಯಕನಹಳ್ಳಿ ಮರಿಸ್ವಾಮಿ, ರಾಜು, ತಾಲೂಕು ಸಂಚಾಲಕ ರಾಜು, ಮನೋಜ್, ಮಹೇಶ್, ರಾಜಪ್ಪ, ಕುಮಾರ್, ಸುನಿಲ್, ಚೇತನ್ ಇತರರು ಹಾಜರಿದ್ದರು.

ಕಾಡಾನೆ ದಾಳಿಗೆ ತೆಂಗು ಬೆಳೆ ನಾಶ

ಮಲ್ಲುಂಡಿ, ನ. 29– ಕಾಡಾನೆ ದಾಳಿಗೆ ತೆಂಗು ಬೆಳೆ ನಾಶವಾಗಿರುವ ಘಟನೆ ನಂಜನಗೂಡು ತಾಲೂಕಿನ ಬಳ್ಳೂರಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಎಂಬುವವರಿಗೆ ಸೇರಿರುವ ಜಮೀನಿನಲ್ಲಿ ಸುಮಾರು 50 ಕ್ಕೂ ಹೆಚ್ಚು ತೆಂಗಿನ ಬೆಳೆಯನ್ನು ಸಂಪೂರ್ಣವಾಗಿ ನಾಶ ಮಾಡಿದೆ. ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಮಾತನಾಡಿ, ಈ ಭಾಗದ ರೈತರು ಕಷ್ಟಪಟ್ಟು ಬೆಳೆದ ಫಸಲುಗಳು ಕಾಡಾನೆ ದಾಳಿಯಿಂದ ನಾಶವಾಗಿ ಕಂಗಾಲಾಗಿದ್ದಾರೆ ಎಂದರು.

ಸಾಲ–ಸೋಲ ಮಾಡಿ ಬೆಳೆದ ಫಸಲುಗಳನ್ನು ಕಾಡಾನೆಗಳು ನಾಶ ಮಾಡಿದರೆ ಸಾಲ ತೀರಿಸುವುದಾದರೂ ಹೇಗೆ? ಇದಕ್ಕೆ ಅರಣ್ಯ ಅಧಿಕಾರಿಗಳೇ ಹೊಣೆ. ಇದು 3ನೇ ಬಾರಿ ನಮ್ಮ ಜಮೀನಿಗೆ ನುಗ್ಗಿ ನಾಶ ಮಾಡಿವೇ. ಸುತ್ತ ರೈಲು ಕಂಬಿ ನಿರ್ಮಾಣ ಮಾಡಲಾಗಿದೆ. ಆದರೆ ನಾಗಣಾಪುರ ಗ್ರಾಮದ ಬಳಿ ರೈಲ್ವೆ ಕಂಬ ನಿರ್ಮಾಣ ಮಾಡದೆ ಇರುವುದರಿಂದ ಸುಲಭವಾಗಿ ಕಾಡಾನೆಗಳು ರೈತರ ಜಮೀನಿಗೆ ಲಗ್ಗೆ ಇಟ್ಟು ಫಸಲುಗಳನ್ನು ನಾಶ ಮಾಡುತ್ತಿವೆ. ಸರ್ಕಾರ ಇದರ ಬಗ್ಗೆ ಎಚ್ಚೆತ್ತುಕೊಂಡು ಕಾಡಾನೆಗಳ ಹಾವಳಿಯನ್ನು ತಪ್ಪಿಸಬೇಕು. ತಪ್ಪಿದಲ್ಲಿ ಅರಣ್ಯ ಇಲಾಖೆ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಗ್ಗುಂಡಿ ಸಾರಿಗೆ ಘಟಕದಲ್ಲಿ ಶ್ರೀ ಕನಕದಾಸರ ಜಯಂತಿ

ಪಿರಿಯಾಪಟ್ಟಣ, ನ.29– ತಳ ಸಮುದಾಯಗಳ ವಿರುದ್ಧ ನಡೆಯುತ್ತಿದ್ದ ದೌರ್ಜನ್ಯಗಳ ವಿರುದ್ಧ ಕೀರ್ತನೆಗಳ ಮೂಲಕ ಧ್ವನಿ ಎತ್ತಿದ ಮಹಾನ್ ಸಂತ ಶ್ರೇಷ್ಠ ಕನಕದಾಸರು ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬೆಕ್ಕರೆ ಸತೀಶ್ ಆರಾಧ್ಯ ತಿಳಿಸಿದರು.



ಪಟ್ಟಣದ ಹೊರವಲಯದ ಕಗ್ಗುಂಡಿ ಬಳಿಯ ಸಾರಿಗೆ ಘಟಕದಲ್ಲಿ ನಡೆದ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು, ಕುಲ ಕುಲ ಎಂದು ಹೊಡೆದಾಡದೆ ನಾವೆಲ್ಲರೂ ಒಂದೇ ಎಂಬ ಸಂದೇಶ ಸಾರಿದ ಮಹಾನ್ ಸಂತ ಕನಕದಾಸರು ಎಂದರು.

ಸಾರಿಗೆ ಘಟಕ ವ್ಯವಸ್ಥಾಪಕ ದರ್ಶನ್ ರಾಮಚಂದ್ ಅವರು ಮಾತನಾಡಿ, ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಕೀರ್ತನೆಗಳನ್ನು ರಚಿಸಿ ಮನುಕುಲದ ಉದ್ಧಾರಕ್ಕೆ ಶ್ರಮಿಸಿದ ದಾಸಶ್ರೇಷ್ಠರು ಕನಕದಾಸರು, ಸಮಾಜದಲ್ಲಿದ್ದ ಅಸಮಾನತೆ ಜಾತಿ ಮತ ಕುಲ ಭೇದಭಾವವನ್ನು ಹೋಗಲಾಡಿಸಿ ಸಾಮಾಜಿಕ ಪಿಡುಗುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಗೀತೆಗಳನ್ನು ರಚಿಸಿ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದ ದಾಸಶ್ರೇಷ್ಠರಲ್ಲಿ ಕನಕದಾಸರು ಅಗ್ರಗಣ್ಯರು ಎಂದರು.

ಶ್ರೀ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಬಳಿಕ ಅನ್ನಸಂತರ್ಪಣೆ ನಡೆಯಿತು.

ಈ ಸಂದರ್ಭ ಸಂಚಾರ ನಿರೀಕ್ಷಕರಾದ ಶ್ರೀನಿವಾಸ ರೆಡ್ಡಿ, ಸಹಾಯಕ ಸಂಚಾರ ನಿರೀಕ್ಷಕರಾದ ಪ್ರಶಾಂತರಾಜ್ಯ, ಪಾರುಪತ್ತೆಗಾರ ಗೋವಿಂದ್, ಸಂಚಾರ ನಿಯಂತ್ರಕರಾದ ಶಿವಕುಮಾರ್, ಸಿಬ್ಬಂದಿ ಸಂತೋಷ್, ದೇವರಾಜ್, ವಿಶ್ವ, ಸ್ವಾಮಿ, ಸಂಜಯ್, ಬೀರಪ್ಪ, ಸಣ್ಣೇಗೌಡ, ಗುರಪ್ಪ, ಹರೀಶ್, ಶಿವಶಂಕರಪ್ಪ, ಜಯರಾಮ್, ಕಾಳೇಗೌಡ, ಚಾಲಕ ನಿರ್ವಾಹಕರು ತಾಂತ್ರಿಕ ಹಾಗೂ ಕಚೇರಿ ಸಿಬ್ಬಂದಿ ಇದ್ದರು.

ಯರಹಳ್ಳಿ ಗ್ರಾಮದಲ್ಲಿ ಲಾರ್ವ ಸಮೀಕ್ಷೆ

ಸೊಳ್ಳೆಗಳ ನಿಯಂತ್ರಣದ ಬಗ್ಗೆ ಜಾಗೃತಿ



ಹೆಚ್.ಡಿ.ಕೋಟೆ, ನ.29– ತಾಲೂಕು ಆರೋಗ್ಯಾಧಿಕಾರಿ ಡಾ. ಟಿ.ರವಿಕುಮಾರ್ ತಂಡದವರು ಕೋಟೆ ವ್ಯಾಪ್ತಿಗೆ ಬರುವ ಯರಹಳ್ಳಿ ಗ್ರಾಮದಲ್ಲಿ ಲಾರ್ವ ಸಮೀಕ್ಷೆ ನಡೆಸಿದರು.

ನಂತರ ಮಾತನಾಡಿದ ಅವರು, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರಿಂದ ಪ್ರತಿ ಶುಕ್ರವಾರ ಮತ್ತು ಪ್ರತಿ ಮಂಗಳವಾರ ಹೆಚ್.ಡಿ. ಕೋಟೆ ಮತ್ತು ಹ್ಯಾಂಡ್‌ಪೋಸ್ಟ್ ಟೌನ್‌ನಲ್ಲಿ ಲಾರ್ವ ಸಮೀಕ್ಷೆ ಮಾಡಲಾಗುತ್ತದೆ. ಇದರಿಂದ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು ಮತ್ತು ಸೊಳ್ಳೆಯಿಂದ ಹರಡುವ ಜ್ವರಗಳ ಬಗ್ಗೆ ಜನರಿಗೆ ಆರೋಗ್ಯ ಶಿಕ್ಷಣ ನೀಡಿದಂತಾಗುತ್ತದೆ, ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ಕಾಯಿಲೆಗಳು ಈಡಿಸ್ ಈಜಿಪ್ಟ್ ಎಂಬ ಸೊಳ್ಳೆ ಕಚ್ಚುವುದರಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಈ ಸೊಳ್ಳೆಯು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತದೆ ಎಂದರು.

ರೋಗ ಲಕ್ಷಣಕ್ಕೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುವುದು, ಈ ಸೊಳ್ಳೆಗಳ ನಿಯಂತ್ರಣದಿಂದ ಡೆಂಗ್ಯು ರೋಗದ ಹತೋಟಿ ಸಾಧ್ಯ. ಈ ಸೊಳ್ಳೆಗಳು ಸ್ವಚ್ಛ ನೀರಿನಲ್ಲಿ ಅಂದರೆ ಮನೆಯ ಒಳಗೆ ಹಾಗೂ ಹೊರಗೆ ನೀರನ್ನು ಶೇಖರಿಸುವ ತೊಟ್ಟಿ, ಮಣ್ಣಿನ ಮಡಿಕೆ, ಉಪಯೋಗಿಸದ ಒರಳು ಕಲ್ಲುಗಳು, ಹೂವಿನ ಕುಂಡಗಳು, ತಟ್ಟೆಗಳು, ಬಳಸದ ಟೈರುಗಳು, ಎಳನೀರು ಚಿಪ್ಪುಗಳು, ಒಡೆದ ಬಾಟಲ್‌ಗಳು, ಘನ ತ್ಯಾಜ್ಯ ವಸ್ತುಗಳಲ್ಲಿ ವಾಸಿಸುತ್ತದೆ. ಆದ್ದರಿಂದ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಎಂದರು.

ಮುಂಜಾಗ್ರತಾ ಕ್ರಮಗಳು: ಎಲ್ಲ ನೀರಿನ ತೊಟ್ಟಿಗಳು, ಡ್ರಮ್‌ಗಳ, ಬ್ಯಾರೆಲ್‌ಗಳು, ಏರ್ ಕೂಲರ್, ತೊಟ್ಟಿ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಉಜ್ಜಿ ತೊಳೆದು ಒಣಗಿಸಿ ಮತ್ತೆ ನೀರು ಭರ್ತಿ ಮಾಡಿಕೊಳ್ಳಬೇಕು. ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಟೈರು, ಎಳನೀರಿನ ಚಿಪ್ಪು, ಮರದ ಪೊಟರೆ, ಒಡೆದ ಬಾಟಲಿ, ಕುಡಿದು ಬಿಸಾಡಿದ ಪ್ಲಾಸ್ಟಿಕ್ ಲೋಟ, ಬಾಟಲ್ ಮುಂತಾದವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸಿ ಸೂಕ್ತ ವಿಲೇವಾರಿ ಮಾಡಬೇಕು.

ಸ್ವಯಂ ರಕ್ಷಣಾ ವಿಧಾನಗಳಾದ. ಸೊಳ್ಳೆ ಪರದೆ ಬಳಸುವುದು. ಮೈ ತುಂಬಾ ಬಟ್ಟೆ ಧರಿಸುವುದು. ಆರೋಗ್ಯ ಇಲಾಖೆ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗೇಂದ್ರ, ರವಿರಾಜ್, ಹನುಮಂತ, ಅಶೋಕ, ಸಮುದಾಯ ಆರೋಗ್ಯ ಅಧಿಕಾರಿಗಳಾದ ಸುಷ್ಮಾ ನಾಗಮ್ಮ, ಪ್ರತಾಪ್ ಆಶಾ ಕಾರ್ಯಕರ್ತೆಯರು ಇನ್ನಿತರರು ಹಾಜರಿದ್ದರು.

ದೇಗುಲಗಳ ಜೀರ್ಣೋದ್ಧಾರ ಪುಣ್ಯದ ಕೆಲಸ



ಮೂಗೂರು, ನ. 29– ಐತಿಹಾಸಿಕ ದೇಗುಲಗಳನ್ನು ಜೀರ್ಣೋದ್ಧಾರ ಮಾಡುವುದು ಪುಣ್ಯದ ಕೆಲಸ. ಈ ಮಹತ್ತರ ಕಾರ್ಯವನ್ನು ಶ್ರೀ ತ್ರಿಪುರ ಸುಂದರಿ ಅಮ್ಮನವರ ಸೇವಾ ಸಮಿತಿ ಹಾಗೂ ಭಕ್ತ ದಾನಿಗಳು ನಿರ್ವಹಿಸಲಿದ್ದಾರೆ ಎಂದು ಟ್ರಸ್ಟ್‌ನ ಮುಖ್ಯಸ್ಥರು ಹಾಗೂ ಮೇಲುಕೋಟೆ ಕ್ಷೇತ್ರದ ಶಾಸಕರಾದ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಗ್ರಾಮದ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ದೇಗುಲದ ರಾಜಗೋಪುರದ ಕಳಸ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುರಾತನ ಕಾಲದ ಈ ದೇಗುಲದಲ್ಲಿ ಗಾರೆಯಿಂದ ಮಾಡಿದ ಕಳಸವು ಶಿಥಿಲಗೊಂಡು ಹಾಳಾಗಿರುವುದರಿಂದ ಅಮ್ಮನವರ ಅನುಗ್ರಹದಿಂದ ಟ್ರಸ್ಟ್ ಹಾಗೂ ದಾನಿಗಳ ಸಹಕಾರದೊಂದಿಗೆ ಹಂತ ಹಂತವಾಗಿ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ ಅವರನ್ನು ಸನ್ಮಾನಿಸಲಾಯಿತು. 4 ಸಾವಿರ ಭಕ್ತರಿಗೆ ದೇವಿ ಎಲೆಕ್ಟ್ರಾನಿಕ್ಸ್ ನ ಮಾಲೀಕ ಹರೀಶ್ ಪ್ರಸಾದ ವಿನಿಯೋಗ ಮಾಡಿದರು.

ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖಂಡ ಎಂ.ಡಿ. ಬಸವರಾಜು, ಎಂ.ಬಿ.ಸಾಗರ್, ಧರಣೇಶ್, ಶಿವಲಿಂಗಯ್ಯ, ಜವರೇಗೌಡ, ಧನಂಜಯ, ತಿಬ್ಬಣ್ಣ, ಗೌಡರ ಎಂ.ಪಿ. ನಾಗರಾಜು, ಮರಿಸ್ವಾಮಿ, ಎಂ ಬಿ ಮಹೇಂದ್ರ ಕುಮಾರ್, (ಬಾನು) ಮನು, ಅರ್ಚಕ ಸುಬ್ರಹ್ಮಣ್ಯ, ಅಜೇಯ್ ಶಾಸ್ತ್ರಿ, ಆನಂದ್ ದೀಕ್ಷಿತ್, ವತ್ಸ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾನವತಾ ಪ್ರಶಸ್ತಿಗೆ ಬೀರ್ವಾಳು ಚಿಕ್ಕಣ್ಣ ಆಯ್ಕೆ

ಸರಗೂರು, ನ. 29– ಸಮಾಜ ಸೇವೆ, ಕಾನೂನು ಅರಿವು ಕಾರ್ಯಕ್ರಮಗಳು, ಕೋವಿಡ್ 19ರ ಸಂದರ್ಭದಲ್ಲಿ ಕೋವಿಡ್ ಕುರಿತು ಜಾಗೃತಿ ಮೂಡಿಸಿರುವುದು, ಸಂತ್ರಸ್ತರಿಗೆ ಆಹಾರ ಸಾಮಗ್ರಿಗಳು, ಮಾಸ್ಕ್, ಸ್ಯಾನಿಟೈಸರ್, ಇನ್ನಿತರ ಸಂಕಷ್ಟಕ್ಕೆ ನಿಸ್ವಾರ್ಥವಾಗಿ ಸೇವೆ ಮಾಡಿರುವುದನ್ನು ಪರಿಗಣಿಸಿ, ರಾಷ್ಟ್ರೀಯ ಮಾನವತಾ ಪ್ರಶಸ್ತಿಗೆ ಸರಗೂರು ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ಸಂಘಟನೆ, ಬೀರ್ವಾಳ್ ಚಿಕ್ಕಣ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಡಿ. 10ರಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರು ನಗರದ ಆನಂದ್ ರಾವ್ ವೃತ್ತದಲ್ಲಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ರಾಷ್ಟ್ರೀಯ ಅಧ್ಯಕ್ಷ ಮೋಹನ್ ರಾವ್ ನಲವಡು ತಿಳಿಸಿದ್ದಾರೆ.

ರಾಮನಾಥಪುರದಲ್ಲಿ ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ ವೈಭವದ ರಥೋತ್ಸವ

ರಾಮನಾಥಪುರ, ನ. 29– ಮೈಸೂರು ಮತ್ತು ಹಾಸನ ಗಡಿ ಭಾಗದಲ್ಲಿರುವ ರಾಮನಾಥಪುರದಲ್ಲಿ ಇಂದು ಶ್ರೀ ಪ್ರಸನ್ನ ಸುಬ್ರಹ್ಮಣ್ಯ ಸ್ವಾಮಿ ಬ್ರಹ್ಮ ರಥೋತ್ಸವ ಅದ್ಧೂರಿಯಾಗಿ ನೆರವೇರಿತು.

ಸಾವಿರಾರು ಭಕ್ತರು ಕಾವೇರಿ ನದಿಯಲ್ಲಿ ಸ್ನಾನ ಮಾಡಿ ನಂತರ ದೇವಾಲಯದ ಮುಂಭಾಗದಲ್ಲಿ ನಾಗದೇವತೆಯ ಸ್ಮರಿಸುತ್ತಾ ನಾಗರಸಡೆ ಮತ್ತು ಇತರ ಹರಕೆ ತೀರಿಸಿ ಭಕ್ತಿಯಿಂದ ತಮ್ಮ ಇಷ್ಟಾರ್ಥವನ್ನು ನೆರವೇರಿಸುವಂತೆ ಕೇಳಿಕೊಂಡರು.

ಅದರಲ್ಲೂ ಮಹಿಳೆಯರು ಮತ್ತು ಮಕ್ಕಳು ಇಂದಿನ ರಥೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬೆಳಿಗ್ಗೆ ವಿವಿಧ ರೀತಿಯ ಪೂಜೆ ಹವನಗಳು ನೆರವೇರಿದವು. ನಂತರ ರಥದ ಮೇಲೆ ಶ್ರೀ ಪ್ರಸನ್ನ ಸುಬ್ರಮಣ್ಯ ಸ್ವಾಮಿ ಅವರನ್ನು ಕೂರಿಸಿ ಸಾವಿರಾರು ಜನರ ಜಯಘೋಷಗಳೊಂದಿಗೆ 12 ಗಂಟೆಗೆ ಶುಭ ಲಗ್ನದಲ್ಲಿ ರಥೋತ್ಸವವನ್ನು ಎಳೆಯಲಾಯಿತು.

ಈ ಸಂದರ್ಭದಲ್ಲಿ ಹಲವಾರು ರಾಜಕೀಯ ಪಕ್ಷದ ಮುಖಂಡರು ಹಾಗೂ ನಾಯಕರು ಪಾಲ್ಗೊಂಡಿದ್ದರು. ರಥೋತ್ಸವದ ಅಂಗವಾಗಿ ಕೊಣನೂರು ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಕ್ರೀಡೆಯಲ್ಲಿ ಸೋಲು–ಗೆಲುವನ್ನು ಸಮನಾಗಿ ಕಾಣಬೇಕು



ನಂಜನಗೂಡು, ನ.29– ಕ್ರೀಡೆಯಲ್ಲಿ ಸೋಲು ಮತ್ತು ಗೆಲುವು ಎರಡನ್ನೂ ಸಮನಾಗಿ ಕಾಣಬೇಕು ಎಂದು ಕ್ರೀಡಾಪಟುಗಳಿಗೆ ರೇಷ್ಮೆ ,ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ಕಿವಿಮಾತು ಹೇಳಿದರು.

ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಸೋಮವಾರ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣೆಯ ಅಂಗವಾಗಿ ನಡೆದ 3 ದಿನಗಳ ಜೆಎಸ್ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಿರುವ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಕಾರ್ಯ ಶ್ಲಾಘನೀಯ, ಸಂಸ್ಥೆ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಒತ್ತು ನೀಡುತ್ತಾ ಬಂದಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವ ನೀವೇ ಭಾಗ್ಯಶಾಲಿಗಳು, ಈ ದಿನಗಳು ನಿಮ್ಮ ಭವಿಷ್ಯದ ದಿನಗಳಲ್ಲಿ ಅವಿಸ್ಮರಣೀಯ ದಿನಗಳಾಗುತ್ತವೆ. ಸಂಸ್ಥೆಯು ಅನೇಕ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ,ಸರ್ಕಾರವೂ ಸಹ ಕ್ರೀಡಾಪಟುಗಳಿಗೆ ವಿಶೇಷವಾಗಿ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ಶಾಸಕ ಡಾ. ಯತೀಂದ್ರ ಮಾತನಾಡಿ, ಕ್ರೀಡಾಕೂಟ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಕ್ರೀಡೆ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣವನ್ನು ಬೆಳೆಸುತ್ತದೆ ಎಂದು ಹೇಳಿದರು.

3 ದಿನಗಳ ಕ್ರೀಡಾಕೂಟದಲ್ಲಿ ಸುಮಾರು 3316 ವಿದ್ಯಾರ್ಥಿಗಳು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಮಾತನಾಡಿ, ಸಂಸ್ಥೆಯು ವಿದ್ಯಾರ್ಥಿಗಳ ಪಾಲಿಗೆ ಆಲದ ಮರದಂತಿದ್ದು, ವಿದ್ಯಾರ್ಥಿಗಳಿಗೆ ಆಶ್ರಯವನ್ನು ನೀಡಿ ಪೋಷಿಸುತ್ತಿದೆ, ಪಥಸಂಚಲನದಲ್ಲಿ ಶಿಸ್ತಿನ ಸಿಪಾಯಿಗಳಂತೆ ಹೆಜ್ಜೆ ಹಾಕುವ ವಿದ್ಯಾರ್ಥಿಗಳನ್ನು ನೋಡುವುದೇ ಒಂದು ಚೆಂದ, ಆಟ ಆಡುವುದರಿಂದ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ಸಿಗುತ್ತದೆ. ಸುತ್ತೂರು ಶ್ರೀಗಳು ಕರ್ನಾಟಕದ ಆಸ್ತಿ ಅವರ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮಗಳೂ ಅಚ್ಚುಕಟ್ಟಾಗಿರುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳ ಪರವಾಗಿ ನಾರ್ವೆ ಜೆಎಸ್ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಕು. ಚೈತನ್ಯ ಹಾಗೂ ಕ್ರೀಡಾಧಿಕಾರಿಗಳ ಪರವಾಗಿ ದೈಹಿಕ ಶಿಕ್ಷಣ ಶಿಕ್ಷಕ ಬಿ.ಜಿ. ಪೂಜಾರ್ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಕಿರಿಯ ಶ್ರೀ ಜಯರಾಜೇಂದ್ರಸ್ವಾಮೀಜಿ, ಎಸ್. ಪಿ. ಮಂಜುನಾಥ್, ಎಸ್. ಶಿವಕುಮಾರಸ್ವಾಮಿ, ಎಸ್. ಪಿ. ಉದಯಶಂಕರ್, ಕಾಂಗ್ರೆಸ್ ಮುಖಂಡ ಎಸ್.ಸಿ. ಬಸವರಾಜು, ಮೈಸೂರಿನ ವಿದ್ಯಾವರ್ಧಕ ಸಂಸ್ಥೆಗಳ ಅಧ್ಯಕ್ಷ ಗುಂಡಪ್ಪಗೌಡ, ವಿಶ್ವನಾಥ್, ಕ್ರೀಡಾಕೂಟದ ಸಂಚಾಲಕ ಸಂಪತ್ತು ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.20ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ಕಾಂತಾರ (ಕ): ಮ.1.05ಕ್ಕೆ
ಸ್ಕ್ರೀನ್ 2	ಸ್ಟ್ರೇಂಜ್ ವರ್ಲ್ಡ್ (3ಡಿ)(ಇಂ): ಬೆ.11ಕ್ಕೆ, ಸಂ.4.30ಕ್ಕೆ, ರೇಮೊ (ಕ): ಮ.1.20ಕ್ಕೆ, ಕಾಂತಾರ (ಕ): ರಾ.7ಕ್ಕೆ, ಸದ್ದು ವಿಚಾರಣೆ ನಡೆಯುತ್ತಿದೆ (ಕ): ರಾ.9.55ಕ್ಕೆ
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.11.10ಕ್ಕೆ, ಏಜೆಂಟ್ ಕನ್ನೈರಾಮ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.05ಕ್ಕೆ, ದೃಶ್ಯಂ–2 (ಹಿಂ): ರಾ.7.10ಕ್ಕೆ, ಮಸೂದ (ತೆ): ರಾ.10ಕ್ಕೆ.
ಸ್ಕ್ರೀನ್ 4	ಭೇದಿಯಾ (3ಡಿ)(ಹಿಂ): ಬೆ.10ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಭೇದಿಯಾ (3ಡಿ)(ಹಿಂ): ಬೆ.9.50ಕ್ಕೆ, ಮ.1ಕ್ಕೆ, ಮ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ತ್ರಿಬಲ್ ರೈಡಿಂಗ್ (ಕ): ಬೆ.9.55ಕ್ಕೆ, ಕಾಂತಾರ (ಕ): ಮ.1.05ಕ್ಕೆ, ರಾ.7.15ಕ್ಕೆ, ಇಟ್ಲು ಮರೆದುಮಿಲ್ಲಿ ಪ್ರಜಾನೀಕಂ (ತೆ): ಸಂ.4.10ಕ್ಕೆ, ದೃಶ್ಯಂ–2 (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ರೇಮೊ (ಕ): ಬೆ.10.30ಕ್ಕೆ, ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.4.50ಕ್ಕೆ, ಕಾಂತಾರ (ಕ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.35ಕ್ಕೆ, ದೃಶ್ಯಂ–2 (ಹಿಂ): ಮ.1.40ಕ್ಕೆ, ತ್ರಿಬಲ್ ರೈಡಿಂಗ್ (ಕ): ಸಂ.4.35ಕ್ಕೆ, ರಾ.10.10ಕ್ಕೆ, ಸ್ಟ್ರೇಂಜ್ ವರ್ಲ್ಡ್ (3ಡಿ)(ಹಿಂ): ರಾ.7.45ಕ್ಕೆ,

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಾರಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೇದಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮ್ಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ರೆಮೋ (ಕ)	4 ಪ್ರದರ್ಶನಗಳು
ಲಿಡೋ	
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ವಾಹನಗಳ ಬಹಿರಂಗ ಹರಾಜು

ಹೆಚ್.ಡಿ.ಕೋಟೆ, ನ.29– ಅಬಕಾರಿ ಇಲಾಖೆ ವಶಪಡಿಸಿಕೊಂಡ ವಾಹನಗಳ ಬಹಿರಂಗ ಹರಾಜು ಡಿ.13ರಂದು ನಡೆಯಲಿದೆ ಎಂದು ಅಬಕಾರಿ ವಲಯ ನಿರೀಕ್ಷಕಿ ಯು.ವಿ.ಗೀತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತಾಲೂಕಿನ ಅಬಕಾರಿ ಕಚೇರಿಯಲ್ಲಿ ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡು ಮುಟ್ಟುಗೋಲು ಹಾಕಿಕೊಂಡಿರುವ 18 ವಾಹನಗಳ ಬಹಿರಂಗ ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ. ಆಸಕ್ತರು ಡಿ.3 ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣ ವಲಯ ಕಚೇರಿ ಆವರಣದಲ್ಲಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ತಿಳಿಸಿದ್ದಾರೆ.

ಮೈಸೂರು ಚಳಿಗಾಲದ ರೇಸುಗಳು



3ನೇ ದಿನ, ಬುಧವಾರ 30–11–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಸಹ್ಯಾದ್ರಿ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಸೆವೆಂತ್ ಸ್ಟಾರ್ 2. ಮೈ ಒನ್ ಅಂಡ್ ಓನ್ಲಿ 3. ಸರ್‌ಪ್ರೈಸ್ ಪ್ಯಾಕೇಜ್

II. ಗೋಣಿಕೊಪ್ಪ ಪ್ಲೇಟ್–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.2.30ಕ್ಕೆ
1 ಕವಾರೋಜ್ಜಿ 2. ಫ್ಲಾಷ್ ಬಾಂಡ್

III. ರಿನೋವ್‌ಡ್ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ಶಿವಾಲಿಕ್ ಆ್ಯಟಿಟ್ಯೂಡ್ 2 ಬಚ್ಚೋಸ್ 3. ಮಿಸ್ ಚೈನಾ

IV. ಕ್ರೌನ್ ಟ್ರೆಷರ್ ಪ್ಲೇಟ್ –1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಕುಶಾಕ್ 2. ಗಯಾಮಾ 3. ಹೀರೋ ಡೊಟ್ಸ್

V. ಪಿ.ಎಂ.ಚೆನ್ನಬಸವಣ್ಣ ಮೆಮೋರಿಯಲ್ ಟ್ರೋಫಿ 2 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಕೋಲಾ 2. ಕ್ವೀನ್ ಸ್ಟಾರ್ 3. ಡೇ ಆಫ್ ಕೊಮ್ ಬ್ಯಾಟ್

VI. ಬಂಡೀಪುರ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸ್ಮಾರ್ಟ್ ಕ್ಯಾಡಿಲಾಕ್ 2. ಮುಟಾಂಟ್ 3. ಸರ್ ಕಾಲ್‌ಕ್ಯೂಲಸ್

VII. ಸಕಲೇಶಪುರ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸಫೀನಾ 2. ವಿಂಡ್ ವಿಶಲರ್ 3. ತರಾಕ್

ದಿನದ ಅತ್ಯುತ್ತಮ	: ಕೋಲಾ
ಡಬ್ಬಲ್	: ಶಿವಾಲಿಕ್ ಆ್ಯಟಿಟ್ಯೂಡ್, ಸ್ಮಾರ್ಟ್ ಕ್ಯಾಡಿಲಾಕ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹಸಿರು ನಮ್ಮ ಉಸಿರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಂಖ್ಯೆ:ಮೈನಪ್ರಾ/ವಿತ/ವಲಯ–2/2022–23 ದಿನಾಂಕ: 19–11–2022

ಪತ್ರಿಕಾ ಪ್ರಕಟಣೆ

ಶ್ರೀ ಎಂ.ಪಿ.ಸುದರ್ಶನ್ ಬಿನ್ ಲೇಟ್ ಎಂ.ಎಸ್.ಪ್ರಾಕಾಶ್ ರಾವ್, ಮನೆ ನಂ. 362/1, 1ನೇ ಹಂತ, ವಿಶ್ವೇಶ್ವರ ನಗರ, ಮೈಸೂರು – 08 ಇವರಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯಿಂದ ಶ್ರೀರಾಂಪುರ 1ನೇ ಹಂತ, (ವಿವೇಕಾನಂದ ಸರ್ಕಲ್) ಬಡಾವಣೆ ಹರಾಜು ಮಳಿಗೆ ಸಂ.02 ಅಳತೆ 3.90 × 7.20 = 28.08 ಚದರ ಮೀಟರ್‌ಗಳು ದಿನಾಂಕ: 04–06–1991 ರಂದು ಮಂಜೂರಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ. ಎಂ.ಪಿ.ಸುದರ್ಶನ್ ರವರು ಕ್ರಯಪತ್ರ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದುದರಿಂದ ಸದರಿ ಮಳಿಗೆಯ ಕ್ರಯಪತ್ರ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗಧಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ – 2
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗೆ ಕಾಣಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಬೆಂಗಳೂರು ಸಿಟಿ, ರಾಮಮೂರ್ತಿ ನಗರ, ದೂರವಾಣಿನಗರ, ದಾಸಪ್ಪ ಬಡಾವಣೆ, 3ನೇ ಕ್ರಾಸ್, 3ನೇ ಲೈನ್, ಮನೆ ನಂ 16, "ಶ್ರೀ ಸೂರ್ಯ ಲಕ್ಷ್ಮಿ ನಿಲಯ" ಎಂಬ ನಾಮಾಂಕಿತ ಮನೆಯಲ್ಲಿ ಹಾಲಿ ವಾಸವಾಗಿರುವ ಶ್ರೀ ಕೆ.ಎನ್. ದಿವಾಕರ್‌ರವರ ಧರ್ಮಪತ್ನಿಯಾದ ಶ್ರೀಮತಿ ಗೀತಮ್ಮ ರವರಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಕೊಂಡುಕೊಳ್ಳಲು ಇಚ್ಛಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತನ್ನು ಹಾಲಿ ಮಾರಾಟಗಾರರಾದ ಶ್ರೀಮತಿ ಗೀತಮ್ಮರವರು ದಿನಾಂಕ 22.10.2012ರಂದು ನೋಂದಾಯಿತ ಶುದ್ಧಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ನೋಂದಾಯಿತ ಶುದ್ಧಕ್ರಯ ಪತ್ರವು ಗುಂಡ್ಲುಪೇಟೆ ಉಪ ನೋಂದಣಾಧಿಕಾರಿರವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ GUN–1–02931/2012–13 ಆಗಿ ಸಿ.ಡಿ.ನಂಬರ್ GUND62 ರಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ. ಈ ರೀತಿಯಾಗಿ ಹಾಲಿ ಮಾರಾಟಗಾರರಾದ ಶ್ರೀಮತಿ ಗೀತಮ್ಮರವರು ಮಾಲೀಕರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೇ ಬೇರೆ ಯಾರಿಗಾದರು/ ಇತರೆ ಯಾವುದೇ ರೀತಿಯ ಕಾನೂನುಬದ್ಧ ಹಕ್ಕು ವಗೈರು ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ ಹತ್ತು ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಸಂಪರ್ಕಿಸಿ ದಾಖಲಾತಿಗಳೊಂದಿಗೆ ತಕರಾರನ್ನು ಸಲ್ಲಿಸತಕ್ಕದ್ದು. ಅನಂತರ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಹಕ್ಕುಗಳು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕುಗಳು/ಆಕ್ಷೇಪಣೆಗಳು ಇಲ್ಲವೆಂದು ಮತ್ತು ಹಾಲೀ ಮಾರಾಟಗಾರರನ್ನು ಷೆಡ್ಯೂಲ್ ಸ್ವತ್ತಿನ ಮಾಲೀಕರೆಂದು ಪರಿಗಣಿಸಿ ಕೆಳಗೆ ತಿಳಿಸಿದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತು

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಸೋಮಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 240/2 ಇದರ ವಿಸ್ತೀರ್ಣ ಒಟ್ಟು ವಿಸ್ತೀರ್ಣ 3 ಎಕರೆ 23 ಗುಂಟೆ ಖುಷ್ಕಿ ಜಮೀನಿನ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಓಣಿ, ಪಶ್ಚಿಮಕ್ಕೆ: ಗಂಗಾಧರಸ್ವಾಮಿರವರ ಜಮೀನು ಪಾರ್ವತಮ್ಮರವರ ಜಮೀನು, ಉತ್ತರಕ್ಕೆ: ಪಾರ್ವತಮ್ಮ ರವರ ಜಮೀನು, ದಕ್ಷಿಣಕ್ಕೆ: ನೀರು ಹರಿಯುವ ಹಳ್ಳ, ಈ ಮಧ್ಯೆ ಇರುವ 3 ಎಕರೆ 23 ಗುಂಟೆ ಖುಷ್ಕಿ ಜಮೀನು.

ಸಹಿ/– ಬಿ.ಎಸ್. ಶಿವಕುಮಾರ್ ವಕೀಲರು
ನಂ. 518/2, 1ನೇ ಮಹಡಿ, ಪ್ರಗತಿ ಮೆಡಿಕಲ್ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಮೈಸೂರು – 04,
ಮೊ ನಂ. 94480 69586, 93433 69586

ದಿನಾಂಕ: 28.11.2022
ಸ್ಥಳ: ಮೈಸೂರು

ಸ್ಥಾಪನೆ : 1916

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

ಶ್ರೀ ಹರ್ಷ ರಸ್ತೆ, ಮೈಸೂರು – 570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಮೋಹನಕುಮಾರಿ W/o ಮಹದೇವ 632930	800000	1500000	13.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ಚೆಟ್ಟಿಬೀದಿ, 2ನೇ ಕ್ರಾಸ್, ಮನೆ ನಂ. 195/1ಎ, ಪೂ+ಪ 12.6 ಅಡಿ, ದಕ್ಷಿಣೋತ್ತರ 23.6 ಅಡಿ, ಪೂ – ಮನೆ ನಂ 195/1ಎ ರ ಉಳಿಕೆ ಸ್ವತ್ತು ಪ – ತಿಮ್ಮಣ್ಣರವರ ಸ್ವತ್ತು ಉ– ರಸ್ತೆ, ದ– ಮಾಕಯ್ಯನವರ ಮನೆ
2	ಎಂ. ನಾಗರಾಜು S/o ಮಹದೇವ 632922	1170000	2400000	14.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ನಜರ್‌ಬಾದ್ ಮೊಹಲ್ಲಾ, ಅಟ್ಟಿಗೆ ಗೂಡು, ಹೊಸಬೀದಿ 1202/1, ಪೂ+ಪ 13.6 ಅಡಿ, ದ+ಉ 27.6 ಅಡಿ, ಪೂ – ರಂಗಸ್ವಾಮಿರವರ ಮನೆ, ಪ– ಗೋಪಾಲರ ಮನೆ, ಉ – ಹೊಸಬೀದಿ, ದ– ಸುಶೀಲರವರ ಮನೆ.
3	ಟಿ.ಹೇಮಾವತಿ W/o ಎಂ.ಶ್ರೀನಿವಾಸ 632951	3700000	9800000	15.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ಕುರುಬಾರಳ್ಳಿ 4ನೇ ಕ್ರಾಸ್, ಮನೆ ನಂ. 45, ಪೂ+ಪ 50 ಅಡಿ, ದ+ಉ 30 ಅಡಿ, ಪೂ– ಚಿಕ್ಕಯ್ಯರವರ ಮನೆ, ಪ – ರಸ್ತೆ, ಉ – ರಸ್ತೆ, ದ– ಹುಚ್ಚಮ್ಮರವರ ಮನೆ.
4	ಸಿ.ಅಶ್ವಥ್ ನಾರಾಯಣ W/o ಚಲುವಪ್ಪ 632845	1200000	1600000	16.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಮಂಡಿ ಮೊಹಲ್ಲಾ, ತಿಲಕನಗರ, 11ನೇ ಕ್ರಾಸ್, ಮನೆ ನಂ. 3732/ಎ, ಪೂ+ಪ 8 ಅಡಿ, ದ+ಉ 45 ಅಡಿ, ಪೂ – ಖಾಸಗಿ ಸ್ವತ್ತು, ಪ – ಖಾಸಗಿ ಸ್ವತ್ತು, ಪ– ಸ್ವತ್ತಿನ ಸಂಖ್ಯೆ 756, ಉ– ರಸ್ತೆ, ದ – ಗಲ್ಲಿ.
5	ಸುಚಿತ್ರ ಗಿರೀಶ್ W/o ಗಿರೀಶ್ ಆರ್ ಗೌಡ 632961	3950000	1100000	17.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಸಿಹೆಚ್ ಮೊಹಲ್ಲಾ, ಟಿ.ಕೆ ಬಡಾವಣೆ, 12ನೇ ಮೇನ್, 8ನೇ ಕ್ರಾಸ್, ಮನೆ ನಂ. 757, ಪೂ+ಪ 40 ಅಡಿ, ದ + ಉ 60 ಅಡಿ, ಪೂ–ಸ್ವತ್ತಿನ ಸಂಖ್ಯೆ 758, ಪ– ಸ್ವತ್ತಿನ ಸಂಖ್ಯೆ 756, ಉ – ರಸ್ತೆ, ದ– ಸ್ವತ್ತಿನ ಸಂಖ್ಯೆ 774
6	ಎಸ್.ಶಾಲಿನಿ W/o ಜಿ.ಶ್ರೀಕಾಂತ 632959	2650000	5700000	19.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ವಿದ್ಯಾರಣ್ಯಪುರಂ, 1ನೇ ಹಂತ ಲಿಂಗಾಯಿತ ಸ್ಮಶಾನದ ದಕ್ಷಿಣಕ್ಕೆ ಮನೆ ನಂ. 32, ಪೂ + ಪ 30+23/2, ದ+ಉ 45 ಅಡಿ, ಪೂ– ಎಂ.ಸಿ.ಸಿ. ಜಾಗ, ಪ – ರಸ್ತೆ, ಉ – ಸ್ವತ್ತಿನ ಸಂಖ್ಯೆ 31, ಪ–ಸ್ವತ್ತಿನ ಸಂಖ್ಯೆ – 33
7	ಖಾಸಿಂ ಷರೀಫ್ S/o ಹುಸೇನ್ ಷರೀಫ್ 632958	2000000	3000000	20.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಲಷ್ಕರ್ ಮೊಹಲ್ಲಾ ಅಶೋಕ ರಸ್ತೆ, ಪಶ್ಚಿಮದ 19ನೇ ಕ್ರಾಸ್, ಮನೆ ನಂ. 2150, ಎಲ್–27, ಪೂ+ಪ 12.6 ಅಡಿ, ದ+ಉ 24.9 ಅಡಿ, ಪೂ– ಖಾಸಗಿ ಸ್ವತ್ತು, ಪ–ದಾವೂದ್ ಖಾನ್ ಮನೆ, ಉ– ಖಾಸಗಿ ಸ್ವತ್ತು, ದ – ರಸ್ತೆ.
8	ಜಾಕಿರಾ ಬೇಗಂ W/o ಜಿಯಾಉರ್ ರೆಹಮಾನ್ 632653	750000	6500000	21.12.2022 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಲಷ್ಕರ್ ಮೊಹಲ್ಲಾ ಅಶೋಕ ರಸ್ತೆ ಪಶ್ಚಿಮದ 21ನೇ ಕ್ರಾಸ್, ಕಾಂತರಾಜ್ ಪಾರ್ಕ್ ಹತ್ತಿರ, ಮನೆ ನಂ. 2566/1, ಎಲ್14/1, ಪೂ+ಪ 66 ಅಡಿ, ದ+ಉ 30 ಅಡಿ, ಪೂ– ರಸ್ತೆ, ಪ– ರಿಯಾಜ್ – ಉರ್– ರೆಹಮಾನ್ ಖಾನ್ ಆಸ್ತಿ, ಉ – ಗಲ್ಲಿ, ದ – ಖಾಸಗಿ ಸ್ವತ್ತು.

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಾಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ, ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829
ದಿನಾಂಕ: 29/12/2022, ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀಮಾನ್ ಸಿದ್ದಯ್ಯನವರು
(ನಿವೃತ್ತ ಕ.ವಿ.ಮಂ)
ಜನನ : 05.06.1931 ನಿಧನ : 30.11.2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ನೀವು ತೋರಿದ ದಾರಿ – ನಮ್ಮ ಜೀವನದ ಗುರಿ

